
ಸಾಹಿತ್ಯ ದಾಸೋಹ – 244

ಸಂಚಿಕೆ 68 – ಜನವರಿ 2026 – 21.12.2025ರ ದಾಸೋಹದ ಬರಹಗಳ ಸಂಕಲನ



ಪಾ. ರಾಜಗೋಪಾಲ – ನೆನಪು, ನುಡಿ ನಮನ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ...

ನಮ್ಮ ಮಾತು

ಆತ್ಮೀಯರೆ,

೩೧, ಡಿಸೆಂಬರ್ ೨೦೨೫ರ ಮುಂಜಾನೆಯೇ ಸಮನ್ವಯ ಸಮಿತಿಯ ಸದಸ್ಯರಿಗೆಲ್ಲ ಆಘಾತದ ಸುದ್ದಿ, ಪಾ.ರಾಜಗೋಪಾಲ ಇನ್ನಿಲ್ಲ. ಸುಮಾರು ೪೭ ವರ್ಷಗಳ ಹಿಂದೆ ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘವನ್ನು, ಸಮನ್ವಯ ಸಮಿತಿಯನ್ನು ಸ್ಥಾಪಿಸಿ ತನ್ಮೂಲಕ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡ ಬಳಕೆಗೆ ಬುನಾದಿ ಹಾಕಿದವರಲ್ಲಿ ಪಾ.ರಾ. ಪ್ರಮುಖರು. ಅಂದಿನಿಂದ ಇಂದಿನವರೆಗೂ ನಮ್ಮ ಸಮನ್ವಯ ಸಮಿತಿ ವೇದಿಕೆ ನಿರಂತರ ಚಟುವಟಿಕೆಗಳನ್ನು ನಡೆಸುತ್ತಾ, ಹಲವು ಸಾಹಿತ್ಯಾಸಕ್ತರು, ಬರಹಗಾರರಿಗೆ ಪ್ರೋತ್ಸಾಹ ನೀಡುತ್ತಾ ಬಂದಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ನಮ್ಮ ಈ ಸಂಘಟನೆ- ಸಮನ್ವಯ ಸಮಿತಿಯನ್ನು ಹುಟ್ಟು ಹಾಕಿದ್ದಲ್ಲದೆ ಸುಮಾರು ಮೂರು ದಶಕಗಳ ಕಾಲ ಅದರ ಪ್ರಧಾನ ಕಾರ್ಯದರ್ಶಿಯಾಗಿ ನಿಸ್ಪೃಹ ಸೇವೆ ಸಲ್ಲಿಸಿದ ಪಾ.ರಾಜಗೋಪಾಲರ ಸೇವೆ ಸದಾ ಸ್ಮರಣೀಯ. ಸಮಿತಿಯ ಪರಿಕಲ್ಪನೆಗಳಲ್ಲೊಂದಾದ ಯಾದ ಸಾಹಿತ್ಯ ದಾಸೋಹ ಕಳೆದ ೨೬ ವರ್ಷಗಳಿಂದ ನಿರಂತರವಾಗಿ ನಡೆಯುತ್ತಿದ್ದು, ದಾಸೋಹದ ಮೂಲಕ ಕನ್ನಡ ಸಾಹಿತ್ಯಲೋಕ ಪ್ರವೇಶಿಸಿದ ಹಲವರು ಇಂದು ಎತ್ತರಕ್ಕೆ ಬೆಳೆದಿದ್ದಾರೆ. ಈ ನಮ್ಮ ಸಮನ್ವಯ ಸಮಿತಿ ವೇದಿಕೆಯನ್ನು ಕಟ್ಟಿ, ವೇದಿಕೆಯ ಹಲವು ಸದಸ್ಯರನ್ನು ಬೆಳೆಸಿ, ದಿಢೀರನೆ ಇಹಲೋಕ ತ್ಯಜಿಸಿದ ಪಾ.ರಾ, ಆತ್ಮಕ್ಕೆ ಸದ್ಗತಿ ದೊರೆಯಲಿ ಎಂದು ಆಶಿಸುತ್ತಾ, ೨೪೪ನೆಯ ಸಾಹಿತ್ಯ ದಾಸೋಹದ ಈ ಸಂಚಿಕೆಯನ್ನು ದಿವಂಗತ ಪಾ.ರಾಜಗೋಪಾಲರಿಗೆ ಅರ್ಪಿಸುತ್ತಿದ್ದೇವೆ.

೨೪೪ನೆಯ ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಿದ ಶ್ರೀ ಭ.ರಾ.ವಿಜಯಕುಮಾರ್ ಅವರಿಗೂ, ಎಲ್ಲ ಪ್ರಸ್ತುತಿಕಾರರು ಮತ್ತು ತಾಂತ್ರಿಕ ನಿರ್ವಹಣೆಯಲ್ಲಿ ಸಹಕರಿಸಿದ ಎಲ್ಲ ಸದಸ್ಯರಿಗೂ ವಂದನೆಗಳು.

ಸಂಚಾಲಕ ಸಮಿತಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ ೧೮ ಜನವರಿ ೨೦೨೬

ದಾಸೋಹದ ಪುಟಗಳಲ್ಲಿ...

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ – 244


ಕಾರ್ಯಕ್ರಮ ವರದಿ: ರಾಧಿಕಾ ವಿ. ಗುಜ್ಜರ್

21.12.2025ರ ಭಾನುವಾರದಂದು ಇಳಿ ಮಧ್ಯಾಹ್ನ 3.30ಕ್ಕೆ ನಿಗದಿಯಾಗಿದ್ದ ಡಿಸೆಂಬರ್ ತಿಂಗಳ ಮತ್ತು 244ನೆಯ ಸಾಹಿತ್ಯ ದಾಸೋಹವು ಸಮಯಕ್ಕೆ ಸರಿಯಾಗಿ ಗೂಗಲ್ ಮೀಟ್ ತಾಣದಲ್ಲಿ ಆರಂಭವಾಯಿತು.

ಶ್ರೀ.ಕೆ.ಎನ್.ಮಹಾಬಲ ಅವರ ಸಂಚಾಲಕತ್ವದಲ್ಲಿ ನಡೆದ 244ನೆಯ ದಾಸೋಹದ ಅಧ್ಯಕ್ಷತೆಯನ್ನು ಶ್ರೀ ಭ.ರಾ. ವಿಜಯಕುಮಾರ್ ಅವರು ವಹಿಸಿದ್ದರು. .

ಆರಂಭದಲ್ಲಿ ಶ್ರೀಮತಿ ಕಮಲಾಕ್ಷಿ ಸಿ.ಆರ್. ಅವರು ಸಭಾಧ್ಯಕ್ಷರು ಮತ್ತು ಸಾಹಿತ್ಯ ದಾಸೋಹಿ ಮಿತ್ರರನ್ನು ಸ್ವಾಗತಿಸಿ, ಸಭೆಯ ಅಧ್ಯಕ್ಷರಾದ ಶ್ರೀ ಭ.ರಾ. ವಿಜಯಕುಮಾರ್ ಅವರನ್ನು ಪರಿಚಯಿಸಿದರು.

ಶ್ರೀ ಎಸ್.ಶೃಂಗೇಶ್ವರ ಶರ್ಮ ಅವರು 243ನೆಯ ಸಾಹಿತ್ಯ ದಾಸೋಹದ ಪ್ರಸ್ತುತಿಗಳನ್ನೊಳಗೊಂಡ ಪಿಡಿಎಫ್ ಸಂಚಿಕೆಯನ್ನು ಬಿಡುಗಡೆ ಗೊಳಿಸಿ, ಸಂಚಿಕೆಯಲ್ಲಿ ದಾಖಲಾದ ಲೇಖನಗಳ ವಿವರಗಳನ್ನು ತಿಳಿಸಿದರಲ್ಲದೆ, ಇತ್ತೀಚಿನ ದಾಸೋಹಗಳಲ್ಲಿ ಕವನಗಳ ಸಂಖ್ಯೆಯು ಕಡಿಮೆಯಾಗುತ್ತಿರುವುದರ ಬಗ್ಗೆ ಸದಸ್ಯರ ಗಮನ ಸೆಳೆದರು.



ನಂತರ ದಾಸೋಹದಲ್ಲಿ ಲೇಖನಗಳನ್ನು ಪ್ರಸ್ತುತಪಡಿಸಲು ನೋಂದಾಯಿಸಿದ್ದ ವೇದಿಕೆಯ ಸದಸ್ಯರಿಂದ ಲೇಖನಗಳ ವಾಚನವು ಆರಂಭವಾಯಿತು. .

ದಾಸೋಹದ ಅಧ್ಯಕ್ಷತೆವಹಿಸಿದ ಶ್ರೀ ಭ.ರಾ.ವಿಜಯಕುಮಾರ ಅವರು ತಮಗೆ ಅಧ್ಯಕ್ಷತೆಯ ಅವಕಾಶ ನೀಡಿದ ಸಂಚಾಲಕ ಮಂಡಳಿಗೆ ಧನ್ಯವಾದಗಳನ್ನು ತಿಳಿಸಿದರಲ್ಲದೆ, ಸಾಹಿತ್ಯ ದಾಸೋಹದಲ್ಲಿ ಎಷ್ಟು ಸದಸ್ಯರು ಭಾಗವಹಿಸುತ್ತಾರೆ ಎಂಬುದು ಗಣನೆಗೆ ಮುಖ್ಯವಲ್ಲ. ಇದು ನಿರಂತರವಾಗಿ ನಡೆಯುತ್ತ ಬಂದಿವುದು ವೇದಿಕೆಯ ಹೆಗ್ಗಳಿಕೆ. ಎಂದು ಶ್ಲಾಘಿಸಿದರು. ನೇರಾನೇರ ದಾಸೋಹದಲ್ಲಿ ಭಾಗವಹಿಸುವಿಕೆಗಿಂತಲೂ ಅಂತರಜಾಲದ ಮೂಲಕ ನಡೆಯುವ ದಾಸೋಹ ಹೆಚ್ಚು ಅನುಕೂಲಕರ. ಇಂತಹ ಕಾರ್ಯಕ್ರಮದಲ್ಲಿ ಸದಸ್ಯರು ತಮ್ಮ ಪ್ರಸ್ತುತಿಗಳನ್ನು ತಾವೇ ಓದುವುದರಿಂದ ಬರಹದ ವಿಷಯಕ್ಕೆ ತಕ್ಕಂತೆ ಧ್ವನಿಯ ಏರಿಳಿತದೊಡನೆ ಭಾವಾಭಿವ್ಯಕ್ತಗೊಳಿಸುವ ಅಭ್ಯಾಸವಾಗುತ್ತದೆ. ಅಲ್ಲದೆ ಪ್ರಸ್ತುತಿಗಳನ್ನು ವೇದಿಕೆಯಲ್ಲಿ ಪ್ರಕಟಿಸಬೇಕಾದ ಕಾರಣ ಅವನ್ನು ತಪ್ಪಿಲ್ಲದಂತೆ ತಯಾರು ಮಾಡುವ ಮತ್ತು ಇತರರ ಪ್ರಸ್ತುತಿಗಳನ್ನೂ ಓದಿ ಆನಂದಿಸುವ ಅವಕಾಶ ಸಿಗುತ್ತದೆ ಎಂದರು. ನಂತರ ದಾಸೋಹದಲ್ಲಿ ಪ್ರಸ್ತುತ

ಪಡಿಸಲಾದ ಪ್ರತಿಯೋರ್ವ ಸದಸ್ಯರ ಬರಹವನ್ನೂ ಸೂಕ್ಷ್ಮವಾಗಿ ಅವಲೋಕಿಸಿ ತಮ್ಮ ಅಭಿಪ್ರಾಯವನ್ನು ದಾಖಲಿಸಿದರು. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತೊಡಗಿರುವ ಅವರ ನಿಷ್ಪಕ್ಷ ಮತ್ತು ಪಾರದರ್ಶಕ ನುಡಿಗಳು ಭಾಗವಹಿಸಿದ ಎಲ್ಲರಿಗೂ ಮಾರ್ಗದರ್ಶಕವಾಗಿದ್ದವು.

ಶ್ರೀ ಕೆ.ಎನ್. ಮಹಾಬಲ ಅವರಿಂದ ವಂದನಾರ್ಪಣೆಯೊಂದಿಗೆ ಡಿಸೆಂಬರ್ ತಿಂಗಳ ಸಾಹಿತ್ಯ ದಾಸೋಹ ಸಮಾಪ್ತವಾಯಿತು.

ಸಾಹಿತ್ಯ ದಾಸೋಹದ ಸಂಚಾಲಕತ್ವ : ಶ್ರೀ ಕೆ.ಎನ್.ಮಹಾಬಲ
ಜೆ ಮೀಟ್ ಆತಿಥ್ಯ : ಶ್ರೀಮತಿ ರಾಧಿಕಾ.ವಿ. ಗುಜ್ಜರ್
ವಿಡಿ ೀ ಸಂಸ್ಕರಣೆ : ಶ್ರೀ ಗುರುಪ್ರಸಾದ್ ಹಾಲ್ಕುರಿಕೆ
ಪಿಡಿಎಫ್ ಆವೃತ್ತಿ ತಯಾರಕರು : ಶ್ರೀ ಶೃಂಗೇಶ್ವರ ಶರ್ಮ

ಸಾಹಿತ್ಯ ದಾಸೋಹ 244ರ ಸಂಪೂರ್ಣ ಕಾರ್ಯಕ್ರಮವು ವೀಕ್ಷಣೆಗಾಗಿ ವೇದಿಕೆಯ ಯುಟ್ಯೂಬ್ ಹಾಗೂ ಜಾಲತಾಣದಲ್ಲಿ ಲಭ್ಯವಿದೆ.

***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಮನ್ವಯ ಸಮಿತಿ ಜಾಲತಾಣ

ನಮ್ಮ ಜಾಲತಾಣದಲ್ಲಿ (ವೆಬ್‌ಸೈಟ್) ವೀಕ್ಷಿಸಿ:

- ಸಾಹಿತ್ಯ ದಾಸೋಹದ ಎಲ್ಲಾ ಸಂಚಿಕೆಗಳು
- ಸಾಹಿತ್ಯ ದಾಸೋಹದ ಯುಟ್ಯೂಬ್ ಕೊಂಡಿಗಳು
- ವೇದಿಕೆಯ ಇತರ ಕಾರ್ಯಕ್ರಮಗಳ ಯುಟ್ಯೂಬ್ ಕೊಂಡಿಗಳು
- ಧ್ವನಿ ಕಡತಗಳು
- ಛಾಯಾಚಿತ್ರಗಳು
- ಆಲಿಸಿ – ನಮ್ಮ ಸದಸ್ಯರು ಬರೆದ ಕತೆಗಳು ಇತ್ಯಾದಿ,,, ಇತ್ಯಾದಿ…

ನಮ್ಮ ಜಾಲತಾಣ ಪ್ರವೇಶಿಸಲು ಈ ಕೊಂಡಿ ಬಳಸಿ: https://sahithyadasoha.com

ತಿಂಗಳ ಬೆಳಕು - 22

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪ್ರಜ್ಞಾ ಎಐ – ಕನ್ನಡದಲ್ಲಿ ಚಾಟ್ ಜಿಪಿಟಿ

ಉಪನ್ಯಾಸಕರು: ಶ್ರೀ ಜಿ.ಎನ್. ನರಸಿಂಹಮೂರ್ತಿ

ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್

ಡಿಸೆಂಬರ್ 13ರಂದು ಶನಿವಾರ 22ನೆಯ 'ತಿಂಗಳ ಬೆಳಕು' ಕಾರ್ಯಕ್ರಮದಲ್ಲಿ 'ಪ್ರಜ್ಞಾ (ಎಐ) – ಕನ್ನಡದ ಚಾಟ್ ಜಿಪಿಟಿ' ಕುರಿತಂತೆ ಗೂಗಲ್ ಮೀಟ್ ಅಂತರಜಾಲ ತಾಣದ ಮುಖೇನ ಕನ್ನಡ ಗಣಕ ಪ್ರತಿಷ್ಠಾನದ ಕಾರ್ಯದರ್ಶಿಯಾಗಿರುವ ಶ್ರೀ ಜಿ.ಎನ್. ನರಸಿಂಹ ಮೂರ್ತಿಯವರಿಂದ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಆರಂಭದಲ್ಲಿ 'ತಿಂಗಳ ಬೆಳಕು' ಸಂಚಾಲಕ ಶ್ರೀ ರವಿ ಕುಸುಬಿ ಯವರು ತಮ್ಮ ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲರನ್ನೂ ಸ್ವಾಗತಿಸಿ, ಸಭೆಗೆ ಶ್ರೀ ನರಸಿಂಹಮೂರ್ತಿಯವರನ್ನು ಪರಿಚಯಿಸಿದರು.

ಶ್ರೀ ಜಿ.ಎನ್.ನರಸಿಂಹಮೂರ್ತಿಯವರು ತಮ್ಮ ಮಾತನಾಡುತ್ತಾ, 'ಈ ಹಿಂದೆ ಕಂಪ್ಯೂಟರ್ ಬಂದಾಗ ಎಲ್ಲಡೆ ಕೆಲಸ ಹೋಗುವುದೆಂಬ ಭಯ ಸೃಷ್ಟಿಯಾಗಿತ್ತು. ಈಗ ಕೃತಕ ಬುದ್ಧಿಮತ್ತೆಯ ಬಳಕೆ ವ್ಯಾಪಕವಾಗುತ್ತಿದ್ದಂತೆ ಮತ್ತೆ ಅದೇ ರೀತಿಯ ಭೀತಿ ಆವರಿಸುತ್ತಿದೆ. ಅಂತರ್ಜಾಲ ವಿದ್ಯಾಮಾನ ಎರಡನೇ ಬೆರಗು ಹುಟ್ಟಿಸುತ್ತಿದೆ' ಎಂದರು. ಅವರ ಉಪನ್ಯಾಸದ ಮುಖ್ಯಾಂಶಗಳು ಹೀಗಿವೆ:

ಈಗ 'ಚಾಟ್ ಜಿಪಿಟಿ'ಯನ್ನು ಓಪನ್ ಎಐ ಎಂಬ ಸಂಸ್ಥೆ ತಯಾರಿಸಿದ್ದು, ಇದು ಬುದ್ಧಿವಂತ ವ್ಯವಸ್ಥೆಯ ಜೊತೆಗೆ ಚಿಂತನೆಯನ್ನೂ ಮಾಡುತ್ತದೆ. ಇದರ ಮೂಲಕ ಎಲ್ಲ ಕ್ಷೇತ್ರದಲ್ಲಿ ಹಲವು ಸೌಲಭ್ಯಗಳು ದೊರೆಯುತ್ತವೆ. ಪ್ರೋಗ್ರಾಮರ್‌ಗಳು ಮಾಡುವ ಕೋಡ್‌ಗಳನ್ನು ಕೂಡ ಇದೇ ಬರೆಯುತ್ತದೆ. ಎಲ್ಲ ವಿಷಯಗಳ ಬಗ್ಗೆಯೂ ಎಐ ಮಾತಾಡುತ್ತದೆ. ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತದೆಯಾದರೂ ಅದು ಸಮಂಜಸವೋ ಅಲ್ಲವೋ ಅನ್ನುವುದರ ಬಗ್ಗೆ ಅದಕ್ಕೆ ಗೊತ್ತಿರುವುದಿಲ್ಲ.

ಈಗ ಅದರ ಮುಂದಿನ ಹಂತ ಬಂದಿದೆ. ಶೋಧನಾ ವ್ಯವಸ್ಥೆ ಹೊಂದಿರುವ ಎಐ ಉತ್ತರ ನೀಡುವುದು ಮಾತ್ರವಲ್ಲದೆ ಇಡೀ ಕೆಲಸವನ್ನೇ ಮಾಡಿಕೊಡುತ್ತದೆ. ಉದಾಹರಣೆಗೆ ಆಸ್ಪತ್ರೆಗಳಲ್ಲಿ ರೋಗಿಗಳ ದಾಖಲೆ ಇರುತ್ತದೆ. ಕಂಪ್ಯೂಟರ್ ಡಾಟಾ ಬೇಸ್‌ನಲ್ಲಿ ಹುಡುಕಿದ ತಕ್ಷಣ ರೋಗಿಯ ಮಾಹಿತಿ ಮತ್ತು ಇತರ ವಿವರಗಳು ದೊರಕುತ್ತವೆ, ಕೃತಕ ಬುದ್ಧಿಮತ್ತೆಯು (ಎಐ) ಖಾಯಿಲೆ ಮತ್ತು ವೈದ್ಯರು ಕೊಟ್ಟಿರುವ ಔಷಧಗಳ ಸಂಪೂರ್ಣ ವಿವರ ತಿಳಿದುಕೊಂಡು ಸಲಹೆ ಕೊಡುತ್ತದೆ. ಒಂದು ದೇಶದ ಎಲ್ಲಾ ಆಸ್ಪತ್ರೆಗಳಲ್ಲಿರುವ ಅಂತಹ ರೋಗಿಗಳ ಸಂಪೂರ್ಣ ಮಾಹಿತಿ ಸಂಗ್ರಹಿಸಿ ಖಾಯಿಲೆಯ ಸ್ವರೂಪ ಮತ್ತು ಮುಂದಿನ ಚಿಕಿತ್ಸಾ ವಿಧಾನದ ಬಗ್ಗೆ ಸ್ವೀಕಾರಾರ್ಹ ಸಲಹೆ ನೀಡುತ್ತದೆ. ಇದು ಸಂತೋಷ ಮತ್ತು ಆತಂಕ ತರುವ ವಿಚಾರ. ಯಂತ್ರವೇ ನಿರ್ಧಾರ ತೆಗೆದುಕೊಳ್ಳುವಾಗ ಮನುಷ್ಯನ ಪಾತ್ರವೇನು ಎಂಬ ಪ್ರಶ್ನೆ ಬರುತ್ತದೆ.



ಈಗಾಗಲೇ ಉದ್ಯಮ ಕ್ಷೇತ್ರದಲ್ಲಿ ರೋಬೋಟ್‌ಗಳ ಬಳಕೆ ಬಂದಿದೆ. ಕಾರಿನ ಕಾರ್ಖಾನೆಗಳಲ್ಲಿಯೂ ರೋಬೋಟ್ ಕೆಲಸ ಮಾಡುತ್ತಿದ್ದು, ಅನೇಕ ಕಡೆ ಸ್ವಯಂಚಾಲಿತ ಕಾರುಗಳು ಓಡಾಡುತ್ತಿವೆ. ಮುಂದೆ ಕಾರಿಗೆ ತೊಂದರೆ ಆದರೆ ತಾನೇ ಸರಿಪಡಿಸಿಕೊಳ್ಳುವ ಬುದ್ಧಿವಂತಿಕೆ

ಗಳಿಸಬಹುದು. ಒಟ್ಟಾರೆ ಎಲ್ಲೆಡೆ ಕ್ರಾಂತಿ ಸ್ವರೂಪದ ಬದಲಾವಣೆ ಕಾಣಬರುತ್ತಿದೆ. ಇದು ಅಮೇರಿಕಾ, ಚೀನಾ, ಜಪಾನ್, ಸೌತ್ ಕೊರಿಯಾ ಮತ್ತು ಯುರೋಪಿನ ಕೆಲವು ದೇಶಗಳಲ್ಲಿ ಏಕಸ್ವಾಮ್ಯ ಸ್ಥಾಪಿಸುವ ದಿಕ್ಕಿಗೆ ಹೋಗುತ್ತಿದೆಯೆಂದು ಒಂದು ವರದಿ ಹೇಳುತ್ತದೆ ರಕ್ಷಣಾ ಸಂಶೋಧನಾ ಸಂಸ್ಥೆಗಳು ಇದನ್ನು ಚೆನ್ನಾಗಿ ಬಳಸಿಕೊಳ್ಳುತ್ತಿದ್ದು ಹೊಸ ಶಸ್ತ್ರಾಸ್ತ್ರಗಳು ಬರುತ್ತಿವೆ. ಯುನೆಸ್ಕೋದ ಇನ್ನೊಂದು ವರದಿಯ ಪ್ರಕಾರ ಅಮೆರಿಕಕ್ಕಿಂತಲೂ ಜರ್ಮನರು ಕೃತಕ ಬುದ್ಧಿಮತ್ತೆಯನ್ನು ಅತಿ ಹೆಚ್ಚು ಬಳಸುತ್ತಿದ್ದು, ಭಾರತ 28ನೆಯ ಸ್ಥಾನದಲ್ಲಿದೆ.

ಇಂದು ರಾಷ್ಟ್ರೀಯತೆಯ ಕಲ್ಪನೆಯಡಿಯಲ್ಲಿ ಸ್ವಾವಲಂಬಿಗಳಾಗುವ ಅಗತ್ಯವಿದೆ. ಈಗ ನಾವು ನಮ್ಮೆಲ್ಲ ದಾಖಲೆಗಳನ್ನು ಗೂಗಲ್ ನಲ್ಲಿ ಸಂಗ್ರಹಿಸುತ್ತೇವೆ. ಫೇಸ್ಬುಕ್ ಮತ್ತು ವಾಟ್ಸಾಪ್ ಜಾಲತಾಣಗಳಲ್ಲಿ ಅನೇಕ ವಿಷಯಗಳ ಬಗ್ಗೆ ಬರೆಯುತ್ತೇವೆ. ಎಲ್ಲ ಮಾಹಿತಿ ಅಮೆರಿಕದ ಡಾಟಾ ಸೆಂಟರ್‌ನಲ್ಲಿ ಶೇಖರಣೆಯಾಗುತ್ತದೆ. ಗೂಗಲ್ ಅನೇಕ ಉಚಿತ ಸೌಲಭ್ಯ ನೀಡುವುದರ ಜೊತೆಗೇ ನಮ್ಮ ಅನೇಕ ಮಾಹಿತಿಗಳನ್ನೂ ಪಡೆದುಕೊಂಡಿದೆ ಅನ್ನುವುದನ್ನು ಮರೆಯುವಂತಿಲ್ಲ. ಯೂಟ್ಯೂಬ್ ಬಳಸುತ್ತಿದ್ದರೆ ಜಾಹೀರಾತುರಹಿತ ಯುಟ್ಯೂಬ್ ಪ್ರೀಮಿಯಂ ಬಳಸುವಂತೆ ಸಲಹೆ ಬರುತ್ತದೆ. ಇಮೇಲ್ ಬಳಸುತ್ತಿದ್ದರೆ 15 ಜಿಬಿ ಆದ ತಕ್ಷಣ ಹಣ ಕೊಟ್ಟು ಹೆಚ್ಚಿದ ಜಾಗ ಪಡೆದುಕೊಳ್ಳಿ ಎಂಬ ಸಂದೇಶ ಬರುತ್ತದೆ.

ಚುನಾವಣಾ ಸಂದರ್ಭದಲ್ಲಿ ಇಡೀ ರಾಷ್ಟ್ರದಲ್ಲಿ ಸಮೂಹ ಸನ್ನಿ ಉಂಟುಮಾಡುವ ಸಾಮರ್ಥ್ಯ ಕೃತಕ ಬುದ್ಧಿಮತ್ತೆಗಿದೆ.

ಚಾಟ್ ಜಿಪಿಟಿಗೆ ಹಳೆಗನ್ನಡದ ಬಗ್ಗೆ ವಿವರಣೆ ಕೇಳಿದರೆ ಅದು ವಿಕಿಪೀಡಿಯಾದಲ್ಲಿ ಅರಸಿ ಲಭ್ಯವಿರುವ ಮಾಹಿತಿಯನ್ನು ಮಾತ್ರ ಕೊಡಬಲ್ಲದು. ಭಾರತೀಯ ಭಾಷೆ ಮತ್ತು ಕಲೆಗಳ ಕುರಿತು ಹೆಚ್ಚಿನ ಮಾಹಿತಿ ಅಲ್ಲಿ ಇಲ್ಲ. ಅವೆಲ್ಲವನ್ನೂ ಶೇಖರಿಸಿ ಲಭ್ಯವಾಗುವಂತೆ ಮಾಡಬೇಕು. ಇಲ್ಲವಾದರೆ ಈ ಮಾಹಿತಿಗಳೆಲ್ಲ ಕ್ರಮೇಣ ನಷ್ಟವಾಗುತ್ತವೆ. ಕನ್ನಡ ಗಣಕ ಪರಿಷತ್ತು ಈಗ ಒಂದು ಪ್ರತಿಷ್ಠಾನವಾಗಿದ್ದು, 'ನುಡಿ'ಯ ಹೊಸ ಆವೃತ್ತಿ ತರುತ್ತಿದೆ ಮತ್ತು ತಂತ್ರಜ್ಞಾನದ ಮುಂದುವರಿದ ಸಾಧ್ಯತೆಗಳ ಬಗ್ಗೆ ಕೆಲಸ ಮಾಡುತ್ತಿದೆ. ತುಮಕೂರಿನ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಬೋಧಕರು ಮತ್ತು ವಿದ್ಯಾರ್ಥಿಗಳನ್ನು ಸೇರಿಸಿಕೊಂಡು 'ಪ್ರಜ್ಞಾ ಎ ಐ' ತರಲಾಗುತ್ತಿದೆ. ಇದು ಕನ್ನಡದ ಚಾಟ್ ಜಿಪಿಟಿ ಎನ್ನಬಹುದು. ಇದರಲ್ಲಿ ಕನ್ನಡದ ಸಮಗ್ರ ಮಾಹಿತಿ ಇರಬೇಕೆನ್ನುವುದು ನಮ್ಮ ಅಪೇಕ್ಷೆ. ದತ್ತಾಂಶದ ಗಾತ್ರವನ್ನು ತಾವು ಊಹಿಸಬಹುದು. ಎಲ್ಲ ಕಾಲೇಜುಗಳನ್ನು ಸಂಪರ್ಕಿಸಿ ಚಳುವಳಿ ರೂಪದಲ್ಲಿ ಅಂಕೀಕರಣ ಮಾಡಬೇಕು ಎಂದು ಯೋಜಿಸುತ್ತಿದ್ದೇವೆ.

ತಮಿಳುನಾಡಿನಲ್ಲಿ ವಾಟ್ಸಾಪ್ ಬದಲು ಅರಟ್ಟೈ ಎಂಬ ತಂತ್ರಾಂಶ ತಂದಿದ್ದು, ಇದರಲ್ಲಿ ಕಳಿಸುವ ಸಂದೇಶಗಳು ನಮ್ಮ ದೇಶದಲ್ಲೇ ಉಳಿಯುತ್ತವೆ. ಕನ್ನಡ ಗಣಕ ಪ್ರತಿಷ್ಠಾನವು ಎಂಎಸ್ ವರ್ಡ್‌ಗೆ ಪರ್ಯಾಯವಾಗಿ 'ನುಡಿ' ತಂತ್ರಾಂಶವನ್ನು ತಂದಿದ್ದು, ಇದರಲ್ಲಿ ಎಂಎಸ್ ವರ್ಡ್‌ನಲ್ಲಿ ದೊರೆಯುವ ಎಲ್ಲ ಸೌಲಭ್ಯಗಳೂ ಇರಲಿವೆ. ಇದನ್ನು ನಾವೆಲ್ಲರೂ ಬಳಸಬೇಕು.

ಇಂದು ಪುಸ್ತಕಗಳನ್ನು ಇಟ್ಟುಕೊಳ್ಳುವುದೇ ದೊಡ್ಡ ಹೊರೆಯಾಗಿದೆ. ಜಾಗದ ಅಭಾವದಿಂದಾಗಿ ಒಂದು ಮಿತಿಯಿಂದಾಚೆಗೆ ಪುಸ್ತಕಗಳನ್ನು ಇಟ್ಟುಕೊಳ್ಳಲಾಗುವುದಿಲ್ಲ. ಪುಸ್ತಕ ಕಳೆದುಹೋದರೆ ಮತ್ತೆ ಅದು ಸಿಗುವುದು ಬಹಳ ಕಷ್ಟ. ಪುಸ್ತಕಗಳನ್ನು ಕೂಡ ಸ್ಕ್ಯಾನ್ ಮಾಡಿ ಸಂಗ್ರಹಿಸಲು ಅವಕಾಶವಿದೆ. ಅಂಕೀಕರಣದಿಂದ ಸಂಗ್ರಹ ಮತ್ತು ತಕ್ಷಣ ಲಭ್ಯತೆ ಸಾಧ್ಯ

ಸದೃಷ್ಟ ಬುದ್ಧಿಮತ್ತೆಯು ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಕ್ರಾಂತಿಯನ್ನೇ ಮಾಡಬಹುದು. ಶಿಕ್ಷಕರು ಇದರ ಉಪಯೋಗವನ್ನು ಸಮರ್ಥವಾಗಿ ಬಳಸಬೇಕು ಎಂದ ಶ್ರೀ ನರಸಿಂಹ ಮೂರ್ತಿಯವರು ಆಧುನಿಕ ತಂತ್ರಜ್ಞಾನವನ್ನು ಕನ್ನಡದಲ್ಲಿ ಅಳವಡಿಸುವ ಬಗ್ಗೆ ಕನ್ನಡ ಗಣಕ ಪ್ರತಿಷ್ಠಾನವು ಕಾರ್ಯೋನ್ಮುಖವಾಗಿದ್ದು, ಅದರ ಇದುವರೆಗಿನ ಸಾಧನೆ, ಭವಿಷ್ಯದ ಕಾರ್ಯಕ್ರಮಗಳ ಬಗ್ಗೆ ಸಾಕಷ್ಟು ಮಾಹಿತಿ ನೀಡಿದರು.

ಕೊನೆಯಲ್ಲಿ ಪ್ರಶ್ನೋತ್ತರ ಕಾರ್ಯಕ್ರಮದ ನಂತರ ಶ್ರೀಮತಿ ರೇಣುಕಾ ದೇಸಾಯಿಯವರ ವಂದನಾರ್ಪಣೆಯೊಂದಿಗೆ ಡಿಸೆಂಬರ್ ತಿಂಗಳ ಬೆಳಕು ಮುಕ್ತಾಯವಾಯಿತು.


(ಇಡೀ ಕಾರ್ಯಕ್ರಮವು ಸಮನ್ವಯ ಸಮಿತಿಯ ಜಾಲತಾಣ ಮತ್ತು ಯುಟ್ಯೂಬ್‌ನಲ್ಲಿ ವೀಕ್ಷಣೆಗೆ ಲಭ್ಯವಿದೆ).

***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ


ಬ್ಯಾಂಕನ್ನಡದ ಜೀವನದಿ – ಪಾ. ರಾಜಗೋಪಾಲ
ಶ್ರದ್ಧಾಂಜಲಿ ಸಭೆ

ಕಾರ್ಯಕ್ರಮ ವರದಿ: ಹು.ವಾ, ಶ್ರೀಪ್ರಕಾಶ್



ಸುಮಾರು ಐವತ್ತು ವರ್ಷಗಳ ಹಿಂದೆ ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘವನ್ನು ಸ್ಥಾಪಿಸಿ ನಂತರ ತನ್ನ ಕೊನೆಯುಸಿರಿನವರೆಗೂ ಕನ್ನಡದಲ್ಲಿ ಬ್ಯಾಂಕಿಂಗ್ ವ್ಯವಹಾರ ನಡೆಸಲು ಅಗತ್ಯವಿರುವ ಅಧೋರಚನೆ ನಿರ್ಮಿಸುವಲ್ಲಿ ಶ್ರಮಿಸಿದ, 'ಬ್ಯಾಂಕಿಂಗ್ ಪ್ರಪಂಚ' ತ್ರೈಮಾಸಿಕ, ಇಂಗ್ಲಿಷ್-ಕನ್ನಡ ಬ್ಯಾಂಕಿಂಗ್ ನಿಘಂಟು, ಬ್ಯಾಂಕಿಂಗ್ ಪದನಿಧಿ ಪ್ರಕಟಣೆ ಹಾಗೂ ವಿವಿಧೆಡೆ ಬ್ಯಾಂಕಿಂಗ್ ಕಮ್ಮಟಗಳ ಆಯೋಜನೆಯ ರೂವಾರಿ ಮತ್ತು ಸ್ವತಃ ಇಂಗ್ಲಿಷ್-ಕನ್ನಡ ಪರಸ್ಪರ ನಿಧಿ ಪದಕೋಶ. ಷೇರುಪೇಟೆ ಪದಕೋಶ ಪ್ರಕಟಿಸಿ, ತಮ್ಮ ಸಂಘಟನಾ ಶಕ್ತಿಯಿಂದ 'ಬ್ಯಾಂಕನ್ನಡದ ಜೀವನಿಧಿ' ಎಂದು ಗುರುತಿಸಲ್ಪಟ್ಟ, ಭಾರತೀಯ ಸ್ಟೇಟ್ ಬ್ಯಾಂಕಿನ ನಿವೃತ್ತ ಅಧಿಕಾರಿ ಪಾ.ರಾಜಗೋಪಾಲ ಅವರು ತಮ್ಮ 80ನೆಯ ವಯಸ್ಸಿನಲ್ಲಿ 31ನೆಯ ಡಿಸೆಂಬರ್ 2025ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು. ಸಮನ್ವಯ ಸಮಿತಿಯನ್ನು ಸ್ಥಾಪಿಸುವಲ್ಲಿ ಪಾ.ರಾಜಗೋಪಾಲರ ಕೊಡುಗೆ ಮಹತ್ತರವಾದುದು.

ದಿನಾಂಕ 12.01.2026ರಂದು ಸಂಜೆ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ವತಿಯಿಂದ ಬ್ಯಾಂಕನ್ನಡದ ಜೀವನದಿ, ಕನ್ನಡ ಕಣ್ವ ಹಾಗೂ ಸಮನ್ವಯ ಸಮಿತಿಯ ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿದ ದಿವಂಗತ ಪಾ.ರಾಜಗೋಪಾಲ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಬೆಂಗಳೂರಿನ ಬಿಎಂಶ್ರೀ ಕಲಾಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.



ಪಾ.ರಾಜಗೋಪಾಲರ ಬಗ್ಗೆ ಶ್ರೀ ಬೆಂ.ಶ್ರೀ.ರವೀಂದ್ರರು ರಚಿಸಿದ ಕವನ ವನ್ನು ಶ್ರೀಮತಿ ವಿಜಯಲಕ್ಷ್ಮಿ ಅವರು ಹಾಡಿ, ಕಾವ್ಯ ನಮನ ಸಲ್ಲಿಸುವುದ ರೊಂದಿಗೆ ಕಾರ್ಯಕ್ರಮ ಆರಂಭವಾಯಿತು.

ಪಾ. ರಾಜಗೋಪಾಲರ ಒಡನಾಡಿಗಳಾದ ಶ್ರೀಯುತ ಜಿ.ಎನ್. ನರಸಿಂಹ ಮೂರ್ತಿ, ಬಿ.ಎಸ್. ಚಂದ್ರಶೇಖರ್, ಕೆ.ಎನ್. ಮಹಾಬಲ, ಟಿ.ಕೆ. ರಂಗನಾಥ್, ಕೆ.ಜನಾರ್ದನ ತುಂಗ, ಎಸ್.ಶೃಂಗೇಶ್ವರ ಶರ್ಮ, ಎಂ.ಎಸ್. ನರಸಿಂಹಮೂರ್ತಿ, ಪು.ರಾ.ಮುರಳೀಧರ, ಎಲ್.ಆರ್.ದೇಶಪಾಂಡೆ ಮತ್ತು ಬೆಂ.ಶ್ರೀ .ರವೀಂದ್ರರವರು ಪಾ.ರಾಜಗೋಪಾಲರೊಂದಿಗೆ ತಮ್ಮ ಒಡನಾಟ, ಅವರ ಕರ್ತವ್ಯ ನಿಷ್ಠೆ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡ ಬಳಕೆಗೆ ಸೂಕ್ತ ವಾತಾವರಣ ಕಲ್ಪಿಸುವ ಬಗೆಗಿನ ಅವರ ಕಾಳಜಿ, ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಕನ್ನಡ ಸಂಘ ಮತ್ತು ಸಮನ್ವಯ ಸಮಿತಿಯನ್ನು ಸ್ಥಾಪಿಸಿ,



ಪ್ರಾ.ಎಚ್ಚೆಸ್ಕೆಯವರ ಸೂಕ್ತ ಮಾರ್ಗದರ್ಶನದೊಂದಿಗೆ 'ಬ್ಯಾಂಕಿಂಗ್ ಪ್ರಪಂಚ' ನಿಯತಕಾಲಿಕ ಮತ್ತು 'ಬ್ಯಾಂಕಿಂಗ್ ಕಮ್ಮಟ'ವನ್ನು ಹೊರತರುವಲ್ಲಿನ ಅವರ ಪರಿಶ್ರಮ, ವಿವಿಧೆಡೆ 27 ಬ್ಯಾಂಕಿಂಗ್ ಕಮ್ಮಟಗಳನ್ನು ಯಶಸ್ವಿಯಾಗಿ ನಡೆಸುವಲ್ಲಿ ಮತ್ತು ಇತರ ಬ್ಯಾಂಕ್ ಕನ್ನಡ ಸಂಘಗಳು ಹಾಗೂ ಅಖಿಲ ಕರ್ನಾಟಕ ಬ್ಯಾಂಕ್ ಕನ್ನಡ ಸಂಘಗಳ ಪರಿಷತ್ತಿನ ಸ್ಥಾಪನೆಯಲ್ಲಿ ತೋರಿದ ಅವರ ಸಂಘಟನಾ ಚತುರತೆ ಹಾಗೂ ತಮ್ಮ ಸೇವಾ ನಿವೃತ್ತಿಯ ನಂತರವೂ ಬ್ಯಾಂಕಿಂಗ್ ಮತ್ತು ವಾಣಿಜ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಕನ್ನಡಪರ ಚಟುವಟಿಕೆಗಳಲ್ಲಿ ಪಾಲ್ಗೊಂಡು, ತಾವೇ ಸ್ವತಃ ರಚಿಸಿದ ಪರಸ್ಪರ ನಿಧಿ ಪದಕೋಶ ಹಾಗೂ ಷೇರುಪೇಟೆ ಪದಕೋಶಗಳನ್ನು ಪ್ರಕಟಿಸುವಲ್ಲಿನ ಅವರ ಉತ್ಸಾಹ ಮುಂತಾದುವುದರ ಬಗ್ಗೆ ಸವಿಸ್ತಾರವಾಗಿ ಮಾತನಾಡಿ ರಾಜಗೋಪಾಲರಿಗೆ ತಮ್ಮ ನುಡಿ ನಮನ ಸಲ್ಲಿಸಿದರು.



ಶ್ರೀ ಮನೋಹರ ಗೋಖಲೆ ಹಾಗೂ ಶ್ರೀ ಕೆ.ಎನ್. ಮಹಾಬಲ ಅವರು ರಾಜಗೋಪಾಲರ ವ್ಯಕ್ತಿತ್ವ, ಕರ್ತವ್ಯ ನಿಷ್ಠೆ ಮತ್ತು ಕನ್ನಡಕ್ಕೆ ಸಮರ್ಪಣಾ ಮನೋಭಾವವನ್ನು ದಾಖಲಿಸುವ ತಮ್ಮ ಸ್ವರಚಿತ ಕವನಗಳನ್ನು ವಾಚಿಸಿದರು.

ಕಾರ್ಯಕ್ರಮದಲ್ಲಿ ಪಾ.ರಾಜಗೋಪಾಲರ ಇಬ್ಬರು ಪುತ್ರಿಯರು ಹಾಜರಿದ್ದರು. ಕಾರ್ಯಕ್ರಮದ ನಂತರ ಅವರಿಗೆ ಪಾ. ರಾಜಗೋಪಾಲರ ಭಾವಚಿತ್ರವನ್ನು ಹಸ್ತಾಂತರಿಸಲಾಯಿತು.

ಕೊನೆಯಲ್ಲಿ ಶ್ರೀ ಧೀರೇಂದ್ರ ಹಾಗೂ ಶ್ರೀ ರಂಗರಾಜನ್ ರವರು ರಚಿಸಿದ "ಛಲದಂಕ ಮಲ್ಲ ಪಾ ರಾಜಗೋಪಾಲ" ಎಂಬ ನಾಟಕವನ್ನು ಶ್ರೀ ಧೀರೇಂದ್ರ ಮತ್ತು ಸಂಗಡಿಗರು ಅಭಿನಯಿಸಿದರು.

ಶ್ರೀ ರವಿ ಕುಸುಬಿ ಅವರು ಕಾರ್ಯಕ್ರಮ ನಿರ್ವಹಿಸಿದರು.

(ಚಿತ್ರ ಕೃಪೆ: ಶ್ರೀ ಶ್ರೀಧರ ಕೋಮರವಳ್ಳಿ, ಶ್ರೀಮತಿ ನಾಗರತ್ನ ಚಂದ್ರಶೇಖರ)

***

ಸಮನ್ವಯದ ವ್ಯಕ್ತಿ

ಪಾ, ರಾಜಗೋಪಾಲ

25, ಜೂನ್ 1947ರಂದು ಬೆಂಗಳೂರು ಜಿಲ್ಲೆ, ಅನೇಕಲ್‌ನಲ್ಲಿ ಶ್ರೀಮತಿ ರುದ್ರಮ್ಮ ಮತ್ತು ಶ್ರೀ ಪಾಪಶೆಟ್ಟಿಯವರ ಪುತ್ರನಾಗಿ ಜನನ. ಪ್ರೌಢಶಾಲೆವರೆಗಿನ ವಿದ್ಯಾಭ್ಯಾಸ ಅನೇಕಲ್‌ನಲ್ಲಿ. ನಂತರ ಬೆಂಗಳೂರಿನ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನಿಂದ ಬಿ.ಎ. (ಆನರ್ಸ್) ಮತ್ತು ಸೆಂಟ್ರಲ್ ಕಾಲೇಜಿನಿಂದ ಕನ್ನಡ ಭಾಷಾ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಜೂನ್ 1970ರಲ್ಲಿ ಭಾರತೀಯ ಸ್ಟೇಟ್ ಬ್ಯಾಂಕಿನ ಬೆಂಗಳೂರು ನಗರ ಶಾಖೆಯಲ್ಲಿ ಗುಮಾಸ್ತರಾಗಿ ಸೇರ್ಪಡೆ. 1983ರಲ್ಲಿ ಅಧಿಕಾರಿ ಹುದ್ದೆಗೆ ಬಡ್ತಿ. ಹಲವು ಶಾಖೆಗಳ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ 30, ಜೂನ್ 2007ರಂದು ಭಾರತೀಯ ಸ್ಟೇಟ್ ಬ್ಯಾಂಕಿನ ಸೇವೆಯಿಂದ ನಿವೃತ್ತಿ.

ಪಾ.ರಾಜಗೋಪಾಲರಿಗೆ ಚಿಕ್ಕಂದಿನಿಂದಲೂ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಆಸಕ್ತಿ. ಬ್ಯಾಂಕಿಗೆ ಸೇರುತ್ತಿದ್ದಂತೆಯೇ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡ ಭಾಷೆಯ ಬಳಕೆ ಸಂಬಂಧಿಸಿದಂತೆ ಏನಾದರೂ ಮಾಡಬೇಕೆಂಬ ತುಡಿತ. ಡಿಸೆಂಬರ್ 1972ರಲ್ಲಿ ಕೆಲವು ಕನ್ನಡ ಪ್ರೇಮಿ ಸಹೋದ್ಯೋಗಿಗಳ ಸಹಕಾರದಿಂದ ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘ ಸ್ಥಾಪಿಸುವಲ್ಲಿ ಯಶಸ್ವಿ. ಮೊದಲಿಗೆ ವಾಚನಾಲಯದ ಆರಂಭ. 1977ರಲ್ಲಿ 'ಮಂದಾರ' ಎಂಬ ಕೈಬರಹದ ವಾರ್ಷಿಕ ಸಂಚಿಕೆ ಬಿಡುಗಡೆ. ನಿರಂತರ ಸಾಹಿತ್ತಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಾ, ಬ್ಯಾಂಕಿನ ಹಲವು ಶಾಖೆಗಳಲ್ಲಿಯೂ ಕನ್ನಡ ಸಂಘಗಳ ಸ್ಥಾಪನೆಗೆ ಬುನಾದಿ. 1978ರಲ್ಲಿ ಈ ಎಲ್ಲ ಕನ್ನಡ ಸಂಘಗಳನ್ನೊಳಗೊಂಡ 'ಕನ್ನಡದಲ್ಲಿ ಬ್ಯಾಂಕಿಂಗ್, ಬ್ಯಾಂಕಿಂಗ್‌ನಲ್ಲಿ ಕನ್ನಡ' ಎಂಬ ಧ್ಯೇಯವಾಕ್ಯದೊಂದಿಗೆ 'ಸಮನ್ವಯ ಸಮಿತಿ (ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು)' ಅಸ್ತಿತ್ವಕ್ಕೆ. ಆರಂಭದ ದಿನದಿಂದ ನಿವೃತ್ತಿಯವರೆಗೂ ಸುಮಾರು 29 ವರ್ಷಗಳ ಕಾಲ ಪಾ.ರಾಜಗೋಪಾಲರೇ ಸಮನ್ವಯ ಸಮಿತಿಯ ಪ್ರಧಾನ ಕಾರ್ಯದರ್ಶಿ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡ ಬಳಕೆಗೆ ಸಂಬಂಧಿಸಿದಂತೆ ಸೂಕ್ತ ತಳಹದಿ ರೂಪಿಸುವಲ್ಲಿ ಸ್ವಯಂ ಸಮರ್ಪಣೆ.

1980ರಲ್ಲಿ ಸಮನ್ವಯ ಸಮಿತಿಯಿಂದ ಪ್ರಾ. ಎಚ್.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ) ಅವರ ಸಂಪಾದಕತ್ವದಲ್ಲಿ 'ಬ್ಯಾಂಕಿಂಗ್ ಪ್ರಪಂಚ' ನಿಯತಕಾಲಿಕದ ಮೊದಲ ಸಂಚಿಕೆ ಪ್ರಕಟಣೆ. ಇದು ಭಾರತೀಯ ಭಾಷೆಗಳಲ್ಲೇ ಹಣಕಾಸು ಮತ್ತು ಬ್ಯಾಂಕಿಂಗ್ ವಿಷಯಕ್ಕೇ ಮೀಸಲಾದ ಏಕೈಕ ಪತ್ರಿಕೆ ಎಂಬ ಹೆಗ್ಗಳಿಕೆ. ಪ್ರಾ.ಎಚ್ಚೆಸ್ಕೆಯವರ ನೇತೃತ್ವದಲ್ಲಿ ಕರ್ನಾಟಕ ಹಾಗೂ ಹೊರನಾಡಿನ ವಿವಿಧ ಸ್ಥಳಗಳಲ್ಲಿ ಒಟ್ಟು 27 'ಬ್ಯಾಂಕಿಂಗ್ ಕಮ್ಮಟ'ಗಳನ್ನು ಆಯೋಜಿಸುವುದರ ಮೂಲಕ ಹಣಕಾಸು ಮತ್ತು ಬ್ಯಾಂಕಿಂಗ್ ಬಗ್ಗೆ ಕನ್ನಡದಲ್ಲಿ ಮಾತನಾಡಬಲ್ಲ ಹಾಗೂ ಬರೆಯಬಲ್ಲ ಚಿಂತಕರು, ಲೇಖಕರು ಹಾಗೂ ಅನುವಾದಕರ ಪಡೆಯ ನಿರ್ಮಾಣ. ಬ್ಯಾಂಕುಗಳಲ್ಲಿ ಬಳಸುವ ವಿವಿಧ ದಸ್ತಾವೇಜುಗಳು, ನಮೂನೆಗಳು ಮುಂತಾದುವುಗಳ ಕನ್ನಡೀಕರಣಕ್ಕೆ ಪ್ರೇರಣೆ. ಕಮ್ಮಟಗಳಲ್ಲಿ ಸೃಷ್ಟಿಯಾದ ಬ್ಯಾಂಕಿಂಗ್ ವಿಷಯಕ್ಕೆ ಸಂಬಂಧಿಸಿದ ಹಲವು ಕನ್ನಡ ಪದಗಳನ್ನು ಕ್ರೋಢೀಕರಿಸಿ 1985ರಲ್ಲಿ ಪ್ರಾ.ಎಚ್ಚೆಸ್ಕೆಯವರ ಸಂಪಾದಕತ್ವದಲ್ಲಿ 'ಇಂಗ್ಲಿಷ್-ಕನ್ನಡ ಬ್ಯಾಂಕಿಂಗ್ ನಿಘಂಟು' ಪ್ರಕಟಣೆ. 'ಬ್ಯಾಂಕಿಂಗ್ ಪದನಿಧಿ' ಕಿರುಪತ್ರಿಕೆ ಮೂಲಕ ಹಲವು ಹೊಸ ಇಂಗ್ಲಿಷ್ ಪದಗಳಿಗೆ ಕನ್ನಡ ಸಂವಾದಿ ಪದಗಳು, ಅನುವಾದಿತ ಲೇಖನಗಳ ಪರಿಚಯ. 1990ರಲ್ಲಿ ಸಮನ್ವಯ ಸಮಿತಿ ಸ್ಥಾಪಿಸಿದ 'ಬ್ಯಾಂಕಿಂಗ್ ಪ್ರತಿಷ್ಠಾನ'ದ ಮೂಲಕ ಅರ್ಥಶಾಸ್ತ್ರಜ್ಞರು, ಹಿರಿಯ ಬ್ಯಾಂಕರುಗಳು ಬರೆದ ಬ್ಯಾಂಕಿಂಗ್ ಇತಿಹಾಸ, ಬೆಳವಣಿಗೆ, ಸಾಧನೆ ಇತ್ಯಾದಿ ಕುರಿತ ಪುಸ್ತಕಗಳ ಪ್ರಕಟಣೆ, ಹಲವು ವಿಚಾರ ಸಂಕಿರಣಗಳ ಆಯೋಜನೆ.

ಕನ್ನಡಪರ ಸಮಾನ ಉದ್ದೇಶಕ್ಕಾಗಿ ಹೋರಾಡುವ ದೃಷ್ಟಿಯಿಂದ 1983ರಲ್ಲಿ ಬೆಂಗಳೂರಿನಲ್ಲಿನ ವಿವಿಧ ಬ್ಯಾಂಕ್ ಕನ್ನಡ ಸಂಘಗಳನ್ನು ಒಗ್ಗೂಡಿಸಿ 'ಅಖಿಲ ಕರ್ನಾಟಕ ಬ್ಯಾಂಕ್ ಕನ್ನಡ ಸಂಘಗಳ ಪರಿಷತ್ತು' ಸ್ಥಾಪಿಸುವಲ್ಲಿ ಪಾ.ರಾಜಗೋಪಾಲರ ಪಾತ್ರ ಗಮನಾರ್ಹ.

ಬ್ಯಾಂಕ್ ಸೇವೆಯಿಂದ ನಿವೃತ್ತಿಯ ನಂತರವೂ ತಮ್ಮ ಕನ್ನಡಪರ ಚಟುವಟಿಕೆ ಮುಂದುವರಿಸಿದ 'ಪಾರಾ' ರಿಂದ ಸಾವಿರಾರು ಪದಗಳನ್ನೊಳಗೊಂಡ 'ಪರಸ್ಪರ ನಿಧಿ ಪದಕೋಶ' ಮತ್ತು 'ಷೇರುಪೇಟೆ ಪದಕೋಶ'ಗಳ ಸಂಪಾದನೆ, ಪ್ರಕಟಣೆ.

'ಬ್ಯಾಂಕನ್ನಡದ ಜೀವನದಿ – ಪಾ.ರಾಜಗೋಪಾಲ' ಇದು ಕಳೆದ ವರ್ಷ ಸಮನ್ವಯ ಸಮಿತಿಯು ಬ್ಯಾಂಕುಗಳಲ್ಲಿ ಕನ್ನಡಕ್ಕಾಗಿ ಅಹರ್ನಿಶಿ ದುಡಿದ ಪಾ.ರಾಜಗೋಪಾಲರನ್ನು ಸನ್ಮಾನಿಸಿ ಅರ್ಪಿಸಿದ ಅಭಿನಂದನಾ ಗ್ರಂಥ. ಹೀಗೆ ಬದುಕಿನುದ್ದಕ್ಕೂ ಬ್ಯಾಂಕನ್ನಡ ಕೈಂಕರ್ಯಕ್ಕೆ ತನ್ನನ್ನು ತಾನು ಸಮರ್ಪಿಸಿಕೊಂಡ, ಕನ್ನಡದಿಂದ ಎಂದಿಗೂ ಪಾರಾಗದ ಎಲ್ಲರ ಅಚ್ಚುಮೆಚ್ಚಿನ 'ಪಾ.ರಾ.', 31ನೆಯ ಡಿಸೆಂಬರ್ 2025ರ ಮುಂಜಾನೆ ಇಹಲೋಕಕ್ಕೆ ವಿದಾಯ. ಅವರು ಮೊದಲೇ ಬರೆದಿಟ್ಟಿದ್ದಂತೆ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದೇಹದಾನ.

***

ಪಾ. ರಾಜಗೋಪಾಲ – ಕಾವ್ಯನಮನ

ರಾಜಗೋಪಾಲನೆಂಬ ಜೀವನದಿ

– ಬೆಂ.ಶ್ರೀ. ರವೀಂದ್ರ

ರಾಜಗೋಪಾಲನೆಂಬ ಜೀವನದಿಯು
ಜುಳಜುಳನೆ ಹರಿವ ಹನ್ನೆರಡು ತಿಂಗಳು
ಉಬ್ಬರವಿಲ್ಲದ ಪ್ರಶಾಂತ ವಿಸ್ತಾರ ನಿಧಿಯು
ಅದೆಷ್ಟೋ ಸಂವತ್ಸರದಲಿ ಬೆಳೆದ ಬೆಳೆ ಬೆಳಕು

ಕ್ಷಣಕ್ಷಣವು ದಡಕೆಸೆವ ಮೆಕ್ಕಲು ಮಣ್ಣು
ನಿಂತ ನೀರಲ್ಲದ ಸಂಸ್ಕೃತಿಯ ಚೆಲುವೆಣ್ಣು
ದಡದಡವು ಶಿಲ್ಪವು ದೇವದೇವರ ಬೀಡು
ಹಸಿರುಬನ ಪ್ರಾಣಿ ಉಲಿವ ಪಕ್ಷಿ ಸಂಕುಲವು

ನಂದಿಬೆಟ್ಟದಲಿ ಯಾರೂ ಕಾಣದ ಕುಂಡದಲಿ
ಪುಟಪುಟನೆ ಎದ್ದ ನೀರ್ಗುಳ್ಳೆ ಕಂನಾಡ ಕಾಡಲ್ಲಿ
ಹರಿದು ಮೆಲ್ಲನೆ ಕೊರಕಲು ಕಣಿವೆ ಬಯಲು
ಏಳುಬೀಳಲಿ ವಿದ್ಯುತ್ತು ವಿದ್ವತ್ತಿನ ಕೋಲ್ಮಿಂಚು

ಗಗನದಿಂದುರುವ ಪನ್ನೀರ ನುಡಿಬಟ್ಟಲಲಿಟ್ಟು
ಹಳ್ಳಕೊಳ್ಳವು ಒಡಗೂಡಿ ಉಪನದಿಯ ಸಾಲು
ಕಾಣೆಯಾದ ಕನ್ನಡ ಬೆಂಗಾಡು ಬೆಂದಕಾಳೂರಲಿ
ನುಡಿದಾಹ ನೀಗಿಸಿ ಚೆಲ್ಲಿಹ ಕೆಂಪು ಹಳದಿ ಛಲವು

ಕಾಯದೆ ಕಾಲಕ್ಕೆ ತುತ್ತೂರಿಗೆ ತನ್ನಪಾಡಿಗೆ ತಾನು
ಗುರಿಯೆಡೆಗೆ ಬಿಡದ ನಡೆ ಪ್ರತಿ ಚಣಚಣವು
ಅಣುವಾಗಿ ಬಿಡುಗಡೆ ಮಾಡಿ ಕಂನುಡಿಯ ಶಕುತಿ
'ಲಗಾವ್' ಅಲಗಲ್ಲಿ ಲಗುನಡಿಗೆ ನಿರ್ಭೀತ ಯುಕ್ತಿ

ಕೋಡುಕೋಡಲಿ ತೂಗಿ ಕಾಫಿ ಚೇತೋಹಾರಿ
ಮಳೆ ನೆರಳು ಬೆಂಗಾಡಿನಲಿ ಭತ್ತ, ತೂಗಿ ಕಬ್ಬು
ಪಸೆಗೆ ಬೇಕು ಆಕಾಶದ ಆಸರೆ ಹಿಮಧಾರೆಯು
ಬಡಕಾಯಿಪನು ಅವನೊಳಗಿನ ಸಂಪನ್ಮೂಲವು

ಕಂನುಡಿ ನದಿಯನುಳಿಸಲು ಬೇಕು ಅಧೋರಚನೆ
ಬೇಕಾದಷ್ಟಿದೆ ಕೆಲಸ ಮಾಡುವರು ಬಲು ಕಡಿಮೆ
ಕೂಗುವನು ಶಕ್ತಿಕೊಡು ಶಕ್ತಿಯ ಕೊಡು ಗುರುವೆ
ಕನ್ನಡಕೆ ಕಾಯ್ವ ಛಲವ ದೀಪ್ತಿಗೊಳಿಸು ನನ್ನೊಳು

ಹೊಗಳು ಹೂ ಬೇಡ ಹೊತ್ತು ಹೂಡುವ ನೊಗವ
ಕಾಯನು ಸಂಗಾತಿಗೆ ಸಮಯಕ್ಕೆ ರಂಗಮಂಚಕೆ
ಎಚ್ಚೆಸ್ಕೆಯ ಅಭಯದಲಿ ಕಸುವ ತುಂಬಿ ಕನ್ನಡಕೆ
ಹರಿವ ತಾನಾಗಿ ಗುರಿಯು ಕನ್ನಡ ನುಡಿ ಸಾಗರವು

ರಾಜಗೋಪಾಲನೆಂಬ ಜೀವನದಿ ನಮ್ಮೊಳಗೆ
ಒಡ್ಡು, ನಾಲೆಗಳ ಕಟ್ಟಿ ಹಿಗ್ಗಿಸಿ ನಾಳೆಗಳ ಕಟ್ಟು
ಕಣ್ಣಿಟ್ಟು ಕಾಯುತಿರು ಕಂನುಡಿ ಜಲದ ಕಣ್ಣು
ಕನ್ನಡ ನಾಡಲ್ಲಿ ಜೋಂಪಿಸಲಿ ಕನ್ನಡದ ಹಣ್ಣು

***

ಪಾ. ರಾಜಗೋಪಾಲ – ಕಾವ್ಯನಮನ

ಬ್ಯಾಂಕನ್ನಡದ ಕಣ್ವ

– ಮಹಾಬಲ

ಪ್ರಾಚಾರ್ಯ ಎಚ್ಚೆಸ್ಕೆಯವರಂತೆ ಇವರೂ ಒಬ್ಬ ಸಾಧಕ
ಕನ್ನಡ ಅನುಷ್ಠಾನವನ್ನೇ ಚಿಂತಿಸುವ ಬ್ಯಾಂಕನ್ನಡದ ಕಣ್ವ
ಪಟ್ಟು ಹಿಡಿದು ಕೆಲಸವ ಸಾಧಿಸುವಂಥ ಗಟ್ಟಿ ಛಲಗಾರ
ನಮ್ಮ ನಡುವಿನ ಪ್ರಚಂಡ ಶಕ್ತಿ ಪಾ.ರಾಜಗೋಪಾಲ

ಕೂತಲ್ಲಿ ನಿಂತಲ್ಲಿ ಕನ್ನಡ ಅನುಷ್ಠಾನದ್ದೊಂದೇ ಚಿಂತೆ
ಬಿದ್ದ ಕಲ್ಲನೂ ಕೆಲಸದಲಿ ತೊಡಗಿಸುವ ಚತುರತೆ
ಬ್ಯಾಂಕಿಂಗ್ ನಿಘಂಟು, ವಿಚಾರ ಸಂಕಿರಣ, ಕಮ್ಮಟ ನಿರಂತರ
ಕನ್ನಡದಲ್ಲಿ ಬ್ಯಾಂಕಿಂಗ್, ಬ್ಯಾಂಕಿಂಗಿನಲ್ಲಿ ಕನ್ನಡ ಜೀವಮಂತ್ರ

ಲೇಖನ ಬರೆ, ಇದನು ಅನುವಾದಿಸು, ಬಾ ಕಮ್ಮಟಕೆ
ವಿಷಯ ಗೊತ್ತಿಲ್ಲವೆ? ತೆಗೆದುಕೋ ಈ ಹೊತ್ತಗೆ
ನಡೆ ಕಾಫಿಗೆ ಈಗಿಂದೀಗಲೆ ಪಕ್ಕದ ಹೋಟೆಲಿಗೆ
ಸುತ್ತೋಲೆಯ ಹಾಕಬೇಕಿದೆ ನಾವು ಇಂದೇ ಅಂಚೆಗೆ.

ಎ ಆರ್ ಕೃ, ವೆಂಕಣ್ಣಯ್ಯ ಇವರಲ್ಲಿ ಒಟ್ಟಿಗೇ ಅವತರಿಸಿದರೆ
ನಂದನವಾಗಿಸಲು ಬೋಳುಬಿದ್ದ ಬ್ಯಾಂಕನ್ನಡದ ಧರೆ

***

ಪಾ. ರಾಜಗೋಪಾಲ – ಕಾವ್ಯನಮನ

ಪಾ. ರಾಜಗೋಪಾಲರ ನೆನಪು

– ಮನೋಹರ ಎಂ. ಗೋಖಲೆ

ಗುರು ಎಚ್ಚೆಸ್ಕೆಯವರ ಮಾರ್ಗದರ್ಶನವಿತ್ತು
ಬ್ಯಾಂಕಿಂಗ್ ಕಮ್ಮಟಿಗರ ಸಂಗಮವಾಗುತ್ತಿತ್ತು
ಕನ್ನಡ ಬ್ಯಾಂಕ್ ವಿಚಾರ ಮಂಥನವಿರುತ್ತಿತ್ತು
ಸಾರ್ಥಕ್ಯ ಭಾವ ಪಾ.ರಾ. ಮುಖದಲ್ಲಿರುತ್ತಿತ್ತು.

ಬ್ಯಾಂಕಿಂಗ್‌ನಲ್ಲಿ ಕನ್ನಡ
ಕನ್ನಡದಲ್ಲಿ ಬ್ಯಾಂಕಿಂಗ್ ಒಂದೇ ಗುರಿ
ಕಮ್ಮಟ ಅನುವಾದ ಪದ ಟಂಕಣ
ಪಾ.ರಾ. ಕ್ರಮಿಸಿ ತೋರಿಸಿದ ದಾರಿ.

ಮಾತಾಡಬೇಕು ಬ್ಯಾಂಕಿನಲ್ಲಿ ಕನ್ನಡ
ಬರೆಯಬೇಕು ಬ್ಯಾಂಕಿನಲ್ಲಿ ಕನ್ನಡ
ಅಳವಡಿಸಬೇಕು ಬ್ಯಾಂಕಿನಲ್ಲಿ ಕನ್ನಡ
ಪಾ.ರಾ. ಕನಸು ಎಲ್ಲ ಬ್ಯಾಂಕುಗಳಲ್ಲಿ ಕನ್ನಡ.

ಉಸಿರು ಕನ್ನಡ ಮನಸು ಕನ್ನಡ
ಮಾತು ಕನ್ನಡ ವ್ಯವಹಾರ ಕನ್ನಡ
ಓದು ಕನ್ನಡ ಬರಹ ಕನ್ನಡ
ಪಾ.ರಾ. ಹೃದಯಬಡಿತವೂ ಕನ್ನಡ.

ಬ್ಯಾಂಕಿಂಗ್ ಕನ್ನಡಿಗರನು ಗೆಲ್ಲ
ಬಲ್ಲ ರಾಜಗೋಪಾಲ
ಶ್ರದ್ಧೆ ನಿಷ್ಠೆ ಕೆಲಸದಿ ಛಲದಂಕ
ಮಲ್ಲ ರಾಜಗೋಪಾಲ

ಅವರ ಕುಟುಂಬಕ್ಕಷ್ಟೇ ಅಲ್ಲ
ಮಿತ್ರ ಪರಿವಾರಕ್ಕಷ್ಟೇ ಅಲ್ಲ
ಬ್ಯಾಂಕನ್ನಡ ಸಾಹಿತ್ಯ ಕೃಷಿಗೆ
ಪಾ.ರಾ. ಅಗಲಿಕೆಯ ನಿರ್ವಾತ
ತುಂಬಲಾಗದ ಭರಿಸಲಾಗದ ನಷ್ಟ.

ಸಾರ್ಥಕತೆಯ ಕನ್ನಡ ಸೇವೆ ಮುಗಿಸಿದಿರಾ
ದಶಂಬರ ಮೂವತ್ತೊಂದಕೆ ಹೋಗಿಬಿಟ್ಟಿರಾ
ಬ್ಯಾಂಕುಗಳಲಿ ನಶಿಸುತಿಹ ಕನ್ನಡದ ಅಬ್ಬರ
ಕಂಡು ಎಚ್ಚೆಸ್ಕೆ ಭೇಟಿಗೆ ತೆರಳಿದಿರಾ ಪಾ.ರಾ.

***

ಪಾ. ರಾಜಗೋಪಾಲರನ್ನು ನೆನೆಸಿಕೊಂಡರಷ್ಟೇ ಸಾಕೆ?

– ಕೆ. ಜನಾರ್ದನ ತುಂಗ

"ಮಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್" ಎಂದು ಭಗವದ್ಗೀತೆಯಲ್ಲಿ ಕೃಷ್ಣ ಹೇಳಿದ ಮಾತು ರಾಜಗೋಪಾಲರಿಗೆ ಸಂಪೂರ್ಣವಾಗಿ ಅನ್ವಯಿಸುತ್ತದೆ. ರಾಜಗೋಪಾಲರಿದ್ದಲ್ಲಿ ಕನ್ನಡಪರ ಚಟುವಟಿಕೆಗಳು ಸ್ವಯಂಚಾಲಿತವಾಗಿ ಗರಿಗೆದರಿಕೊಳ್ಳುತ್ತವೆ.

ರಾಜಗೋಪಾಲರು ನಿಧನರಾಗಿದ್ದು ೩೧/೧೨/೨೦೨೫ರಂದು. ಅದಕ್ಕೆ ಸರಿಯಾಗಿ ಎರಡು ತಿಂಗಳ ಹಿಂದೆ ಅಂದರೆ ೨೯.೧೦.೨೦೨೫ ರಂದು ನಾನು ನಮ್ಮ ಊರಿನಲ್ಲಿದ್ದೆ. ಮಧ್ಯಾಹ್ನ ಎರಡು ಗಂಟೆಗೆ ಸರಿಯಾಗಿ ರಾಜಗೋಪಾಲರ ದೂರವಾಣಿ ಕರೆ ಬಂದಿತು. ಸಾಮಾನ್ಯವಾಗಿ "ಏನಯ್ಯ, ಎಲ್ಲಿದ್ದೀಯಾ, ಏನ್ಮಾಡ್ತಿದ್ದೀಯಾ..." ಎಂದು ಪೀಠಿಕೆ ಹಾಕಿ ಮಾತು ಮುಂದುವರಿಸುತ್ತಿದ್ದ ಅವರು ಅಂದು ನೇರವಾಗಿ, "ತುಂಗಾ, ನನ್ನದೊಂದು ಕೆಲಸ ಮಾಡಿ ಕೊಡುತ್ತೀಯಾ?" ಎಂದು ಕೇಳಿದರು. ಅವರು ಹಾಗೆ ಕೇಳುವವರಲ್ಲ; ಮಾಡಬೇಕಾದ ಕೆಲಸ ಏನು ಎಂದು ಹೇಳುವವರು. ನನಗೆ ಅಚ್ಚರಿಯಾಯಿತು. ಅವರ ಬೇಡಿಕೆಗಳೇನಿರಬಹುದು? ಹೆಚ್ಚೆಂದರೆ, ಒಂದು ಅನುವಾದ ಅಥವಾ ಒಂದು ಲೇಖನ!

"ಓಹೋ... ಧಾರಾಳವಾಗಿ" ಎಂದೆ. ಆದರೆ ಅವರ ಬೇಡಿಕೆಯನ್ನು ಕೇಳಿ ಧಿಙ್ಮೂಢನಾದೆ. "ನನ್ನನ್ನು ಬೈದು ಒಂದು ಕವನ ಬರೆಯಬೇಕು; ಅದು ನಿನ್ನಿಂದ ಮಾತ್ರ ಸಾಧ್ಯ" ಎಂದರು. ಇಂತಹ ಕೆಲಸ ಕೊಡುತ್ತಾರೆಂದು ನಾನು ಕನಸಿನಲ್ಲೂ ಯೋಚಿಸಿರಲಿಲ್ಲ, ನಾನು ಅವರನ್ನು ಕನಸಿನಲ್ಲೂ ಬಯ್ಯುವುದು ಸಾಧ್ಯವಿಲ್ಲ. ರಾಜಗೋಪಾಲರು ತುಂಬಾ ಸರಳ ವ್ಯಕ್ತಿ, ವೇಷಭೂಷಣಕ್ಕಾಗಲಿ ಕೌಟುಂಬಿಕ ವಿವರಗಳಿಗಾಗಲಿ ಅಷ್ಟೊಂದು ಗಮನ ನೀಡದವರು. ಕಮ್ಮಟ ನಡೆಯುವಾಗ ಎಲ್ಲರೂ ಶಿಸ್ತಾಗಿ ಬಂದು ಕುಳಿತರೆ ರಾಜಗೋಪಾಲರು ಲುಂಗಿ ಧರಿಸಿ ಬರುತ್ತಿದ್ದುದುಂಟು. ಅದರಿಂದ ಅವರ ಮಹತ್ವಕ್ಕೇನೂ ಕುಂದು ಬಂದಿರಲಿಲ್ಲ. ಅವರ ಆ ಸರಳತೆಯೇ ಅವರ ಉನ್ನತಿಕೆ. ಅವರ ವೇಷಭೂಷಣಗಳ ಬಗ್ಗೆ ಗೇಲಿ ಮಾಡಿ ಬರೆಯುವುದು ಸಾಧ್ಯವಿತ್ತು. ಆದರೆ, ಬೈದು ಬರೆಯುವುದು ಸಾಧ್ಯವಿರಲಿಲ್ಲ. ಬರೆಯಲೂ ಇಲ್ಲ. ರಾಜಗೋಪಾಲರನ್ನು ಪ್ರೀತಿಸುವ ಅಭಿಮಾನಿಗಳ ಭಯದಿಂದ ನಾನು ಬರೆಯಲಿಲ್ಲವೆಂದರೆ ಸೂಕ್ತವಾದೀತು.

ನಾನು ರಾಜಗೋಪಾಲರನ್ನು ಸುಮಾರು ೪೫ ವರ್ಷಗಳಿಂದ ಬಲ್ಲೆ ೧೯೮೦ರಲ್ಲಿ ನಾವು ನಮ್ಮ ಬ್ಯಾಂಕಿನಲ್ಲಿ ಕನ್ನಡ ಸಂಘವನ್ನು ಸ್ಥಾಪಿಸಿದೆವು. ಅದಕ್ಕೆ ಬ್ಯಾಂಕಿನಲ್ಲಿದ್ದ ತಮಿಳು ಪರ ಮತ್ತು ಕನ್ನಡ ವಿರೋಧಿ ಧೋರಣೆಗಳೇ ಕಾರಣವಾಗಿದ್ದವು ಹೊರತು, ಬಾಹ್ಯ ಪ್ರೇರಣೆಗಳಿರಲಿಲ್ಲ. ನಾವು ಬ್ಯಾಂಕಿಗೆ ಸೇರುವಾಗ ಬ್ಯಾಂಕಿಂಗ್ ಪರೀಕ್ಷೆಗಳನ್ನು ಎನ್‌ಐಬಿಎಮ್ ನಡೆಸುತ್ತಿತ್ತು. ಸ್ಟೇಟ್ ಬ್ಯಾಂಕ್ ಸಮೂಹಗಳಿಗೆ ಪ್ರಾದೇಶಿಕ ನೇಮಕಾತಿ ಮಂಡಳಿಯ ಮೂಲಕ ನೇಮಕಾತಿ ನಡೆಯುತ್ತಿತ್ತು. ಈ ಎರಡೂ ಸಂಸ್ಥೆಗಳಲ್ಲಿ ತಮಿಳರ ಹಿಡಿತವಿದ್ದುದರಿಂದ ಬ್ಯಾಂಕುಗಳಿಗೆ ತಮಿಳರೇ ಹೆಚ್ಚಾಗಿ ನೇಮಕಗೊಳ್ಳುತ್ತಿದ್ದರು. ಕನ್ನಡ ಮತ್ತು ಇಂಗ್ಲಿಷ್ ಬಿಟ್ಟು ಬೇರೆ ಭಾಷೆಗಳನ್ನು ತಿಳಿಯದ ನಮಗೆ ಬ್ಯಾಂಕಿನಲ್ಲಿ ಉಸಿರು ಕಟ್ಟಿಸುವ ವಾತಾವರಣವಿತ್ತು.

ಕನ್ನಡ ಸಂಘವನ್ನೇನೋ ಕಟ್ಟಿಕೊಂಡಾಯ್ತು. ಅದಕ್ಕೆ ಬೇಕಾದ ನಿಯಮಾವಳಿಗಳನ್ನು ತಯಾರಿಸಬೇಕಾಗಿತ್ತು. ಮುಂದಿನ ಕಾರ್ಯಕ್ರಮಗಳ ರೂಪುರೇಷೆ ತಯಾರಿಸಬೇಕಾಗಿತ್ತು. ನಾವು ಅದೇ ತಾನೇ ವ್ಯಾಸಂಗ ಮುಗಿಸಿ ಬಂದ ಹುಡುಗರು. ಇಂತಹ ಪರಿಸ್ಥಿತಿಯಲ್ಲಿ ನಮಗೆ ಭಾರತೀಯ ಸ್ಟೇಟ್ ಬ್ಯಾಂಕಿನ ಪಾ. ರಾಜಗೋಪಾಲರ ಹೆಸರನ್ನು ಯಾರೋ ಸೂಚಿಸಿದರು. ನಾನು ಮತ್ತು ಶ್ರೀಪತಿ ರಾವ್ ಜೆ.ಸಿ. ರಸ್ತೆಯಲ್ಲಿದ್ದ ಭಾರತೀಯ ಸ್ಟೇಟ್ ಬ್ಯಾಂಕಿನ ನಗರಶಾಖೆಯ ಪಾರ್ಕಿಂಗ್ ಮೂಲಕ ಒಳಗೆ ಬಂದು ಅಲ್ಲಿ ಮಹಡಿಯ ಮೇಲಿದ್ದ ಕನ್ನಡ ಸಂಘದ ಕೋಣೆಯಲ್ಲಿ ರಾಜಗೋಪಾಲರನ್ನು ಭೇಟಿಯಾದೆವು.

ಮೊದಲ ಭೇಟಿಯಲ್ಲಿ ಅವರ ದೈಹಿಕ ನಿಲುವು ನಮ್ಮನ್ನು ನಿರಾಶೆ ಗೊಳಿಸಿತು ಎಂದೇ ಹೇಳಬಹುದು. ಆದರೆ ಅವರ ಸರಳತೆ ಮತ್ತು ಕನ್ನಡದ ಕಾಳಜಿಗೆ ನಾವು ಮಾರುಹೋಗಿದ್ದೆವು. ಅಂದಿನಿಂದ ಬಹುಕಾಲದವರೆಗೆ ನಮ್ಮ ನಡುವೆ ದಿನನಿತ್ಯವೆಂಬಂತೆ ಸಂಪರ್ಕವಿತ್ತು. ರಾಜಗೋಪಾಲರು ಬ್ಯಾಂಕುಗಳಲ್ಲಿ ಕನ್ನಡದ ಬಳಕೆಗೆ ಒಂದು ಅಧೋರಚನೆಯನ್ನು ನಿರ್ಮಿಸಲು ಸಾಕಷ್ಟು ಶ್ರಮವಹಿಸಿದರು. ಕನ್ನಡದಲ್ಲಿ ಅನೇಕ ವಿಚಾರ ಸಂಕಿರಣಗಳು, ಕನ್ನಡ ನಿಘಂಟು, ಬ್ಯಾಂಕಿಂಗ್ ಪ್ರಪಂಚ ಮುಂತಾದ ಎಲ್ಲ ಚಟುವಟಿಕೆಗಳೂ ಅವರ ಕಲ್ಪನೆಯ ಮೂಸೆಯಲ್ಲಿ ರೂಪುತಳೆದವು. ಅವರ ಜೊತೆ ಕೆಲಸ ಮಾಡಲು ದೊಡ್ಡ ತಂಡವೇ ಸಿದ್ಧವಾಗಿ ನಿಂತಿತ್ತು.

ರಾಜಗೋಪಾಲರು ಬ್ಯಾಂಕುಗಳಲ್ಲಿ ಕನ್ನಡ ಕಟ್ಟುವ ಬಗೆಯ ಕುರಿತು ಮೂರು ಆಯಾಮಗಳಲ್ಲಿ ಯೋಚಿಸುತ್ತಿದ್ದರು. ಅವುಗಳಲ್ಲಿ ಮೊದಲನೆಯದು, ಮೇಲೆ ಹೇಳಿದ ಅಧೋರಚನೆಯ ನಿರ್ಮಾಣ. ಎರಡನೆಯದು ಕನ್ನಡಕ್ಕೆ ಅಪಾಯ ಬಂದಾಗ ಸೆಟೆದು ನಿಲ್ಲುವ ಸಂಘಟನೆಗಳ ನಿರ್ಮಾಣ. ಈ ನಿಟ್ಟಿನಲ್ಲಿ ಅವರು ಭಾರತೀಯ ಸ್ಟೇಟ್ ಬ್ಯಾಂಕಿನ ವಿವಿಧ ಶಾಖೆಗಳಲ್ಲಿ ಕನ್ನಡ ಸಂಘಗಳನ್ನು ಸ್ಥಾಪಿಸಿ ಆ ಎಲ್ಲ ಸಂಘಗಳ ಚಟುವಟಿಕೆಗಳಲ್ಲಿ ಸಮನ್ವಯತೆ ಸಾಧಿಸಲು ಒಂದು ನೋಂದಾಯಿತ "ಸಮನ್ವಯ ಸಮಿತಿ"ಯನ್ನೂ ಸ್ಥಾಪಿಸಿದರು. ಈ ಸಂದರ್ಭದಲ್ಲಿ ರಾಜಗೋಪಾಲರಿಂದ ಪ್ರೇರಣೆ ಪಡೆದು ಸುಮಾರು ಹದಿಮೂರು ಬ್ಯಾಂಕುಗಳಲ್ಲಿ ಕನ್ನಡ ಸಂಘಗಳು ಸ್ಥಾಪನೆಯಾದವು. ಕನ್ನಡ ಸಂಘಗಳ ನಡುವೆ ಮಾತ್ರ ಪರಸ್ಪರ ಸಹಕಾರವಿದ್ದರೆ ಸಾಲದು, ಇತರ ಕ್ಷೇತ್ರಗಳ ಕನ್ನಡ ಸಂಘಗಳ ಮತ್ತು ಹೋರಾಟಗಾರರ ಜೊತೆಯೂ ಸಕ್ರಿಯವಾದ ಸಂಬಂಧವಿರಬೇಕು ಎಂದು ಆ ನಿಟ್ಟಿನಲ್ಲಿ ಬ್ಯಾಂಕಿಂಗ್ ಕ್ಷೇತ್ರದ ಎಲ್ಲ ಕನ್ನಡ ಸಂಘಗಳನ್ನು ಒಂದೇ ವೇದಿಕೆಗೆ ತಂದು ಅಖಿಲ ಕರ್ನಾಟಕ ಬ್ಯಾಂಕ್ ಕನ್ನಡ ಸಂಘಗಳ ಪರಿಷತ್ತಿನ ಸ್ಥಾಪನೆಗೆ ಕಾರಣರಾದರು. ಈ ಕುರಿತ ಸಭೆ ಬೆಂಗಳೂರಿನ ಪುರಭವನದಲ್ಲಿ ಪ್ರಾಚಾರ್ಯ ಎಚ್ಚೆಸ್ಕೆಯವರ ನೇತೃತ್ವದಲ್ಲಿ ನಡೆಯಿತು. ಬ್ಯಾಂಕುಗಳಿಂದ ಹೊರತಾಗಿ, ಸಾಹಿತಿ ಕಲಾವಿದರ ಬಳಗ, ಕನ್ನಡ ಶಕ್ತಿ ಕೇಂದ್ರ, ಕನ್ನಡ ಸಂಘರ್ಷ ಸಮಿತಿ, ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘ, ರಾಜಕುಮಾರ್ ಅಭಿಮಾನಿಗಳ ಸಂಘ ಮುಂತಾದ ಹಲವಾರು ಕನ್ನಡಪರ ಸಂಘಟನೆಗಳು ಪರಸ್ಪರ ಕೈಜೋಡಿಸಿದವು.

ಅಖಿಲ ಕರ್ನಾಟಕ ಬ್ಯಾಂಕ್ ಕನ್ನಡ ಸಂಘಗಳ ಪರಿಷತ್ತು ೧೯೮೦ರ ದಶಕದಲ್ಲಿ ಸರೋಜಿನಿ ಮಹಿಷಿ ಸಮಿತಿ ವರದಿಯ ಶಿಫಾರಸುಗಳ ಜಾರಿ ಮತ್ತು ಗೋಕಾಕ್ ವರದಿಯ ಜಾರಿಯಾಗಿ ನಡೆದ ಚಳುವಳಿಗಳಲ್ಲಿ ಮುಖ್ಯ ಭೂಮಿಕೆ ವಹಿಸಿತು. ಇದು ಬ್ಯಾಂಕುಗಳ ಒಳಗೂ ಕನ್ನಡಪರ ಹೋರಾಟಗಳಿಗೆ ಶಕ್ತಿ ತುಂಬಿತು. ಬ್ಯಾಂಕ್ ಆಡಳಿತ ವರ್ಗಗಳು ಕನ್ನಡದ ಕೂಗನ್ನು ಗಂಭೀರವಾಗಿ ಪರಿಗಣಿಸುವಂತಾಯಿತು.

ಬ್ಯಾಂಕುಗಳಲ್ಲಿ ಕನ್ನಡದ ಬಳಕೆಗೆ ಹಿನ್ನಡೆ ಉಂಟುಮಾಡುತ್ತಿದ್ದ ಅಂಶಗಳನ್ನು ರಾಜಗೋಪಾಲರು ನಿಖರವಾಗಿ ಗುರುತಿಸಿದ್ದರು. ಆ ಅಂಶಗಳನ್ನು ಸವಾಲಾಗಿ ಸ್ವೀಕರಿಸಿ ಹೋರಾಟಕ್ಕೆ ಅಣಿಯಾಗುವಂತೆ ಪರಿಷತ್ತಿನ ಸದಸ್ಯ ಸಂಘಗಳಿಗೆ ಪ್ರೇರಣೆ ನೀಡಿದರು. ಬೆಂಗಳೂರಿನಲ್ಲಿ ಬ್ಯಾಂಕಿಂಗ್ ಸೇವಾ ನೇಮಕಾತಿ ಮಂಡಳಿಯ ಸ್ಥಾಪನೆ, ಸ್ಟೇಟ್ ಬ್ಯಾಂಕ್ ಸಮೂಹಗಳ ಪ್ರಾದೇಶಿಕ ನೇಮಕಾತಿ ಮಂಡಳಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸುವುದು, ಹಿಂದಿ ಹೇರಿಕೆಗೆ ವಿರೋಧ, ಬ್ಯಾಂಕುಗಳಲ್ಲಿ ತ್ರಿಭಾಷಾ ಸೂತ್ರದ ಬಳಕೆ, ಬೆಂಗಳೂರಿನಲ್ಲಿ ಭಾರತೀಯ ಸ್ಟೇಟ್ ಬ್ಯಾಂಕಿನ ಸ್ಥಳೀಯ ಪ್ರಧಾನ ಕಛೇರಿ ಮುಂತಾದ ವಿಷಯಗಳ ಬಗ್ಗೆ ಸ್ಪಷ್ಟವಾದ ನಿಲುವು ಹೊಂದಿ ಸೂಕ್ತ ಮಾರ್ಗದರ್ಶನವನ್ನು ನೀಡಿದ್ದರು.

ನಾವು ನಡೆಸಿದ ಕೆಲವು ಹೋರಾಟಗಳಲ್ಲಿ ಮೈಸೂರು ಬ್ಯಾಂಕಿಗೆ ಸಂತಾನಕೃಷ್ಣನ್ ಎಂಬ ತಮಿಳುಪರ ವ್ಯವಸ್ಥಾಪಕ ನಿರ್ದೇಶಕರ ಕನ್ನಡ ವಿರೋಧೀ ಧೋರಣೆಗಳನ್ನು ಪ್ರತಿಭಟಿಸಿ ಬ್ಯಾಂಕಿನ ಪ್ರಧಾನ ಕಚೇರಿಯ ಎದುರು ನಿರಂತರವಾಗಿ ಪ್ರದರ್ಶನ ಮಾಡಿದ್ದು, ಮತ್ತು ಅಂದಿನ ಗೃಹ ಸಚಿವರಾಗಿದ್ದ ಎನ್.ರಾಚಯ್ಯನವರನ್ನು ಘೇರಾವ್ ಮಾಡಿ ಅವರನ್ನು ಹಿಂದೆ ಕಳಿಸಿದ್ದು ಸ್ಮರಣೀಯ ಘಟನೆಗಳು.

ವಿವಿಧ ಬ್ಯಾಂಕುಗಳ ತಮಿಳು ಅಧಿಕಾರಿಗಳು ಕನ್ನಡದಲ್ಲಿ ಬರೆದ ಚೆಕ್ಕುಗಳನ್ನು ಮಾನ್ಯ ಮಾಡದಿದ್ದಾಗ ವ್ಯಾಪಕವಾದ ಪ್ರತಿಭಟನೆಯನ್ನು ಕೈಗೊಳ್ಳಲಾಯಿತು. ಮೈಸೂರು ಬ್ಯಾಂಕಿನ ಶಿವಮೊಗ್ಗೆ ಶಾಖೆಯಲ್ಲಿ ಅಧಿಕಾರಿಯಾಗಿದ್ದ ಅ. ಚ. ಅಶೋಕ ಕುಮಾರ ಅವರು ಕನ್ನಡದಲ್ಲಿ ಸಹಿ ಮಾಡುತ್ತಿದ್ದರು. ಬ್ಯಾಂಕು ಅದನ್ನು ಮಾನ್ಯ ಮಾಡದೆ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ನಿರ್ಧರಿಸಿತು. ಇದರ ವಿರುದ್ಧ ವಾಪಕವಾದ ಜನಾಭಿಪ್ರಾಯ ಮೂಡಿಸಲಾಯಿತು. ನಮ್ಮಲ್ಲಿ ನೂರಾರು ಜನರು ತಮ್ಮ ಸಹಿಗಳನ್ನು ಕನ್ನಡಕ್ಕೆ ಅಧಿಕೃತವಾಗಿ ಬದಲಾಯಿಸಿಕೊಂಡರು. ಬ್ಯಾಂಕುಗಳಲ್ಲಿ ಕನ್ನಡ ಫಲಕಗಳು, ಕನ್ನಡದ ನಮೂನೆಗಳು, ಕನ್ನಡದ ಸುತ್ತೋಲೆಗಳು ಕಾಣಿಸಿಕೊಳ್ಳಲು ತೊಡಗಿದವು. ಕೆಲವು ಬ್ಯಾಂಕುಗಳು ಅಧಿಕೃತ ಭಾಷಾ ವಿಭಾಗಗಳನ್ನೂ ತೆರೆದು ಕನ್ನಡ ಭಾಷಾ ಅಧಿಕಾರಿಗಳನ್ನು ನೇಮಕ ಮಾಡಿ ಕೊಂಡವು. ಬಿಎಸ್‌ಆರ್‌ಬಿ ಮೂಲಕ ನೇಮಕಾತಿಯಲ್ಲಿ ಕನ್ನಡಿಗರಿಗೆ ಆದ್ಯತೆ ದೊರೆಯುವಂತಾಯಿತು. ಇಷ್ಟರಮಟ್ಟಿಗೆ ಕನ್ನಡ ಅನ್ನದ ಭಾಷೆಯೂ ಆಯಿತು. ಇಷ್ಟೆಲ್ಲ ಚಟುವಟಿಕೆಗಳು ನಡೆಯುವಾಗ ರಾಜ್ಯ ಸರ್ಕಾರದ ಮಂತ್ರಿಗಳು ಮತ್ತು ಅಧಿಕಾರಿಗಳ ನಿರಂತರವಾದ ಸಂಪರ್ಕ, ಸಹಕಾರಗಳೂ ಇದ್ದವು ಎಂಬುದನ್ನು ಮರೆಯಬಾರದು.

ಮುಂದೆ ನಬಾರ್ಡ್ ಸಂಸ್ಥೆಯಲ್ಲಿ ಮೂವರು ಕನ್ನಡಿಗರನ್ನು ಅವರು ಕನ್ನಡಿಗರು ಎಂಬ ಕಾರಣಕ್ಕಾಗಿ ವಜಾ ಮಾಡಿದ್ದನ್ನು ಪ್ರತಿಭಟಿಸಿ ಸುಮಾರು ನಾಲ್ಕು ತಿಂಗಳುಗಳ ಕಾಲ ಚಳುವಳಿ ನಡೆಸಿದೆವು. ನಮ್ಮ ಪ್ರತಿಭಟನೆಗೆ ಬೆದರಿದ ನಬಾರ್ಡ್ ತನ್ನ ಕಚೇರಿಯನ್ನೇ

ಹೊಸೂರಿಗೆ ವರ್ಗಾಯಿಸಿತ್ತು. ಅಂತಿಮವಾಗಿ ಕೆಲಸ ಕಳೆದುಕೊಂಡ ಮೂವರಿಗೂ ನೇಮಕಾತಿ ಆದೇಶ ದೊರೆತ ಮೇಲೆಯೇ ನಮ್ಮ ಪ್ರತಿಭಟನೆ ನಿಂತಿತು. ಈ ಚಳುವಳಿಯ ನೇತೃತ್ವವನ್ನು ಅಖಿಲ ಕರ್ನಾಟಕ ಬ್ಯಾಂಕ್ ಕನ್ನಡ ಸಂಘಗಳ ಪರಿಷತ್ತು ವಹಿಸಿತ್ತು. ರಿಸರ್ವ್ ಬ್ಯಾಂಕಿನ ಅಶೋಕ ಕಿಣಿ ಮತ್ತು ಪಂಜಾಬ್ ನ್ಯಾಷನಲ್ ಬ್ಯಾಂಕಿನ ಎಸ್.ಬಿ.ಕಪಾಲಿಯವರು ಪರಿಷತ್ತಿನ ಶೀರ್ಷ ಪದಾಧಿಕಾರಿಗಳಾಗಿದ್ದರು. ಸ್ಟೇಟ್ ಬ್ಯಾಂಕಿನ ಮು.ಮಲ್ಲಿಕಾರ್ಜುನ ಅವರೂ ಪರಿಷತ್ತಿನ ಸಕ್ರಿಯ ಪದಾಧಿಕಾರಿಯಾಗಿದ್ದರು.

ಬೆಂಗಳೂರಿನಲ್ಲಿ ಭಾರತೀಯ ಸ್ಟೇಟ್ ಬ್ಯಾಂಕಿನ ಸ್ಥಳೀಯ ಪ್ರಧಾನ ಕಚೇರಿಯ ಸ್ಥಾಪನೆಗಾಗಿ ನಡೆದ ಹೋರಾಟ ಸ್ಮರಣೀಯ. ೧೯೮೩ಕ್ಕಿಂತ ಮೊದಲು ಬ್ಯಾಂಕಿನ ಕರ್ನಾಟಕದ ಶಾಖೆಗಳು ಮದ್ರಾಸ್ ಸ್ಥಳೀಯ ಪ್ರಧಾನ ಕಚೇರಿಯ ಆಡಳಿತಕ್ಕೊಳಪಟ್ಟಿದ್ದವು. ಇದರಿಂದಾಗಿ ವಿಪರೀತವಾಗಿ ತಮಿಳು ಅಧಿಕಾರಿಗಳ ನಿಯೋಜನೆ ಮತ್ತು ಕನ್ನಡದ ಉದ್ಯೋಗಿಗಳ ವಿರುದ್ಧ ಮಲತಾಯಿ ಧೋರಣೆ ಕಂಡುಬಂದಿತ್ತು. ಕರ್ನಾಟಕದಲ್ಲಿ ಬ್ಯಾಂಕಿನ ಶಾಖೆಗಳ ವಿಸ್ತರಣೆಗೂ ತಮಿಳಿಗರು ಕ್ಯಾತೆ ತೆಗೆಯುತ್ತಿದ್ದರು. ಇದನ್ನು ನಿರಂತರವಾಗಿ ಪ್ರತಿಭಟಿಸುತ್ತಿದ್ದ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು, ಅಧಿಕಾರಿಗಳು ಮತ್ತು ಉದ್ಯೋಗಿಗಳ ಸಂಘಗಳು ಕರ್ನಾಟಕಕ್ಕೆ ಪ್ರತ್ಯೇಕವಾದ ಸ್ಥಳೀಯ ಪ್ರಧಾನ ಕಚೇರಿಯನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾದವು. ಒಂದು ರಾಜ್ಯಕ್ಕೆ ಸೀಮಿತವಾದಂತೆ ಸ್ಥಳೀಯ ಪ್ರಧಾನ ಕಚೇರಿಯನ್ನು ಬ್ಯಾಂಕು ತೆರೆದದ್ದು ಅದೇ ಮೊದಲು ಎಂಬುದು ಕನ್ನಡಿಗರ ಅಗ್ಗಳಿಕೆ. ಆಡಳಿತ ಕಚೇರಿಯೇನೋ ಬೆಂಗಳೂರಿಗೆ ಬಂದಿತ್ತು, ಆದರೆ ನೇಮಕಾತಿ ಮಂಡಳಿ ಮದ್ರಾಸಿನಲ್ಲಿಯೇ ಉಳಿದಿತ್ತು. ಅದನ್ನು ಬೆಂಗಳೂರಿಗೆ ಸ್ಥಳಾಂತರಿಸಲು ತಮಿಳು ಅಧಿಕಾರಿಗಳು ಅಡ್ಡಿಯಾಗಿದ್ದರು. ಬ್ಯಾಂಕಿನ ಕೇಂದ್ರ ಕಚೇರಿಯ ಮೇಲೆ ಒತ್ತಡ ಹೇರಿ ಮಂಡಳಿಯನ್ನು ಮದ್ರಾಸಿನಲ್ಲಿಯೇ ಉಳಿಸಿಕೊಳ್ಳಲು ಅವರು ಯಶಸ್ವಿಯಾಗಿದ್ದರು.

೧೪ ಆಗಸ್ಟ್ ೧೯೮೩ – ಬೆಂಗಳೂರಿನಲ್ಲಿ ಭಾರತೀಯ ಸ್ಟೇಟ್ ಬ್ಯಾಂಕಿನ ಸ್ಥಳೀಯ ಪ್ರಧಾನ ಕಚೇರಿಯ ಉದ್ಘಾಟನೆಗೆ ಕೇಂದ್ರ ಹಣಕಾಸು ರಾಜ್ಯ ಸಚಿವ ಶ್ರೀ ಬಿ. ಜನಾರ್ಧನ ಪೂಜಾರಿಯವರು ಆಗಮಿಸಿದ್ದರು. ಬ್ಯಾಂಕಿನ ಚೇರ್ಮನ್ ಶ್ರೀ ಎಸ್. ಪಿ. ಗೋಯಲ್ ಕೂಡ ಬಂದಿದ್ದರು. ಇದೇ ಸುಸಮಯವೆಂದು ಭಾವಿಸಿದ ಸಾವಿರಾರು ಕನ್ನಡಪರ ಹೋರಾಟಗಾರರು ಬೆಂಗಳೂರು ಸ್ಥಳೀಯ ಪ್ರಧಾನ ಕಚೇರಿಯ ಆವರಣದಲ್ಲಿ ಜಮಾಯಿಸಿದರು. ಎಲ್ಲರೂ 'ಗೋಯೆಲ್, ಗೋ ಬ್ಯಾಕ್' ಎಂಬ ಫಲಕ ಹಿಡಿದಿದ್ದರು. ಆವರಣದಲ್ಲಿ ಸಾಸಿವೆಕಾಳೂ ನೆಲಕ್ಕೆ ಬೀಳದಷ್ಟು ದಟ್ಟವಾಗಿ ಕನ್ನಡಪರ ಹೋರಾಟಗಾರರು ನೆರೆದಿದ್ದರು ಎಂದರೆ ಅತಿಶಯೋಕ್ತಿಯಲ್ಲ. ಪರಿಸ್ಥಿತಿಯ ಗಂಭೀರತೆಯನ್ನು ಅರಿತು, ಪೂಜಾರಿಯವರು ಸ್ಥಳದಲ್ಲಿಯೇ ಪ್ರಾದೇಶಿಕ ನೇಮಕಾತಿ ಮಂಡಳಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸುವ ನಿರ್ಧಾರವನ್ನು ಪ್ರಕಟಿಸಿದರು. ಸ್ಟೇಟ್ ಬ್ಯಾಂಕಿನ ಕನ್ನಡಿಗರ ವಿಜಯವು ಬ್ಯಾಂಕಿನ ಸಂಪೂರ್ಣ ಕನ್ನಡೀಕರಣಕ್ಕೆ ನಾಂದಿ ಹಾಡಿತು. ಅಲ್ಲಿಂದ ಮುಂದೆ ಬ್ಯಾಂಕು ಕರ್ನಾಟಕದಲ್ಲಿ ಪ್ರಗತಿಯ ದಾಪುಗಾಲಿಟ್ಟು ಮುಂದುವರಿಯಿತು.

ಇನ್ನೆರಡು ಹೋರಾಟಗಳ ಕುರಿತೂ ಇಲ್ಲಿ ಪ್ರಸ್ತಾಪ ಮಾಡಬೇಕು. ಒಂದು, ಹಿಂದಿ ಭಾಷೆ ಹೇರಿಕೆ ವಿರೋಧಿ ಕ್ರಿಯಾಸಮಿತಿ ಸ್ಥಾಪನೆ. ಇದಕ್ಕೂ ಅಶೋಕ ಕಿಣಿಯವರೇ ಅಧ್ಯಕ್ಷರು. ಈ ಕ್ರಿಯಾ ಸಮಿತಿಯ ಆಶ್ರಯದಲ್ಲಿ ರಿಸರ್ವ್ ಬ್ಯಾಂಕೂ ಸೇರಿದಂತೆ ಅನೇಕ ಬ್ಯಾಂಕುಗಳ ಎದುರು ಪ್ರದರ್ಶನ ಮಾಡಲಾಯಿತು. ಬ್ಯಾಂಕುಗಳ ಹಿರಿಯ ಅಧಿಕಾರಿಗಳಿಗೆ, ಕರ್ನಾಟಕಕ್ಕೆ ಭೇಟಿ ನೀಡುತ್ತಿದ್ದ ಕೇಂದ್ರ ಸರಕಾರದ ಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿತ್ತು. ಇನ್ನೊಂದು, ಮದ್ರಾಸಿನಲ್ಲಿದ್ದ ನೇಮಕಾತಿ ಮಂಡಳಿಯು ಕೈಗೊಂಡಿದ್ದ ನೇಮಕಾತಿ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ತಡೆದದ್ದು. ಮದ್ರಾಸಿನ ನೇಮಕಾತಿ ಮಂಡಳಿಯು ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಿ ಬೆಂಗಳೂರಿನ ೩೮ ಕಾಲೇಜುಗಳಲ್ಲಿ ಪರೀಕ್ಷೆಯ ವ್ಯವಸ್ಥೆಯನ್ನು ಮಾಡಿತ್ತು. ನಾನು ಮತ್ತು ಶೃಂಗೇಶ್ವರ ಶರ್ಮಾರು ಪ್ರತಿಯೊಂದು ಕಾಲೇಜಿಗೂ ಕರೆ ಮಾಡಿ, “ನಾವು ನಿಮ್ಮ ಕಾಲೇಜಿನ ಎದುರು ಪ್ರತಿಭಟನೆ ಮಾಡುತ್ತೇವೆ. ಆಗುವ ಅನಾಹುತಗಳಿಗೆಲ್ಲ ನೀವೇ ಹೊಣೆಯಾಗುತ್ತೀರಿ” ಎಂದು ಹೇಳಿದೆವು. ಅನೇಕ ಕಾಲೇಜುಗಳು ಪರೀಕ್ಷೆ ನಡೆಸಲು ಕೊಟ್ಟ ಅನುಮತಿಯನ್ನು ಹಿಂದಕ್ಕೆ ತೆಗೆದುಕೊಂಡವು. ಕೆಲವು ಕಾಲೇಜುಗಳ ಎದುರು ಪೋಲೀಸ್ ವ್ಯಾನ್‌ಗಳು ಪಹರೆ ಕಾಯುತ್ತಿದ್ದವು. ನೇಮಕಾತಿ ಮಂಡಳಿಯು ತನ್ನ ಪರೀಕ್ಷೆಗಳನ್ನು ನಿಲ್ಲಿಸಬೇಕಾಯಿತು.

ಈ ಎಲ್ಲ ಹೋರಾಟಗಳ ಹಿಂದೆ ರಾಜಗೋಪಾಲರ ದೂರದೃಷ್ಟಿಯ ಒಂದು ಚಿಂತನೆ ಇತ್ತು ಎಂದರೆ ಅತಿಶಯೋಕ್ತಿಯಲ್ಲ. ೧೯೮೦ರಲ್ಲಿ ನಾನು ರಾಜಗೋಪಾಲರ ಸಂಪರ್ಕಕ್ಕೆ ಬಂದಾಗ ಅವರು ಒಂದು ವಿಷಯವನ್ನು ಸ್ಪಷ್ಟವಾಗಿ ಗುರುತಿಸಿ ನಮ್ಮ ಹತ್ತಿರ ಹಂಚಿಕೊಂಡಿದ್ದರು. ಬ್ಯಾಂಕುಗಳಲ್ಲಿ ಕನ್ನಡದ ಬೆಳವಣಿಗೆಗೆ ಅಧಿಕಾರಿಗಳ ಸಹಕಾರ ಎಷ್ಟು ಮುಖ್ಯವೋ, ಅಷ್ಟೇ ಮುಖ್ಯ, ಕಾರ್ಮಿಕ ಸಂಘಟನೆಗಳ ಸಹಕಾರ

ಎಂದು. ಅಂದು ಕಾರ್ಮಿಕ ಸಂಘಗಳ ನೇತೃತ್ವವನ್ನು ತಮಿಳರೇ ವಹಿಸಿದ್ದರು. ಎಸ್‌ಬಿಐಯಲ್ಲಿ ನಟರಾಜನ್, ಬಾಲಗೋಪಾಲ ಮೆನನ್,ಗೋವಿಂದರಾಜನ್, ಐಕೋಬೂ ಸಂಘಟನೆಯಲ್ಲಿ ಎಲ್.ವಿ.ಸುಬ್ರಮಣಿಯನ್, ಏಐಬಿಇಎಯಲ್ಲಿ ಪಿ.ಎಸ್.ಸುಂದರೇಶನ್, ಎನ್.ಜಗನ್ನಾಥನ್ ಮುಂತಾದವರು ನೇತೃತ್ವದ ಮುಂಚೂಣಿಯಲ್ಲಿದ್ದರು. ಇವರ ಹಿಡಿತದಿಂದ ಕಾರ್ಮಿಕ ಸಂಘಟನೆಗಳನ್ನು ಬಿಡುಗಡೆಗೊಳಿಸಿ ಕನ್ನಡಿಗರ ನಾಯಕತ್ವವನ್ನು ಸ್ಥಾಪಿಸಬೇಕೆಂದು ರಾಜಗೋಪಾಲರು ಹೇಳುತ್ತಿದ್ದರು. ಅವರ ಈ ಆಶಯ ಯಶಸ್ವಿಯಾಯಿತು. ಐಬಾಕ್ ಸಂಸ್ಥೆಯ ನೇತೃತ್ವವನ್ನು ಆರ್.ಎಸ್.ಗೋಡ್ಬೋಲೆ, ಎಸ್.ಸಿ.ಬಿ.ಇ.ಯಲ್ಲಿ ಸತೀಶ್ ವಾಘ್ ಮತ್ತು ಬಿ.ಎಸ್. ವೆಂಕಟನರಸಯ್ಯ ನೇತೃತ್ವ ವಹಿಸಿಕೊಂಡರು. ಕರ್ನಾಟಕದಲ್ಲಿ ಏಐಬಿಇಏ ಸಂಘಟನೆಯೂ ಅಧಿಕಾರವನ್ನು ಕನ್ನಡಿಗರಿಗೆ ಬಿಟ್ಟುಕೊಟ್ಟಿತು. ಇದು ಅಷ್ಟು ಸುಲಭದ ಪರಿವರ್ತನೆಯಾಗಿರಲಿಲ್ಲ. ಅಂದು ಮಂಚೂಣಿಯಲ್ಲಿದ್ದ ಕನ್ನಡಿಗ ಕಾರ್ಮಿಕರು ಸಾಕಷ್ಟು ಕಷ್ಟನಷ್ಟಗಳನ್ನು ಅನುಭವಿಸಬೇಕಾಯಿತು. ಈ ರೀತಿಯಾಗಿ ಕರ್ನಾಟಕದ ಬ್ಯಾಂಕುಗಳಲ್ಲಿ ಕನ್ನಡಮಯ ವಾತಾವರಣವನ್ನು ಸೃಷ್ಟಿಸಲು ರಾಜಗೋಪಾಲರು ಪ್ರೇರಣೆ ನೀಡಿದ್ದು ನಾನು ಮೊದಲು ಹೇಳಿದ ಮೂರನೆಯ ಆಯಾಮ.

ಆದರೆ ಇತ್ತೀಚಿನ ದಿನಗಳಲ್ಲಿ ಬ್ಯಾಂಕುಗಳಲ್ಲಿ ಕನ್‌ನಡದ ಸ್ಥಿತಿಗತಿಯ ಕುರಿತು ರಾಜಗೋಪಾಲರಲ್ಲಿ ಕೊಂಚ ವಿಷಾದವಿತ್ತು. ಸಿಕ್ಕಿದಾಗೆಲ್ಲ ''ಮತ್ತೆ ಚಳವಳಿ ಶುರುಮಾಡಬೇಕು, ಕಣಯ್ಯ'' ಎಂದು ಹೇಳಿಯೇ ಹೇಳುತ್ತಿದ್ದರು. ಅವರು ನಮ್ಮನ್ನು ಸಂಬೋಧಿಸುತ್ತಿದ್ದುದೇ ಹುಟ್ಟು ಹೋರಾಟಗಾರರೆಂದು! ಇಂದು ತಮಿಳರ ಬದಲಿಗೆ ತೆಲುಗರು, ಬಿಹಾರಿಗಳು, ಹಿಂದಿವಾಲಾಗಳು ಕರ್ನಾಟಕದ ಉದ್ಯೋಗಗಳನ್ನು ಕಬಳಿಸುತ್ತಿದ್ದಾರೆ. ಬ್ಯಾಂಕ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕನ್ನಡದ ಬಗ್ಗೆ ತೀವ್ರವಾದ ಅಸಡ್ಡೆ, ಅಸಹನೆ ತೋರುತ್ತಿದ್ದಾರೆ. ಬಹುಶಃ ರಾಜಗೋಪಾಲರಲ್ಲಿ ಈ ಕುರಿತು ಹತಾಶೆಯಿತ್ತು. ಬ್ಯಾಂಕುಗಳಲ್ಲಿ ಕನ್ನಡದ ಬಳಕೆಗೆ ಅಧೋರಚನೆ ಸಿದ್ಧ ಮಾಡಿದರೂ ಅದನ್ನು ಬಳಕೆ ಮಾಡಬೇಕಾದ ಜನರಲ್ಲಿ ನಿರುತ್ಸಾಹ, ಮತ್ತು ಬ್ಯಾಂಕುಗಳಲ್ಲಿ ಕನ್ನಡಕ್ಕಾಗಿ ಕೈಯೆತ್ತುವ ಮನೋಭಾವವನ್ನು ಉಳಿಸಿಕೊಳ್ಳಲು ಬೇಕಾದ ಸಂಘಟನೆಗಳನ್ನು ನಿರ್ಮಾಣ ಮಾಡದಿರುವುದು ತಮ್ಮ ವೈಫಲ್ಯ ಎಂದು ಅವರು ಭಾವಿಸಿರಬೇಕು.

ಅದಕ್ಕಾಗಿಯೇ ಅವರು ಅಂದು ಹತಾಶೆಯಿಂದ ''ನನ್ನನ್ನು ಬೈದು ಒಂದು ಕವನ ಬರೆ'' ಎಂದು ನನ್ನ ಹತ್ತಿರ ಹೇಳಿರಬೇಕು. ಈಗ ಹೇಳಿ, ನಾನು ರಾಜಗೋಪಾಲರನ್ನು ಬೈದು ಕವನ ಬರೆಯಬೇಕೆ? ಅಥವಾ ರಾಜಗೋಪಾಲರಿಗೆ ಶ್ರದ್ಧಾಂಜಲಿ ಎಂದರೆ ಅಷ್ಟೇ ಸಾಕೇ?

***




ಮೈಸೂರು ಬ್ಯಾಂಕ್ ಕನ್ನಡ ಬಳಗದಿಂದ ರಾಜಗೋಪಾಲರಿಗೆ ಸನ್ಮಾನ:
ಸಾಹಿತಿ ಶ್ರೀ ಹಂ.ಪ.ನಾಗರಾಜಯ್ಯ ಮತ್ತು ರಂಗನಟಿ ಶ್ರೀಮತಿ ಬಿ.ಜಯಶ್ರೀ, ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಶ್ರೀ ದಿಲೀಪ್ ಮಾವಿನಕುರ್ವೆ, ಬಳಗದ ಅಧ್ಯಕ್ಷ ಶ್ರೀ ಎಸ್.ಶೃಂಗೇಶ್ವರ ಶರ್ಮ (ಮೇ 2010)

ಪಾ. ರಾಜಗೋಪಾಲ – ನೆನಪು (02.03.2025)



ಸಮನ್ವಯ ಸಮಿತಿಯಿಂದ ಪಾ. ರಾಜಗೋಪಾಲರಿಗೆ ಅಭಿನಂದನೆ, ಸನ್ಮಾನ ಪತ್ರ ಅರ್ಪಣೆ (ಕೆ.ಎನ್.ಮಹಾಬಲ, ಎಂ.ಎಸ್.ನರಸಿಂಹಮೂರ್ತಿ, ಪ್ರಧಾನ ಗುರುದತ್ತ, ಬೆಂ.ಶ್ರೀ.ರವೀಂದ್ರ, ರವಿ ಬಾಳಿಹಳ್ಳಿ)





'ಬ್ಯಾಂಕನ್ನಡದ ಜೀವನದಿ – ಪಾ. ರಾಜಗೋಪಾಲ' ಅಭಿನಂದನಾ ಗ್ರಂಥ ಬಿಡುಗಡೆ



'ಛಲದಂಕಮಲ್ಲ ಪಾ.ರಾ..' ರಂಗ ಪ್ರದರ್ಶನ – ಕಲಾವಿದರೊಂದಿಗೆ ಪಾ. ರಾಜಗೋಪಾಲ

ಕವಿಮನ

ಪ್ರಾಯ ಸರಿದಾಗ

ಕನ್ನಡಿಯ ಮುಂದೆ ಸಿಂಗರಿಸಿಕೊಳ್ಳುವಾಗ,
ಕಣ್ಣಿಗೆ ಕಾಡಿಗೆಯನ್ನು ತಿದ್ದಿ ತೀಡಿ ನಿಂತಾಗ,
ಗುಲಾಬಿ ತುಟಿಯ ಚೆಲುವಿಗೆ ನಾಚಿ ನಕ್ಕಾಗ,
ಸುಕ್ಕಿಲ್ಲದ ಮೊಗದಿ ಬೇಡದ ಕೂದಲು ಕಂಡಾಗ!

ಘನಘೋರ ಮೇಘದಂತೆ ದಟ್ಟವಾದ ಕೇಶ
ಶೃಂಗಾರದಿ ಸರಿಸಿ ಮುತ್ತಿಡುತ್ತಿದ್ದೆನ್ನ ಪ್ರಾಣೇಶ.
ಇನ್ನು ಕಪ್ಪಗಿದ್ದರೂ ಈಗಿಲ್ಲ ಆಗಿನ ಗಮ್ಮತ್ತು
ಎಷ್ಟೇ ಪೋಷಿಸಿದರೇಕೋ ಉದುರಿಹೋಯಿತು!

ಸ್ವಲ್ಪ ಮಾಡಿದರೂ ಆಯಾಸವಾಗಿದೆಯಲ್ಲ,
ಯಾವ ವಿಷಯಕ್ಕೂ ಉತ್ಸಾಹವೇ ಬರುತ್ತಿಲ್ಲ
ಏನು ಬೇಕೋ ತಿನ್ನಲೂ ಆಸೆಯೇ ಆಗುತ್ತಿಲ್ಲ
ಇದ್ದಕ್ಕಿದ್ದಹಾಗೆ ಏಕೋ ಬೊಜ್ಜು ಹೆಚ್ಚಾಯಿತಲ್ಲ!

ಇನಿಯ ನೀನೀಗ ಸನಿಹಕೆ ಬಂದರೆ,
ಸಂತೈಸಲು ಬೆಚ್ಚಗೆ ನನ್ನನ್ನು ಅಪ್ಪಿದರೆ,
ಒಮ್ಮೊಮ್ಮೆ ಅತ್ಯಂತ ಹಿತವೇ, ಆದರೆ,
ಅನೇಕ ಬಾರಿ ಮೈಮನದಲ್ಲೇನೋ ತೊಂದರೆ!

ಅದೊಂದು ದಿನ ನೀ ಮಾಡಲು ಹೇಳಿದ್ದೆ ಇಸ್ತ್ರಿ,
ಅವಸರ ಬೇಡ ನಾ ಮಾಡಿ ಕೊಡುವೆ, ತಡೀರಿ.
ಮೂರಕಾಸಿಗೆ ಅಂಗಡಿಯವ ಮಾಡಿ ಕೊಟ್ಟ
ನನ್ನವ ನನಗೆ ಕೆಲಸ ಹೇಳೋದ್ ಬಿಟ್ಬಿಟ್ರು.

ಹಿಂದೆಲ್ಲ ನನ್ನ ಕೈ ರುಚಿಯೇ ಬೇಕಿತ್ತು ಮಕ್ಕಳಿಗೆ
ಈಗ ಆರ್ಡರ್ ಮಾಡಿದ ತಿಂಡಿ ಬಂದಿತ್ತು ಬಾಗಿಲಿಗೆ.
ನನಗನಿಸಲಿಲ್ಲ ನನ್ನ ಕೆಲಸವಾಯಿತಲ್ಲ ಕಡಿಮೆ
ಬೇಡವಾಯಿತಾ, ಇನ್ನಾರಿಗೆ ನನ್ನ ಎಲ್ಲ ದುಡಿಮೆ?

ನಿಮ್ಮೆಲರ ಬಾಳಿನಲಿನ್ನು ಇಲ್ಲವೇ ನನ್ನ ಅವಶ್ಯಕತೆ?
ನಿರುಮ್ಮಳಾಗಬೇಕೆ? ಯಾರಿಗೆ ಹೇಳಲಿ ಈ ವ್ಯಥೆ?
ಸಹಾಯವಿರಲಿಲ್ಲ, ಆಗುತ್ತಿತ್ತು ಬಲು ಸುಸ್ತು
ಆದರೂ ಇಲ್ಲಿ ನನ್ನ ಕೋಳಿಯೇ ಕೂಗುತ್ತಿತ್ತು.

ವಿನಾಕಾರಣ ಅಳಬೇಕೆನಿಸಿತೋ ಇನಿಯ,
ಸದಾ ಜಾಣೆ, ಒಮ್ಮೊಮ್ಮೆ ತೋಚದು ಉಪಾಯ,
ಇನ್ನೊಮ್ಮೆ ಅತಿ ಕೋಪ, ಒಂದೊಮ್ಮೆ ಅತಿ ಭಯ,
ಹೊಸದಿದು, ನನಗಿಲ್ಲ ನನ್ನದೇ ಪರಿಚಯ!

ಇದಕ್ಕೆಲ್ಲ ತಿಳಿದಿಲ್ಲ ಕಾರಣ, ನನ್ನದೇನು ತಪ್ಪು?
ಬಂದೇ ಬಿಟ್ಟಿತಾ ಬರಿ ನಲವತ್ತಕ್ಕೆ ಮುಪ್ಪು?
ಋತುಬಂಧಕ್ಕೆ ಇದೆಯಲ್ಲ ಸಾಕಷ್ಟು ಸಮಯ,
ಗೆಳೆಯ, ನನ್ನನ್ನು ಸಂಭಾಳಿಸಿ, ತೋರು ನೀ ಅಭಯ.

– ಸ್ನೇಹಾ ಶಶಿಧರ
03.12.2025

ಕವಿಮನ

ಬರೆಯಲಾಗದ ಕವನ

ನಾನೇಕೆ ಬರೆಯಲಾರೆ ಕವನ
ಬರೆಯಬೇಕೆಂದು ಕೊಂಡರೂ ಅನುದಿನ

ಬಿಸಿ ಕಾವಲಿಗಳ ಮೇಲೆ ಬರೆದ
ದೋಸೆಗಳೆಷ್ಟೋ ನೆನಪಿಲ್ಲ.
ಕಾಗದದ ಮೇಲೆ ಸಾಗದಲ್ಲ ಹಾಗೆ ಕೈಹಿಡಿದ ಪೆನ್ನು.

ಚಪ್ಪರಿಸಿ ತಿಂದು ಮೆಚ್ಚಿದರು ಜನ
ನಾ ಮಾಡಿದ ಸವಿ ತಿನಿಸುಗಳನು
ಒಂದೆರಡು ಕವನ ಓದುವನೆಂದರೆ
ಅದೇಕೋ ತಪ್ಪಿಸಿಕೊಂಡು ಓಡುವರು.

ಯಾರೂ ಓದದ ಕವನ ನಾನಾದರೂ ಏಕೆ ಬರೆಯಲಿ?
ಉಚಿತವಾಗಿ ಕೊಟ್ಟರು ಓದಲು ಪುರುಸೊತ್ತಿಲ್ಲದವರಿಗೆ.
ಅಚ್ಚು ಹಾಕಿದರೆ ಪ್ರಕಾಶಕರಿಗೆ ನಷ್ಟ,
ಪತ್ರಿಕಾ ಸಂಪಾದಕರಿಗೆ ಪ್ರಕಟಿಸಲು ಕಷ್ಟ.

ಹೇಳಿ, ಈಗ ನಾನೇಕೆ ಬರೆಯುತ್ತಿಲ್ಲವೆಂದು ಕವನ
ಬರೆಯಬೇಕೆಂದುಕೊಂಡರೂ ಅನುದಿನ.

ಓದುವಾಗಲೆಲ್ಲ ಎಂತೆಂಥ ಕವನ
ತಳಮಳಿಸುವುದು ನನ್ನ ಕವಿ ಮನ
ಬರೆಯಬಲ್ಲೆನೆ ನಾನು ಹೀಗೆ ಒಂದು ದಿನ
ಸೆಳೆಯಬಲ್ಲೆನೆ ನಿಮ್ಮೆಲ್ಲರ ಗಮನ.

ಯಾವ ಕವಿಗೋಷ್ಠಿಗೂ ಸಿಗದ ಆಹ್ವಾನ
ಬಹುಮಾನ, ಪ್ರಶಸ್ತಿಗಳಂತೂ ಅನುಮಾನ.
ಯಾಕೆ ಬರೆಯುತ್ತೀರಿ ಸುಮ್ಮನೆ?
ಬರೆದವರಿದ್ದಾರೆ ಮೈಲುದ್ದ ಎಂಬ ಅವಮಾನ.

ಯಾರು ಕಿವಿ ಮುಚ್ಚಿದರು ಕವಿಗೆ
ಸಿಗುವುದಿಲ್ಲ ಸ್ಫೂರ್ತಿ.
ಈಗಲಾದರೂ ಕೇಳಿ ದಯವಿಟ್ಟು
ಈ ನನ್ನ ಕವನ ಒಂದೇ ಒಂದು ಸಾರ್ತಿ

ಮೆಚ್ಚಿ ಕೊಂಡರೆ ಈ ನನ್ನ ಕವನ
ನಿಮಗೆ ನನ್ನ ನೂರೆಂಟು ನಮನ.
ಉಳಿಸಿದರೆಂದು ನನ್ನ ಮಾನ,
ಹೋಗಲಾಡಿಸಿ ಕವಿ ನಾನಲ್ಲ ಎಂಬ ಅನುಮಾನ.

– ನಾಗರತ್ನ ಚಂದ್ರಶೇಖರ್
10.12.2025

ಕವಿಮನ

ವರುಷಗಳು ಉರುಳುತಿರಲು

ಸುಕ್ಕುಗಳು ಅರಳಿದಾಗ
ಮೂಳೆಗಳು ಮೊಂಡಾಗಿರಲು
ಸುಮ್ಮನಿದ್ದುಬಿಡು ಸುಮ್ಮನೆ
ನೀ ಸರಿಯಿದ್ದರೇನು, ಕೇಳದೇ ಹೇಳಿದ
ಉಪದೇಶವದು ಘಾತಕವು ನಿನಗೆ

ಬೇಡಿದಾಗ ಮಾತ್ರವೇ ನೀಡು,
ಉಪದೇಶದ ಬೀಜ ನೆಡಬೇಡ
ಹಠಮಾರಿ ಕಳೆ ಬೆಳೆಯುವಂತೆ,
ಬಂಧುಬಳಗಕೆ ನೋವುಣಿಸದಿರು
ಪ್ರೀತಿಯದು ಮನದಾಳದಿರಲಿ
ವಿವರಣೆಯ ಬೇಕಾಗದಿರದು

ಕರುಬದಿರು ನಿನ್ನ ಮಂಡಿ, ಮಾತ್ರೆಗೆ
ದೂರದಿರು ನಿನ್ನ ಅಕ್ಕಪಕ್ಕದವರನು,
ವೆಚ್ಚವನು, ರಾಜಕೀಯ ನಾಯಕರನು
ಕಹಿಯಾಗದಿರು, ಬೋರು ಮಾಡದಿರು
ಇಂದಿನ ಕಾಲದಿ ಗೊಣಗುವ ಹಿರಿಯರನು
ನಿರ್ಲಕ್ಷ್ಯ ಮಾಡುವರು ಮನೆಮಂದಿ ಸಹ

ದೂರವಿರಲಿ ನಿನ್ನುಪದೇಶವು
ಹಿರಿಯನಂತೆ ಮಾಡದಿರು ಭಾಷಣವ
ಹೇಳದಿರು ಹೀಗಿತ್ತು ನನ್ನ ಕಾಲದಲಿ
ಹೀಗೆ ಹಾಗೆ ನಾ ಮಾಡಿದೆನೆಂದು
ದೊಡ್ಡವನು ನನಗೆಲ್ಲ ಗೊತ್ತೆಂದು
ವಿವೇಕವಲ್ಲವದು, ಬೊಗಳಿಕೆಯು

ಕಿರಿಯರು ನಮಿಸಬೇಕೆಂದೆಣಿಸದಿರು
ಪ್ರೀತಿ ಗೌರವಗಳು ಮನದಲಿಹುದು
ದಿನದಿನದಿ ಕೃತಜ್ಞತೆಯ ತೋರದಿಹರು
ನಾವದನು ಕನಸಲೇ ಕಾಣುತಿಹೆವು

ತರುಣ ವೇಷಕೆ ವೆಚ್ಚವ ಮಾಡದಿರು
ಮಿಥ್ಯವು ಲೇಪನ ಕೃತಕ ಕೇಶಗಳು
ದೇಶವ ಸುತ್ತಾಡು ಕೋಶವ ಓದು
ನರ್ತನವ ಮಾಡು ಅಲೆದಾಡುತಿರು
ಸುಕ್ಕು ಕಡಿಮೆಯಾಗಿ ಮರಳು ಮನೆಗೆ

ಹಿಂದೆ ಬೀಳದೆ ಜೊತೆಯಾಗಿ ನಡೆದು
ಹೊಸದನ್ನು ಕಲಿತು ಅರಳಿಸು ಮನವ
ಸುದ್ದಿ ಸಮಾಚಾರಗಳನು ಓದು, ನೋಡು
ತಂತ್ರಾಂಶ ಸತ್ವಗಳನು ಬಿಡಿಸಿ ಅರಿತುಕೊ
ಸದಾ ನಿದ್ರಿಸುವ ವ್ಯಕ್ತಿಯಾಗದಿರು

ಇಷ್ಟವಿದ್ದುದ ಮಾಡು ಶಕ್ತಿಯಿರುವ ತನಕ
ನಿನಗ ನೀನೆ ಅಭಿಮಾನಿಯೂ ಭಕ್ತನೂ
ನೆನಪಿನಾಳವನು ಕೆದಕಿ ಕೆದಕಿ ಹುಡುಕಿ
ಮುಳುಗದಿರು ಅಪರಾಧಿಭಾವ ಶರಧಿಯೊಳು
ನಿನ್ನದೇ ಉತ್ತಮ ಮಟ್ಟದಲಿ ನೀಗಿರುವೆ ಕಾಲ
ದೂರಿಕೊಳ್ಳದಿರು ಹೀಗೆ ಮಾಡಬೇಕಿತ್ತೆಂದು

ನಿನ್ನ ಹೆಮ್ಮೆ ಏರಿರಲಿ, ನಿನ್ನ ಶೈಲಿ ಹೆಸರೂ ಸಹ
ವಯೋಮಾನದಲಿ ಮಿಂದು ಪರಿತಪಿಸುತ
ಆಗದಿರು ಬಲಿಯೇ ತ್ಯಾಗಿಯೇ ವಿರಾಗಿಯೋ
ಪ್ರೀತಿ ಪ್ರೇಮವ ಹಂಚುತಿರು ನಿರಪೇಕ್ಷೆಯಿಂದ
ಅದುವೇ ನೆಮ್ಮದಿಯ ಜೀವನದ ಉತ್ತಮಕಲೆ
ಸಂತೃಪ್ತ ತಾರುಣ್ಯದ ಹೃದಯವದು ಕಾಣು

– ಎಸ್. ಮಂಜುನಾಥ (ಹಿಮನಾಥ)
24.12.2025

ಕವಿಮನ

ಕಾಣದ ಸ್ವರ್ಗ

ಸ್ವರ್ಗ ಇಲ್ಲವೇ ಭುವಿಯಲ್ಲಿ
ತಂದಿಡುವೆ ನೀನೇಕೆ
ನರಕ ಇಲ್ಲಿ
ಹೊರುವಳು ಭೂ ತಾಯಿಯಿಲ್ಲಿ
ಸುಖಿಸಲು ಇದೆ ಬಹಳ ಇಲ್ಲಿ
ಸೃಷ್ಟಿಸಬಹುದು ಸ್ವರ್ಗವನ್ನಿಲ್ಲಿ
ಸಾಯಿಸಿ ಸ್ವರ್ಗವ ಕಾಣುವ
ಹುಚ್ಚಾಟ ನಿನಗೇಕೆ ಇಲ್ಲಿ

ಸಂಭ್ರಮಿಸಲು ಏನಿಲ್ಲ ಇಲ್ಲಿ.?
ತಂದೆ ತಾಯಿ ಬಂಧು ಬಳಗ
ಹಸಿರು ನೀರು ವನ ಉದ್ಯಾನ
ಸ್ನೇಹ ಪ್ರೀತಿ ಪ್ರೇಮ ಬಂಧನ
ಕಥೆ ಕಾದಂಬರಿ ಕವನ
ನಗು ಹರಟೆ ಕೋಪ ಹಾಸ್ಯ
ಸೌಂದರ್ಯ ಶೃಂಗಾರ ಲಾಸ್ಯ
ನೋಡಿದಷ್ಟು ತಣಿಯದ ನೋಟ
ಸಾಕು ಸಾಕೆನಿಸುವಷ್ಟು ಊಟ
ಸಂಪತ್ತು ಹಣದ ಒಡನಾಟ

ಪಟ್ಟಿ ಮಾಡಲಾರೆ ಸಿಗುವ ಆನಂದ ಇಲ್ಲಿ
ಸ್ವರ್ಗ ಇಲ್ಲವೇ ಭುವಿಯಲ್ಲಿ..?

ಕೊಲ್ಲುವುದೇ ಕಾಯಕವಾಗಿಸಿ
ಕಾಡುಮೇಡಲ್ಲಿ ಅಲೆಸಿ
ಆಗಾಗ ಅರೆ ಹೊಟ್ಟೆ ಉಣಿಸಿ
ಪ್ರಿಯರಿಂದ ನಿನ್ನನ್ನು ದೂರಾಗಿಸಿ
ಕ್ರೌರ್ಯ ಮೆರೆಯುವ
ಪಾಪಿಗಳ ಕೂಪದಲ್ಲಿ
ಬಿದ್ದೇಕೆ ನರಳುವೆ ನೀನಿಲ್ಲಿ..!?

ಕೊಂದು ಮುಗ್ಧರ ದೇವರ ಹೆಸರಲ್ಲಿ
ಕಾಣದ ಕೇಳದ
ಸ್ವರ್ಗ ಕಾಣುವ ಮೂಢತನ ಯಾಕಿಲ್ಲಿ..??

– ನಾಗರತ್ನ ಎಂ.ಜಿ.
17.12.2025

ಮರೀಚಿಕೆ

ಎಲ್ಲಿ ಹುಡುಕಲಿ ಪ್ರೀತಿ ಪ್ರೇಮವ
ಗೆಲ್ಲಲಾಗದು ಮನಸಿನಾಳವ
ಮೆಲ್ಲನುಸುರುತ ಹೇಳಲಾರೆನು ಕೇಳಿಸದವನಿಗೆ
ಎಲ್ಲ ನೋಡುತ ಜಗದ ಸೋಜಿಗ
ಬೆಲ್ಲದಂತೆಯೆ ಸಿಹಿಯ ಮಾತದು
ಕೊಲ್ಲಲಾರದೆ ದೂರ ತಳ್ಳಿದೆ ಕಹಿಯ ನೆನಪಿಂದ

ಅಂದು ಮದುವೆಯ ದಿನವು ಸಂತಸ
ಬಂದು ನನ್ನದಾಗಿಹ ಮನೆಗೆ ನಮಿಸುತ
ಸಂದ ನಲ್ಲನ ಬಾಹುಬಂಧನದಲ್ಲಿ ತನ್ಮಯಳು
ಕಂದ ಬಂದು ಮಡಿಲು ತುಂಬುತ
ತಂದೆತಾಯಿಯ ನೆನಪು ಸರಿಸುತ
ಮಂದವಾಗಿದೆ ನೋಟ ಬೇಡದ ಜೀವ ಹಿಂಡುತಲಿ

ನಿನ್ನ ಬದುಕಲಿ ನನ್ನದೇನಿದೆ
ನನ್ನ ಬಾಳದು ನನಗಿಲ್ಲದಿರಲು
ಕನ್ನ ಹಾಕುತ ಮನವ ಶೋಧಿಸಿ ಸೋಸಿ ನೋಡುತಿರೆ
ಎನ್ನ ತಪ್ಪನು ಹಿರಿದು ಮಾಡುತ
ಬಿನ್ನವಿಸಿದರು ಬಿಟ್ಟು ಹೋಗುತ
ಚಿನ್ನ ರನ್ನವೆನುತಲಿ ವೇಷವ ಬದಲಿಸಿದೆ

ದಿನವದುರುಳುತ ನಾಟಕ ನೋಡುತ
ಮನುಜನಂತಹ ಕೆಟ್ಟ ಜೀವಿಯು
ಕನಸು ಹೆದರಿದೆ ನಿನ್ನ ನೋಡಲು ಮನಸು ಮರುಗಿರಲು
ಕನವರಿಸುತಲಿ ಮುಂದೆ ನಿಂತಿಹ
ದಿನವ ನೆನೆಸುತಲಗ್ನಿಕುಂಡವ
ದನುಜರಿಪುನೀ ಬಂದೆನ್ನ ಸಲಹುತಲನವರತವು

– ಜಯಶ್ರೀ ಆಲೂರು
31.12.2025

ಉಯಿಲು

– ಟಿ.ಆರ್. ಉಷಾರಾಣಿ

“ಅಮ್ಮ, ಅಕ್ಕನನ್ನು ಆಸ್ಪತ್ರೆಯಿಂದ ಮನೆಗೆ ಕರೆದುಕೊಂಡು ಹೋಗುವಂತೆ ಹೇಳುತ್ತಿದ್ದಾರೆ. ಎಲ್ಲಾ ಡಾಕ್ಟರುಗಳೂ ಕೈ ಚೆಲ್ಲಿದ್ದಾರೆ. ನಾವು ಒಪ್ಪುವುದಾದರೆ, ಆಸ್ಪತ್ರೆಗೆ ಹೊಂದಿಕೊಂಡಿರುವ ಶಾಂತಿಧಾಮ ವಾರ್ಡಿಗೆ ಸೇರಿಸುತ್ತಾರಂತೆ”.

ಅಮ್ಮ ಮೌನವಾಗಿ ಶೂನ್ಯದತ್ತ ನೋಡುತ್ತಿದ್ದವಳು ಮೌನ ಮುರಿದು, “ಅಂದರೆ ಅವಳು ಜೀವಂತ ಇರುವಾಗಲೇ ನೀನು ಸತ್ತೆ ಎಂದು ಶಾಂತಿಧಾಮಕ್ಕೆ ತಳ್ಳುವುದೇ" ಎಂದರು.

"ಅದು ನನ್ನ ನಿರ್ಣಯವಲ್ಲ ಅಮ್ಮ. ಇನ್ನೇನು ಹೆಚ್ಚು ದಿನ ಬದುಕಿರಲಾರರು ಎನ್ನುವವರಿಗಾಗಿ ನಿರ್ಮಿಸಲಾಗಿರುವ ಎಲ್ಲಾ ಸೌಲಭ್ಯ ವಿರುವ ರೂಮುಗಳು. ಬೇಡಾ ಅಂದರೆ ಮನೆಗೆ ಕರೆದುಕೊಂಡು ಹೋಗೋಣ..." ಮೋಹನ ತಡವರಿಸುತ್ತಲೇ ಹೇಳಿದ.

“ಅವಳು ಕಟ್ಟಿಸಿದ ಮನೆಗೆ ಅವಳನ್ನು ಕರೆದುಕೊಂಡು ಹೋಗೋಣ” ಅಮ್ಮ ನಿರ್ಧಾರಯುತ ಧ್ವನಿಯಲ್ಲಿ ಹೇಳಿದಾಗ ಮೋಹನ ಸುಮ್ಮನಾದ.

“ಆದರೆ ಅಮ್ಮ ನಿನ್ನಿಂದ ತಕ್ಷಣಕ್ಕೆ ಒಂದು ಕೆಲಸ ಆಗಬೇಕು”, ಮೋಹನ ಅವಳ ಕೈಯ್ಯಲ್ಲಿ ಸೇಲ್‌ಡೀಡ್‌ಗಳನ್ನು ತುರುಕಿ, “ಹೇಗಾದರೂ ಅಕ್ಕನ ಹತ್ತಿರ ಇದರ ಮೇಲೆ ಸಹಿ ತೊಗೋ.” ಅವನ ಕೈಗಳು ನಡಗುತ್ತಿದ್ದವು. ಬಾಳ ಸಂಜೆಯಲ್ಲಿದ್ದ ಅವನ ತಾಯಿ ಮೊದಲೇ ಮಗಳ ಖಾಯಿಲೆಯಿಂದ ನೊಂದು ಅರೆಜೀವವಾಗಿದ್ದರು. ತನ್ನ ಕೈಯ್ಯಲ್ಲಿರುವ ಕಾಗದಗಳು ಆಸ್ತಿ ವಿಲೇವಾರಿ ಪತ್ರಗಳು ಎಂದು ತಿಳಿದಾಗ ಮಗನ ಕೆನ್ನೆಗೆ ಬಾರಿಸುವಷ್ಟು ಸಿಟ್ಟು ಬಂದಿತ್ತು ಅವರಿಗೆ.

ಅವನ ಕೈಯ್ಯಲ್ಲಿ ತುರುಕಿ. “ನಾನೆಂದೂ ಈ ಕೆಲಸ ಅವಳಿಂದ ಮಾಡಿಸಿಕೊಳ್ಳುವುದಿಲ್ಲ. ನಿನಗೆ ಬೇಕಿದ್ದರೆ ನೀನೆ ಮಾಡಿಸಿಕೊ. ಸಾವಿನ ದವಡೆಯಲ್ಲಿದ್ದಾಳೆ ಅವಳು, ಈಗಲೋ ಆಗಲೋ ಎಂದು ಕಾಲನ ಕರೆಗಾಗಿ ಕಾಯುತ್ತಿದ್ದಾಳೆ. ಥೂ ನಿನ್ನ ಸಣ್ಣ ಬುದ್ಧಿಗೆ ಏನು ಹೇಳುವುದು? ಒಂದೇ ಹೊಟ್ಟೆಯಲ್ಲಿ ಇಬ್ಬರೂ ಹುಟ್ಟಿದರೂ ಎಷ್ಟು ವ್ಯತ್ಯಾಸ ಇಬ್ಬರಲ್ಲೂ”

ಮೋಹನನಿಗೆ ಏನು ಮಾಡುವುದೆಂದು ತಿಳಿಯಲಿಲ್ಲ. ಮನೆಗೆ ಕರೆದುಕೊಂಡು ಹೋಗುವುದು ಬೇಡ. ಮನೆಯಲ್ಲಿ ಜೀವ ಹೋದರೆ ಮತ್ತೆ ಪುಣ್ಯಾಹ ಮಾಡಿಸಬೇಕು ಎಂದು ಅವನ ಹೆಂಡತಿಯ ಚಿಂತೆ. ಆಸ್ತಿ ವಿಲೇವಾರಿ ಮಾಡದೆ ಅಕ್ಕ ಸತ್ತರೆ ಮುಂದೆ ತುಂಬಾ ಕಷ್ಟವಾಗುತ್ತದೆ ಎಂಬುದು ಮೋಹನನ ಸಂಕಟ. ಅಮ್ಮ ಎಂಬತ್ತರ ಅಂಚಿನಲ್ಲಿದ್ದಾಳೆ. ಇಷ್ಟು ದೊಡ್ಡ ಆಸ್ತಿ ಅಕ್ಕ ವಾಸಂತಿಯ ಹೆಸರಿನಲ್ಲಿದೆ. ಅದೂ ಅಲ್ಲದೆ ಎರಡು ಸೈಟೂ ಕೂಡ ಅವಳ ಹೆಸರಿನಲ್ಲಿದೆ. ಸರಿಯಾಗಿ ಬಂದೋಬಸ್ತು ಮಾಡದೇ ಅವಳು ಸತ್ತರೆ ಮುಂದೆ ಹೇಗೆ ಎನ್ನುವ ಚಿಂತೆ ಮೋಹನನಿಗೆ. ಅವಳೇ ಕಟ್ಟಿಸಿರುವ ಮನೆಯಲ್ಲೇ ಅವಳು ಪ್ರಾಣ ಬಿಡಲಿ ಎನ್ನುವುದು ಅಮ್ಮನ ಆಸೆ. ಅಂತೂ ಇಂತೂ ಡಾಕ್ಟರ್ ಒತ್ತಾಯ ಎಲ್ಲವೂ ಸೇರಿ ಅವಳನ್ನು ಮನೆಗೆ ಸಾಗಿಸಿದ್ದಾಯಿತು.

ಜೀವನದ ಕೊನೆಯ ಕ್ಷಣಗಳು. ಸೂರ್ಯ ಮುಳುಗುವ ಮುನ್ನ ಪ್ರಖರವಾಗಿ ಬೆಳಗುವಂತೆ ಇಲ್ಲಿಯವರೆಗೂ ಕಣ್ಮುಚ್ಚಿ ಮಲಗಿದ್ದ ವಾಸಂತಿ ಮನೆಗೆ ಕಾಲಿಟ್ಟ ತಕ್ಷಣವೇ ಕಣ್ಣುಬಿಟ್ಟಿದ್ದಳು. ಗಾಲಿ ಕುರ್ಚಿಯಲ್ಲಿ ತಳ್ಳಿಕೊಂಡು ಅವಳನ್ನು ಅವಳ ರೂಮಿನಲ್ಲಿ ಯಶಸ್ವಿಯಾಗಿ ಮಲಗಿಸಿ ಆಯಿತು. ನರ್ಸೊಬ್ಬಳನ್ನು ನೋಡಿಕೊಳ್ಳಲು ನೇಮಿಸಿಕೊಂಡರು. ಶಾರದಮ್ಮ ಅವಳ ಮಂಚದ ಪಕ್ಕದಲ್ಲೇ ಕುರ್ಚಿ ಹಾಕಿ ಕುಳಿತುಕೊಂಡರು. ಮಗಳ ತಲೆ ನೇವರಿಸಿದರು. ಅವರ ಕೈಯ್ಯಲ್ಲಿ ಶ್ರೀಮತಿ ಗಾಯತ್ರಿ ಮೂರ್ತಿ ಅವರು ಬರೆದಿರುವ ‘ಅಂಜದಿರು ಮನವೇ” ಪುಸ್ತಕವಿತ್ತು. ಅದರಲ್ಲಿದ್ದ ಕೆಲವು ಆತ್ಮವಿಶ್ವಾಸ ಸಾಲುಗಳನ್ನು ಅವಳ ಮುಂದೆ ಓದಿ ಹೇಳುತ್ತಿದ್ದರು. ವಾಸಂತಿಯ ಮುಖದಲ್ಲಿ ಕಿರುನಗೆ ಮೂಡುತ್ತಿತ್ತು. ಅವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಹೊತ್ತಿಗೆ “ಅಮ್ಮ, ಇದು ಕ್ಯಾನ್ಸರ್ ಕೊನೆಯ ಹಂತ, ಈಗಾಗಲೇ ದೇಹವನ್ನೆಲ್ಲಾ ವ್ಯಾಪಿಸಿದೆ. ಅವರ ಅಂಗಾಗಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಾವು ಕೇವಲ ಅವರ

ಸಮಾಧಾನಕ್ಕೆ ಮದ್ದು ಕೊಡಬಹುದೇ ಹೊರತು ಈ ಸಂಕಷ್ಟದಿಂದ ಪಾರುಮಾಡಲು ಸಾಧ್ಯವಿಲ್ಲ, ನಿಮ್ಮವರನ್ನೆಲ್ಲಾ ಕರೆಸಿಬಿಡಿ" ಎಂದಿದ್ದರು, ಡಾಕ್ಟರು.

ಇನ್ನೆಷ್ಟು ಹೊತ್ತೋ? ವಯಸ್ಸಾದ ತನ್ನನ್ನು ಬಿಟ್ಟು ಇಪ್ಪತ್ತು ವರ್ಷ ಚಿಕ್ಕವಳಾದ ಅವಳನ್ನು ಕೊಂಡೊಯ್ಯಲು ಯಮ ಧರೆಗಿಳಿದಿದ್ದಾನೆ. ಬರೀ ಕಷ್ಟವನ್ನೇ ಅನುಭವಸಿದ ಜೀವವದು. ವಯಸ್ಸಿನಲ್ಲಿ ಅವಳ ವೈವಾಹಿಕ ಜೀವನ ಒಂದು ವರ್ಷವೂ ಉಳಿಯಲಿಲ್ಲ. ಅವಳ ಗಂಡ ಒಂದು ವರ್ಷವೂ ಇವಳನ್ನು ಬಾಳಿಸಲಿಲ್ಲ. ತಾಯಿಯಾಗಬೇಕೆಂಬ ಅವಳ ಆಸೆ ಈಡೇರಲೇ ಇಲ್ಲ. ಗಂಡನಿಂದ ವಿಚ್ಛೇದನ ಪಡೆದು ತವರಿಗೆ ಬಂದವಳು ತಮ್ಮನ ಏಳಿಗೆಗಾಗಿ ಟೊಂಕಕಟ್ಟಿ ನಿಂತಳು. ಓವರ್‌ಟೈಂ ಮಾಡಿ ಅವನ ಹೆಸರಿನಲ್ಲಿ ಹಣ ಕೂಡಿಟ್ಟಳು. ಅವನ ಮದುವೆ ಮಾಡಿಸಿದಳು. ದೊಡ್ಡ ಮನೆ ಕೊಳ್ಳಬೇಕೆಂದು ಸಂಕಲ್ಪ ಮಾಡಿ ತನ್ನಿಚ್ಛೆಯಂತೆಯೇ ಬಂಗಲೆಯಂತಹ ಮನೆ ಕಟ್ಟಿಸಿದಳು. ತಮ್ಮನ ಹೆಂಡತಿಯ ಹೀಗಳಿಕೆಯ ನಡುವೆಯೂ ಅವಳು ಯಾವುದನ್ನೂ ಮನಸ್ಸಿಗೆ ತಂದುಕೊಳ್ಳದೆ ಹೋದರೂ ಬರಸಿಡಿಲೊಂದು ಬಡಿದಂತೆ ಬಂದಿತ್ತು ಅವಳಿಗೆ ಕ್ಯಾನ್ಸರ್ ರೋಗ.

"ವಾಸಂತಿ, ಈ ಪುಸ್ತಕದ ಒಂದೊಂದು ಸಾಲನ್ನೂ ಓದಿ ಹೇಳುವೆ. ನೀನೂ ಕೂಡ ಆ ಲೇಖಕಿಯ ಹಾಗೆ ಚೇತರಿಸಿಕೊಂಡು ಓಡಾಡುವಂತಾಗುವೆ ನೋಡು. ಅದಕ್ಕೆ ಡಾಕ್ಟರ್ ನಿನ್ನನ್ನು ಮನೆಗೆ ಕಳಿಸಲು ಒಪ್ಪಿದ್ದು". ವಾಸಂತಿ ಒಂದು ಶುಷ್ಕ ನಗೆ ನಕ್ಕು, ತಾಯಿಯ ಕೈ ಹಿಡಿದುಕೊಂಡಳು. ಅವರ ಕೈಯ್ಯಲ್ಲಿದ್ದ ಪುಸ್ತಕದತ್ತ ನೋಡಿದಳು. ದೃಷ್ಟಿ ಮಂಜಾಗಿತ್ತು ಆದರೆ ಲೇಖಕಿಯ ನಗುಮುಖ ಕಂಡು ಏನೋ ಒಂದು ರೀತಿಯಲ್ಲಿ ಭರವಸೆಯ ಸಣ್ಣ ಆಶಾಕಿರಣ ಅವಳ ಮುಖದಲ್ಲಿ ಮೂಡಿತ್ತು. ಬಹುಶ: ಆ ಲೇಖಕಿಯರ ನಗುವಿನಲ್ಲಿದ್ದ ಆತ್ಮವಿಶ್ವಾಸದ ಕಾರಣವೋ ಏನೋ ಅವಳ ಜೀವನ ಪಯಣ ಮತ್ತೊಂದು ದಿನ ಮುಂದಿಕ್ಕೆ ಹೋಗಿತ್ತು.

ಮತ್ತೊಂದು ಹೊಸ ರವಿಕಿರಣ ಮನೆಯ ಮುಂಬಾಗಿಲು ಸ್ಪರ್ಶಿಸಿದಾಗ ಇನ್ನೊಂದು ದಿನದ ಬೋನಸ್ ಜೀವನ. ಅಮ್ಮ ಸ್ನಾನಕ್ಕೆ ಹೋಗುವುದನ್ನೇ ಕಾದಿದ್ದ ವಾಸಂತಿ ತಮ್ಮನನ್ನು ಕರೆದು ಬೀರುವಿನಲ್ಲಿರುವ ತನ್ನ ದಾಸ್ತಾವೇಜುಗಳನ್ನಿಟ್ಟಿದ್ದ ಬ್ಯಾಗ್ ಕೊಡುವಂತೆ ಸೂಚಿಸಿದಳು. ನೋವಿನ ನಡುವೆಯೂ ಅವಳು ತನ್ನ ಕರ್ತವ್ಯವನ್ನು ಮರೆಯಲಿಲ್ಲ. ನಡುಗುತ್ತಿದ್ದ ಕೈಗಳಿಂದ ಒಂದೊಂದೇ ತೆಗೆದು ಅವನ ಕೈಯ್ಯಲ್ಲೊಂದು ಪತ್ರವಿಟ್ಟಳು. ಅವಳ ಮುಖದಲ್ಲಿ ಧನ್ಯತೆಯ ಭಾವವಿತ್ತು. ಅದನ್ನು ನೋಡುತ್ತಿದ್ದಂತೆ ಮೋಹನನ ಕಣ್ಣಾಲಿಗಳು ತುಂಬಿ ಬಂದವು. ತನ್ನೆಲ್ಲಾ ಆಸ್ತಿಯನ್ನೂ ಈಗಾಗಲೇ ಮೋಹನನಿಗೆ ಸೇರುವಂತೆ ಅವಳು ಬರೆದಿಟ್ಟಿದ್ದ ಉಯಿಲು. ಮೋಹನ ತಾನು ಮಾಡಿಸಿ ತಂದಿದ್ದ ಸೇಲ್ ಡೀಡ್ ಪತ್ರಗಳನ್ನು ಒಂದು ಕವರಿನಲ್ಲಿಟ್ಟುಕೊಂಡೇ ಬಂದಿದ್ದ, ಅಮ್ಮನ ಅನುಪಸ್ಥಿತಿಯಲ್ಲಿ ಸಾಧ್ಯವಾದರೆ ಅಕ್ಕನಿಂದ ಸಹಿ ತೆಗೆದುಕೊಳ್ಳುವುದೆಂದು. ತನ್ನ ಕೈಯ್ಯಲ್ಲಿದ್ದ ಪತ್ರಗಳತ್ತ ಲಜ್ಜಿತನಾಗಿ ನೋಡಿದ. ಅವನಿಗರಿವಿಲ್ಲದೆ ಪತ್ರಗಳನ್ನು ಕೈಯ್ಯಲ್ಲಿ ಹಿಂಡುತ್ತಿದ್ದ. ತಮಗಿನ್ನೇನು ಕೆಲಸ ಎಂಬಂತೆ ಅವು ಜಾರಿ ಕೆಳಗೆ ಬಿದ್ದವು.

***

ವರುಣನಾ ಆಗಮನ

-ಪೂರ್ಣಿಮ ಭಗವಾನ್

ಕರೆದಿಹರು ವರುಣನನು ಬೇಗೆಯನು ತಣಿಸೆ
ಸರಿಯೆಂದು ಬಂದಿಹನು ರಸ್ತೆಯದು ಕೆಸರು
ಕಿರಿದಾದ ಮನೆಯವರು ರಂಪಾಟ ನಡೆಸಿ
ಸುರಿಯುತಿಹ ಮಳೆಯನ್ನು ಒಂದಷ್ಟು ಶಪಿಸಿ

ಮೊಂಡು ಮಕ್ಕಳ ತೆರದಿ ವರುಣನ ನೀತಿ
ಚಂಡಿಯೊಲು ಬಿಟ್ಟು ಬಿಡದಿಹ ಮಳೆಯ ರೀತಿ
ಗುಂಡಿಗಳೊ ಮೋರಿಗಳೊ ಅರಿಯದಿಹ ಹಾದಿ
ಚೆಂಡಾಡಿ ಎಲ್ಲವೂ ತೇಲುತಿಹ ಬೀದಿ

ಕೆರೆಗಳನು ಮುಚ್ಚುತಲಿ ಕಟ್ಟಿದರು ಮಹಡಿ
ಕರೆಯದಯೆ ಬರುವ ಜಲ ತಗ್ಗಿನಲಿ ನೋಡಿ
ಬರಿಮಳೆಯೆ ಸಾಕಷ್ಟು ನೀಡಿಹುದು ನೋವ
ಸುರಿಮಳೆಗೆ ಮತ್ತಷ್ಟು ನಲುಗುವುದು ಜೀವ

ಸರಿಯಾದ ನಿರ್ಧಾರ ಕೈಗೊಳ್ಳಿ ಮುಂದೆ
ಅರಿಯದಿಹ ಜನರನ್ನು ಬಿಟ್ಟುಬಿಡಿ ಹಿಂದೆ
ಮುರಿಯದಲೆ ನಿಯಮಗಳ ಪರಹಿತವ ನೋಡಿ
ಹಿರಿತನದ ಘನತೆಯನು ಕಾಪಾಡೊ ಮೋಡಿ.

ಉಂಬಳಿಯ ಜಾಗವದು ಎಂದು ತಿಳಿದಿಹರೆ
ಕಂಬಳಿಯ ಹೊದ್ದು ಜಡತೆಯಿಂ ಮಲಗಿಹರೆ
ಸಂಬಳವು ಸಾಲದಲೆ ಗಿಂಬಳಕೆ ಇಳಿದು
ಸಿಂಬಳದ ನೊಣದಂತೆ ಸಿಲುಕಿಹರೆ ತಿಳಿದು

ನಂಬಿದವರಿಗೆ ಮೋಸ ವಂಚನೆಯು ಅಲ್ಲಿ
ಡೊಂಬರಾಟದ ಬಿಂಬ ಕಾಣುತಿದೆಯಲ್ಲಿ
ತುಂಬಿರಲಿ ಕೆರೆಕುಂಟೆ ರಸ್ತೆಗಳು ಅಲ್ಲ
ಹುಂಬರೆನ್ನುವ ಭಾವ ನೂಕಿಬಿಡಿರೆಲ್ಲ

ಬಿಟ್ಟಿಭಾಗ್ಯಗಳು ತತ್ಕಾಲ ಮಾತ್ರ ತಾವು
ಗಟ್ಟಿ ನಿಲುವಿನ ಕಾರ್ಯ ಸಾರ್ವಕಾಲಿಕವು
ತುಟ್ಟಿಯಾಗದೆ ಇರಲಿ ಬದುಕಿನಾ ಮೌಲ್ಯ
ಜಟ್ಟಿ ಕಾಳಗಕಿಳಿಯೆ ಬರಿದೆ ನಿರ್ಮಾಲ್ಯ

ಬರಿದೆ ಮಾತನು ಆಡೆ ಫಲವಿಲ್ಲವಿಂದು
ಸರಿಯಾದ ಕೆಲಸವೇ ಉಳಿಗಾಲಕೆಂದು
ಬಿರಿದ ಮಲ್ಲಿಗೆ ಕಂಪು ಪಸರಿಸಲಿ ಮುಂದೆ
ಕೆರೆದು ಗಾಯವ ಮಾಡಿಕೊಳ್ಳದಿರಿ ಮಂದೆ.

***

\-

ಪರಿಚಿತರು

(ಆದಿಪ್ರಾಸದಲ್ಲಿ ವಾರ್ಧಕ ಷಟ್ಪದಿ)

-ಪೂರ್ಣಿಮ ಭಗವಾನ್

ಪರಿಚಯದ ನಗೆಬೀರಿ ಪರಿಚಿತರು ನಾವೆಲ್ಲ
ಕಿರಿಕಿರಿಯ ಬೇಸರಕೆ ಜಾಗವಿರದಿಹುದಿಲ್ಲಿ
ಪರಿಣಾಮ ನಗುನಗುತ ಕಾಲವನು ಕಳೆಯುತಲಿ
ಹರಿಚಿತ್ತವರಿತು ಬಾಳಿ

ಪರಿವಾರದವರೆಲ್ಲ ಬರಹಗಳ ಬರೆಯುತಲಿ
ಸರಿ ತಪ್ಪುಗಳ ತಿಳಿಸಿ ಹೇಳುತಲಿ ತಿದ್ದುತಲಿ
ಬರೆಯುವವರಿಗೆ ದಾರಿ ತೋರುತಲಿ ಹೊಸ
ಬರಹಗಳ ಕಂಡಿಹೆ.

***

ಜಾನಪದ ಕತೆ : ಅತಿ ಆಶೆ, ಗತಿಗೇಡು

– ವಿಠ್ಠಲ. ಇಜೇರಿ

ವಿಶ್ವದ ಪ್ರತಿಯೊಂದು ರಾಷ್ಟ್ರವೂ ತನ್ನ ಜಾನಪದ ಸಂಪತ್ತನ್ನು ಸರಿಯಾದ ಅಧ್ಯಯನಕ್ಕೆ ಒಳಪಡಿಸುವ ದೃಷ್ಟಿಯಿಂದ ಜನಪದ ಸಾಹಿತ್ಯದ ವಿವಿಧ ಪ್ರಕಾರಗಳ ಸಂಗ್ರಹಕಾರ್ಯಕ್ಕೆ ಆದ್ಯತೆಯನ್ನು ನೀಡುತ್ತಾ ಬಂದಿವೆ. ಜರ್ಮನಿಯಲ್ಲಿ ಗ್ರಿಮ್ ಸಹೋದರರು 1812ರಲ್ಲಿ ಕೈಗೊಂಡ ಜಾನಪದ ಕ್ಷೇತ್ರದ ವೈಜ್ಞಾನಿಕ ಅಧ್ಯಯನ ಈ ದಿಶೆಯಲ್ಲಿ ಮೊದಲನೇಯದು. ಇಂಗ್ಲೆಂಡಿನಲ್ಲಿ, ಫಿನ್‌ಲೆಂಡ್ ಜಾನಪದ ಸಾಹಿತ್ಯದ ದೊಡ್ಡ ಕೇಂದ್ರವಾಯಿತು. ಆಫ್ರಿಕಾ, ಆಸ್ಟ್ರೇಲಿಯಾ, ಜಪಾನ್, ಚೀನಾ ದೇಶಗಳೂ ಈ ಅಭಿಯಾನ ಕೈಗೊಂಡವು. ಭಾರತದಲ್ಲಿ ಜಾನಪದ ಸಂಗ್ರಹ ಸ್ವಲ್ಪ ಕುಂಟುತ್ತಲೇ ಸಾಗಿತು. ಜಾನಪದತಜ್ಞ ಜೀ.ಶಂ.ಪರಮಶಿವಯ್ಯ ಅವರು ತಮ್ಮ 'ಜನಪದ ಕತೆಗಳು' ಪುಸ್ತಕದಲ್ಲಿ (ಪ್ರಕಟಣೆ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ–1975) ಕರ್ನಾಟಕ ಈಗ ಅಗ್ರಸ್ಥಾನವನ್ನು ಪಡೆದುಕೊಳ್ಳುತ್ತಿದೆ. ಇಲ್ಲಿ ಜಾನಪದ ಕತೆಗಳ ಸಂಗ್ರಹ ತಡವಾಗಿ ಪ್ರಾರಂಭವಾದರೂ ಈಗಾಗಲೇ ನಲವತ್ತಕ್ಕೂ ಹೆಚ್ಚು ಸಂಕಲನಗಳು ಪ್ರಕಟವಾಗಿ ಕನ್ನಡ ಜಾನಪದ ಕತೆಗಳ ಹೊಸ ದಿಗಂತವೇ ತೆರೆದುಕೊಳ್ಳುತ್ತಲಿದೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗ ಸಮಗ್ರ ಕರ್ನಾಟಕದ ಜಾನಪದ ಪರಿವೀಕ್ಷಣೆಯಲ್ಲಿ ಜನಪದ ಕತೆಗಳ ಸಂಗ್ರಹಕ್ಕೆ ವಿಶೇಷ ಗಮನವನ್ನು ನೀಡಿದೆ.

ಜಾನಪದ ಕತೆಗಳನ್ನು – 1. ಅತಿ ಮಾನುಷ ಕತೆಗಳು, 2. ಅದ್ಭುತ ಕತೆಗಳು, 3. ರಮ್ಯ ಕತೆಗಳು, 4. ಹಾಸ್ಯ ಕತೆಗಳು, 5. ಪ್ರಾಣಿ ಕತೆಗಳು, 6. ನೀತಿ ಕತೆಗಳು, 7. ವಾಸ್ತವಿಕ ಕತೆಗಳು – ಎಂದು ಗುರುತಿಸುತ್ತಾರೆ. ಅದ್ಭುತ ಮತ್ತು ಅತಿಮಾನುಷ ಕತೆಗಳು, ಮಾನವನ ಕ್ರಿಯೆಯ ವ್ಯಾಪ್ತಿಗೆ ಮೀರಿದ ಕತೆಗಳು, ನೀತಿ ಕತೆಗಳು ಜೀವನದ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ, ರಮ್ಯ ಕತೆಗಳಲ್ಲಿ ಶೃಂಗಾರ, ಪ್ರಣಯ ಮುಂಚೂಣಿಯಲ್ಲಿದ್ದರೆ, ಹಾಸ್ಯ ಕತೆಗಳಲ್ಲಿ ಬುದ್ಧಿವಂತಿಕೆ, ವ್ಯಂಗ್ಯ, ಪರಿಹಾಸ ಮುಂಚೂಣಿಯಲ್ಲಿರುತ್ತವೆ.

ಈಗ ಒಂದು ಹಾಸ್ಯ ಕತೆಯ ಉದಾಹರಣೆಯನ್ನು ನೋಡೋಣ:

ಒಂದು ಊರಲ್ಲಿ ತಂದೆ, ಮಗ– ಇಬ್ಬರೂ ಕಳ್ಳರು. ತಂದೆ ನುರಿತ ಕಳ್ಳ, ಮಗ ಕಳ್ಳತನದ ಅಭ್ಯಾಸಕ್ಕೆ ತಂದೆಯೊಡನೆ ಹೋಗುತ್ತಿದ್ದ. ಒಂದು ರಾತ್ರಿ ತಂದೆ ಮಗ ಇಬ್ಬರೂ ನಿರ್ಜನ ಪ್ರದೇಶದ ಒಂದು ಮನೆಗೆ ಕನ್ನ ಹಾಕಲು ಹೋದರು. ತಂದೆ ಮನೆಯ ಗೋಡೆಯಲ್ಲಿ ಕನ್ನ ಕೊರೆದು ಒಳಗೆ ಹೋದ. ಆದೇ ಕ್ಷಣ ಆ ಗೋಡೆ ಬಿದ್ದು ತಂದೆ ಮರಣ ಹೊಂದಿದ, ಹೊರಗೆ ಇದ್ದ ಮಗ ಕಂಗಾಲಾದ. ಮರುದಿನ ಮಗ ಅರಸನ ಬಳಿ ಬಂದು, "ಪ್ರಭುಗಳೇ, ನಾವು ತಂದೆ ಮಗ ನಮ್ಮ ವಂಶಪರಂಪರೆಯ ಉದ್ಯೋಗಕ್ಕಾಗಿ ಹೋಗಿದ್ದೆವು. ನಾವು ಕನ್ನ ಹಾಕಿದ ಮನೆಯ ಗೋಡೆ ಕಳಪೆಯಾಗಿತ್ತು. ಕನ್ನ ಕೊರೆದು ಒಳಗೆ ಹೋದದ್ದೇ ತಡ, ಗೋಡೆ ಬಿದ್ದು ನಮ್ಮ ತಂದೆ ಸತ್ತುಹೋದರು. ನಮಗಾರು ಗತಿ, ನಮಗಾರು ದಿಕ್ಕು. ನನ್ನ ಉಪಜೀವನಕ್ಕೆ ಮನೆ ಮಾಲೀಕರಿಂದ ಪರಿಹಾರ ಕೊಡಿಸಿ" ಅಂದ. ಅರಸು ಮನೆ ಮಾಲೀಕನನ್ನು ಕರೆಸಿ, "ಆ ಹುಡುಗನಿಗೆ ಐದು ಸಾವಿರ ರೂಪಾಯಿ ಪರಿಹಾರ ಕೊಡಿ" ಎಂದು ಆಜ್ಞಾಪಿಸಿದ. ಮನೆ ಮಾಲೀಕ, "ಪ್ರಭು, ನಾನ್ಯಾಕೆ ಪರಿಹಾರ ಕೊಡಬೇಕು, ನಾನು ಗೋಡೆ ಕಟ್ಟಿದ್ದೇನೆಯಾ?. ಮೇಸ್ತ್ರಿ ಗೋಡೆ ಕಟ್ಟಿದ್ದಾನೆ, ನಾನು ಕೂಲಿ ಕೊಟ್ಟದ್ದೇನೆ, ಅಷ್ಟ''. ಅರಸ ಗೋಡೆ ಕಟ್ಟಿದ ಮೇಸ್ತ್ರಿ ಕರೆಸಿ ಪರಿಹಾರ ನೀಡಲು ಸೂಚಿಸಿದ. ಮೇಸ್ತ್ರಿ, "ಪ್ರಭುಗಳೇ, ನಾನು ಗಾರೆ ತಯಾರಿಸಲು ಮರಳು, ಸುಣ್ಣ, ಒಂದಿಷ್ಟು ಬೆಲ್ಲ ಸೇರಿಸಬೇಕು. ಅವುಗಳನ್ನು ಕಲೆಸಲು, ಹದಿನಾರು ಮಡಿಕೆ ನೀರು ತರಲು ಹೇಳಿದ್ದೆ. ಅದೆಷ್ಟು ನೀರು ಬಂತೋ, ಮಡಿಕೆ ಕೊಟ್ಟ ಕುಂಬಾರ ಸರಿಯಾಗಿ ಮಡಿಕೆ ಮಾಡಿರಲಿಲ್ಲ ಮತ್ತು ಸರಿಯಾಗಿ ಸುಟ್ಟಿರಲಿಲ್ಲ. ಸಿಮೆಂಟು, ಮರಳು ಮಿಶ್ರಣ ಹದ ತಪ್ಪಿತು. ಗೋಡೆ ಕಳಪೆ ಆಯಿತು. ಆ ಕುಂಬಾರನಿಂದ ಪರಿಹಾರ ಕೊಡಿಸಿ" ಅಂದ.

ರಾಜಾಜ್ಞೆ ಮೇರೆಗೆ ರಾಜ ಭಟರು ಕುಂಬಾರನನ್ನು ಆಸ್ಥಾನದಲ್ಲಿ ತಂದು ನಿಲ್ಲಿಸಿದರು. ಈಗ ಕುಂಬಾರನ ಸರದಿ. ಅವನು ಹೇಳಿದ. ''ಪ್ರಭುಗಳೇ, ನನ್ನ ಗಡಿಗೆ ಸರಿ ಆಗಿಲ್ಲ. ಅದು ನಿಜ, ನಾನು ಗಡಿಗೆ ಮಾಡೋವಾಗ ಈ ಊರು ಗೌಡರ ಮಗಳು ಬೆಳಿಗ್ಗೆ, ಮಧ್ಯಾಹ್ನ, ಸಾಯಂಕಾಲ, ರಾತ್ರಿ ಹೀಗೆ ಆರು ಸಲ ಅತ್ತ, ಆರು ಸಲ ಇತ್ತ ಓಡಾಡಿಕೊಂಡೇ ಇದ್ಲು, ಆಕೆ ಊರ್ವಶಿ, ರಂಭೆ ಅಂತಾ ಹೇಳ್ತಾರೆ ನೋಡಿ, ಅಂತಾ ಹೆಂಗಸು. ನನ್ನದು ಉಪ್ಪು ಹುಳಿ ತಿಂದ ಜೀವ. ನನಗೆ ಅತ್ತ, ಇತ್ತ ಕತ್ತು ತಿರುಗಿಸಿ ತಿರುಗಿಸಿ ಆಕೆನೇ ನೋಡ್ತಾ ಕೆಲಸದ ಮ್ಯಾಲೆ

ನಿಗಾ ತಪ್ಪೋಯ್ತು. ನಂದು ತಪ್ಪಾಯ್ತು ಸ್ವಾಮಿ. ಅದಕ್ಕೆ ಕಾರಣ ಹೇಳಿದೆ ನೋಡಿ, ಆ ಹೆಂಗಸು ಸ್ವಾಮಿ, ನಾನು ಬಡವ ಎಲ್ಲಿಂದ ಪರಿಹಾರ ತರಲಿ" ಅಂದ.

ಗೌಡರ ಮಗಳಿಗೆ ಬುಲಾವ್ ಹೋಯ್ತು. ಆಕೆ ಹೇಳಿದ್ಲು "ಅರಸರೆ, ನಾನು ಆಚಾರಿ ಬಳಿ ವಾಲೆ ಮಾಡಾಕೆ ಚಿನ್ನ ಕೊಟ್ಟಿದ್ದೆ. ಅವನು ಬಾ ಅಂದಾಗೆಲ್ಲ ಓಡಾಡಿದೆ. ಅವನೋ ಬೆಳಿಗ್ಗೆ ಬಾ, ಮಧ್ಯಾಹ್ನ ಬಾ, ಸಂಜೆ ಬಾ ಅಂತಾ ಆಗ ಬಾ, ಈಗ ಬಾ, ಹೋಗಿ ಬಾ, ಅಂತಾ ಓಡಾಡಿಸಿದ, ನಾನು ಅತ್ತ, ಇತ್ತ ಓಡಾಡಿದೆ. ಚಿನ್ನದ ವಿಷಯ ನೋಡಿ, ಆಚಾರಿ ವ್ಯಾಳೆಕ್ಕ ಸರಿಯಾಗಿ ವಾಲೇ ಕೊಟ್ಟಿದ್ದರೆ ನಾನ್ಯಾಕ ಓಡಾಡತಿದ್ದೆ ಹೇಳಿ ನೋಡೋಣ?" ಅಂತಾ ಆಕೆ ಅರಸರಿಗೆ ಪ್ರಶ್ನೆ ಮಾಡಿದಳು. ಅರಸರು "ನೀನು ಹೋಗು ತಾಯಿ" ಅಂತಾ ಆಕೆಯನ್ನು ಕಳಿಸಿ, ಆಚಾರಿಯನ್ನು ಕರೆಸಿದರು. ಆಚಾರಿ ಅದೇನೋ ಸಬೂಬು, ಕತೆ ಹೇಳಲಿಕ್ಕೆ ಹೋದ. ಬೆಳಗಿನಿಂದ ಕತೆ ಕೇಳಿ ಕೇಳಿ ಅರಸರಿಗೆ ಸಾಕಾಗಿ ಹೋಗಿತ್ತು, ಆಚಾರಿಗೆ, "ಬೆಳಗಿನಿಂದ ಕತೆ ಕೇಳಿ ನನ್ನ ಕಿವಿ ತೂತಾಗಿದೆ. ಈಗ ಏನಿದ್ದರೂ ಶಿಕ್ಷೆ ನೀಡೋ ಸಮಯ" ಎಂದು ಹೇಳಿ, ಭಟರಿಗೆ "ತಗೊಂಡು ಹೋಗಿ ಇವನಿಗೆ ನೇಣು ಹಾಕಿ ಮತ್ತು ಮಧ್ಯಾಹ್ನ ಬಂದು ಸಭೆಗೆ ಸಮಾಚಾರ ತಿಳಿಸಿ" ಎಂದು ಅಜ್ಞಾಪಿಸಿ ವಡ್ಡೋಲಗ ಬರಖಾಸ್ತು ಮಾಡಿದ. ಭಟರು ಆಚಾರಿಯನ್ನು ಎಳೆದುಕೊಂಡು ಹೋದರು.

ಮಧ್ಯಾಹ್ನ ರಾಜ ಸಭೆ ಸೇರಿದ ಸ್ವಲ್ಪ ಸಮಯದಲ್ಲಿ ಭಟರು ರಾಜ ದರಬಾರಿಗೆ ಬಂದರು. ಅವರೊಂದಿಗೆ ಬಂದಿಯಾದ ಆಚಾರಿಯೂ ಇದ್ದ. ರಾಜ ಕೋಪದಿಂದ "ಯಾಕೆ, ಮರಳಿ ಕರೆತಂದಿದ್ದೀರಿ?. ನೇಣು ಹಾಕಲಿಲ್ಲವೇಕೆ? " ಅಂದ. ಭಟರು ಕೈ ಮುಗಿದು, "ಮಹಾಪ್ರಭು, ಕ್ಷಮಿಸಬೇಕು, ಈ ಆಚಾರಿ ಜೋಳದ ದಂಟಿನಂತೆ ಇದ್ದಾನೆ, ಏನು ಮಾಡಿದರು ಕುಣಿಕೆ ಇವನ ಕತ್ತಿಗೆ ಬಿಗಿಯುತ್ತಿಲ್ಲ" ಎಂದು ಅರುಹಿದರು. ರಾಜ ಯೋಚಿಸಿ ಹೇಳಿದ, " ರೀ, ಇವನನ್ನು ಬಿಡುಗಡೆ ಮಾಡಿ, ಬೇರೆ ದಪ್ಪದ ಆಸಾಮಿ ಹುಡುಕಿ ತಂದು ನೇಣಿಗೇರಿಸಿ" ಎಂದು ಅಜ್ಞಾಪಿಸಿದ. ರಾಜಭಟರು ಊರ ಹೊರಗೆ ಇಬ್ಬರು ದಪ್ಪದವರು ಕುಳಿತುದನ್ನು ಕಂಡು "ನಿಮ್ಮಲ್ಲಿ ಒಬ್ಬರು ಅರಸರ ಬಳಿ ಬರಬೇಕು" ಎಂದು ಹಿನ್ನೆಲೆಯ ಕತೆ ಹೇಳಿದರು. ಅವರಿಬ್ಬರೂ ಮೆಲ್ಲಗೆ ಸಮಾಲೋಚನೆ ಮಾಡಿಕೊಂಡು ಭಟರಿಗೆ, "ನಾವಿಬ್ಬರೂ ಬರುತ್ತೇವೆ, ಅರಸರು ನಮ್ಮಿಬ್ಬರಲ್ಲಿ ಯಾರನ್ನು ಆರಿಸಿಕೊಳ್ಳುತ್ತಾರೋ ಅವರು ನೇಣಿಗೆ ಏರಲು ತಯಾರು" ಎಂದು ಇಬ್ಬರೂ ಅರಸರ ಬಳಿ ಬಂದರು. ಅರಸರು ಅವರಲ್ಲಿ ಒಬ್ಬನನ್ನು ತೋರಿಸಿ ಇವನನ್ನು ಕರೆದುಕೊಂಡು ಹೋಗಿ, ನೇಣು ಹಾಕಿ ಅಂದಾಗ ಇನ್ನೊಬ್ಬ "ಮಹಾಪ್ರಭು, ನನ್ನ ಸ್ನೇಹಿತನನ್ನು ನೇಣು ಹಾಕಬೇಡಿ ನಾನು ನೇಣಿಗೆ ಹೋಗುವೆ" ಅಂದ. ಅದಕ್ಕೆ ಮೊದಲಿನವ "ಇಲ್ಲ, ಮೊದಲು ಅರಸರು ನನಗೆ ನೇಣು ಅಂದಿದ್ದಾರೆ, ನಾನು ನೇಣಿಗೆ ಕತ್ತು ಕೊಡುವೆ" ಅಂದ. ಹೀಗೆ ಅವರಿಬ್ಬರೂ ನೇಣಿಗೆ ಏರಲು ಪೈಪೋಟಿ ನಡೆಸಿದಾಗ ಅರಸ "ಏ, ನಿಲ್ಲಿ, ಎಲ್ಲರೂ ಬದುಕಲು ಹೋರಾಡುತ್ತಾರೆ, ನೀವೇಕೆ ಹೀಗೆ ಸಾಯಲು ಹೊಡದಾಡುವಿರಿ?" ಎಂದು ಕೇಳಿದಾಗ ಅವರಲ್ಲೊಬ್ಬ ಹೇಳಿದ, "ಮಹಾಪ್ರಭು, ಇಂದು ಅತ್ಯಂತ ಶುಭದಿನ, ಇಂದು ಮೊದಲು ಶೂಲಕ್ಕೆ ಏರುವವರು ಮುಂದಿನ ಜನ್ಮದಲ್ಲಿ ರಾಜರಾಗುತ್ತಾರೆ, ನಂತರ ನೇಣಿಗೆ ಕತ್ತು ಒಡ್ಡವವರು ಮುಂದಿನ ಜನ್ಮದಲ್ಲಿ ಮಂತ್ರಿಗಳಾಗುತ್ತಾರೆ ಅದರಿಂದಾಗಿ ಮೊದಲು ನೇಣಿಗೆ ಕತ್ತು ಕೊಟ್ಟು ರಾಜರಾಗುವ ಯೋಗಕ್ಕಾಗಿ ಕೇಳಿಕೊಳ್ಳುತ್ತಿದ್ದೇವೆ" ಎಂದು ಹೇಳಿದ. ರಾಜ ಮಂತ್ರಿಯತ್ತ ನೋಡಿ, "ಮಂತ್ರಿಗಳೇ ಈ ಜನ್ಮದಲ್ಲಿ ಸಾಕಷ್ಟು ವರ್ಷ ಅಧಿಕಾರ ಅನುಭವಿಸಿದ್ದೇವೆ, ಬನ್ನಿ ನಾವಿಬ್ಬರೂ ಮೊದಲು ನಾನು, ನಂತರ ನೀವು ನೇಣು ಹಾಕಿಸಿಕೊಂಡು ಮುಂದಿನ ಜನ್ಮದಲ್ಲೂ ನಾನು ರಾಜ, ನೀವು ಮಂತ್ರಿಗಳು ಆಗೋಣ. ಇನ್ನೊಂದು ಜನ್ಮ ರಾಜ್ಯ, ಸುಖ ಸಂಪತ್ತು ಅನುಭವಿಸೋಣ" ಅಂದರು. ರಾಜರ ಮಾತು ಕೇಳಿ ಮಂತ್ರಿಗೆ ಭಯವಾದರೂ ಮುಂದಿನ ಜನ್ಮದಲ್ಲೂ ಮಂತ್ರಿಯಾಗುವುದು ನಿಶ್ಚಿತ ಎಂದು ರಾಜ ಮತ್ತು ಮಂತ್ರಿಗಳು ನೇಣಿಗೆ ಗುರಿಯಾದರು.

***

ಕುಮೊರ ತೂಲಿಯಲೊಂದು ಸುತ್ತು

(ಕುಂಬಾರ ಬೀದಿಯಲ್ಲೊಂದು ಸುತ್ತು)

– ರಾಧಿಕಾ ಗುಜ್ಜರ್



ರಜದಿಂದಿದ್ದು ಆರಾಧನೆಗೊಳಪಡುವುದು
ರಜ ಮುಕ್ತ ಮಾತೆಯ ವಿರಾಟ ರೂಪವು
ರಜವಿರಬಹುದು ಕುಂಬಾರನಲಿ ನೂರು
ರಜ ರಾಗವೆಲ್ಲೆಡೆ ಕುಂದಿರದೆ ಪ್ರಕಟವು

ನೆನೆದು ಆಕೆಯ ನಾದುತ್ತಾನೆ ಅಡುಸು
ನಾರಿ ರೂಪದ ಬಿದಿರ ಅಡಪು ಮಾಡಿ
ಮಿದು ಹದ ಮಣ್ಣ ತಿಂಬುತ ತುರುಕುತ
ಮೈಮರೆತು ಮೂರುತಿಯಾಗಿಸುತ್ತಾನೆ ಜೇಡಿ

ಸಹನೆ ಉಸಿರಾಡುವುದು ಕಾಯಕದಲ್ಲಿ
ಪರವಶತೆಯೇ ಊರ್ಜವು ಕಾಯದಲ್ಲಿ
ಮಾತೆಯ ವಾಹನದ ಕೇಸರ ಕೋರೆ
ಉರ ಊರು ಊರ್ಜಿಸಿ ಊರುವುದಿಲ್ಲಿ

ನಿಲುವಲಿ ಕಾಳಿ ಸೆಳೆವಳು ವಿಶ್ವರೂಪದೆ
ಆಯುಧಗಳು ಕರ ಹತ್ತಲಿ, ಸಿಂಹವಾಹನೆ
ರಕ್ಕಸನ ವಧಿಸುವ ರೌದ್ರವಿದ್ದರೇನು
ಪ್ರಶಾಂತವು ಮಾತೆಯ ಮುಖದ ಹಾಸವು

ಜೀವರಿಗೆ ಸಂಜೀವಿನಿಯಾದ ಮಣ್ಣು
ಜಾಲಿಸಿದ ಪಾತ್ರದೆ ಜೀವ ತಳೆವುದಿಲ್ಲಿ
ಕುಂಬಾರನ ಕುಶಲತೆ ಘಟಿಸುತ, ಆತನ
ಸನ್ನೆಯೇ ಅಪರ್ಣೆಯೆಂಬ ಸಂಭವವಿಲ್ಲಿ

ಶಂಖದ ಬಿಳುಪು, ಶುಭ್ರ ಶ್ರದ್ಧೆಯು
ಸಿಂಧೂರದ ಕೆಂಪದು ಉಪಾಸನೆಯು
ಪತ್ತಲವಾಗುವುದಿದೇ ಕೆಂಪು ಬಿಳಿಯು
ವ್ರತವಿರಿಸುವವರ ಅಳವಿಯ ಜೇಯವು

ಭಾದ್ರಪದಕೆ ನಮ್ಮಿಂದ ಹೊರಟ ಗೌರಿ
ಆಶ್ವೀಜಕೆ ಸೇರುವಳು ಬಂಗಾಳವನ್ನು
ಪಂಚಭೂತಗಳಲಿ ನಾಲ್ಕರ ಶರೀರಿ
ಅಗ್ನಿ ಬೆಳಗುವುದು ನಮ್ಮೊಳಗನ್ನು

ಲೆಕ್ಕ ತೂಕ ಮೀರಿ ಬೆಳೆದ ಮಾತೆಯು
ಕುಮೊರ ತೂಲಿಯ ಹೊರತೂ ಬಲಿವಳು
ಕಣಕಣವೂ ದೇವಿಯಾಗಿ ಸುರೂಪವು
ಮನ-ಮನೆಗಳೆಲ್ಲ ಸೇರುತ ದೇಗುಲವು

ಮತ್ತೆ ಮತ್ತೆ ನಿರ್ಮಾಣವು
ಮತ್ತೆ ಮತ್ತೆ ನಿರ್ಗಮನವು
ಹೊತ್ತು ಹೊತ್ತಿಗೆ ಭರವಸೆ ನೀಡಿ
ಮುತ್ತುವ ಭಯ ಭೀತಿ ತೊಡೆವಳು



****

[ಕುಮೊರ ತೂಲಿ (ಬಂಗಾಳಿ ಪದ) = ಕುಂಬಾರ ಬೀದಿ. ಇದು ಕಾಳಿ ವಿಗ್ರಹವನ್ನು ತಯಾರಿಸುವ ಬೀದಿ. ನಮ್ಮಲ್ಲಿ ಗಣೇಶ, ಗೌರಿ ಎಲ್ಲೆಡೆ ತಯಾರಾದರೆ, ಬಂಗಾಳದಲ್ಲಿ ಈ ಬೀದಿಯಲ್ಲಿ ಮಾತ್ರ ಕಾಳಿ ವಿಗ್ರಹಗಳು ತಯಾರಾಗುತ್ತವೆ. ಅಲ್ಲದೆ, ಪ್ರತಿಯೊಂದು ಮೂರ್ತಿಯೂ ವೇಶ್ಯೆಯೊಬ್ಬಳು ಕೊಡುವ ಒಂದು ಹಿಡಿ ಮಣ್ಣು ಮೊದಲಾಗಿ; ರಚನೆ ಯಾಗುತ್ತದೆ. ಇದೊಂದು ಸಂಬಂಧಿತ ವಂಶಜರು ಮುಂದುವರೆಸಿ ಕೊಳ್ಳುತ್ತಾ ಬಂದಿರುವ ಕಲೆ. ಕುಂಬಾರ ಬೀದಿಯ ಫೋಟೋಶೂಟ್ ಮಾಡಲು ಜಗತ್ತಿನಾದ್ಯಂತದಿಂದ ಬಂದ ಹವ್ಯಾಸಿಗಳು ಇಲ್ಲಿ ಸೇರುತ್ತಾರೆ.

ದುರ್ಗಾ ಪೂಜೆಗೆ ಎಲ್ಲರೂ ಒಂದೇ ತೆರನಾದ ಸೀರೆ (ಬಿಳಿ ಕೆಂಪು) ಧರಿಸಿ, ಸಿಂಧೂರವನ್ನು ಬೈತಲೆಗೆ ತುಂಬಿಕೊಳ್ಳುತ್ತಾರೆ.]

****

ಸತಿ ಸಪ್ತಮಿ

– ಗಣಪತಿ ಹೆಗಡೆ

ಸತಿ ಸಾವಿತ್ರಿ, ಸತಿ ಸುಶೀಲೆ, ಸತಿ ಪ್ರಭಾವತಿ, ಹೀಗೆ ಕೆಲವು ಸ್ತ್ರೀಯರ ಹೆಸರುಳ್ಳ ಯಕ್ಷಗಾನ ಆಖ್ಯಾನದ ಹೆಸರನ್ನು ಕೇಳಿದವರು, 'ಸತಿ ಸಪ್ತಮಿ' ಎನ್ನುವುದು ಈ ಸಾಲಿನಲ್ಲಿ ಸೇರಿರಬಹುದು ಎಂದು ತಿಳಿದುಕೊಂಡರೆ ಅಸಹಜವೇನೂ ಅಲ್ಲ.

ಅಥವಾ, ವಸಂತ ಪಂಚಮಿ, ಋಷಿ ಪಂಚಮಿ, ಚಂಪಾ ಷಷ್ಠಿ, ರಥ ಸಪ್ತಮಿ ಹೀಗೆ ಮಾಸದ ದಿನಗಳ ವೈಶಿಷ್ಟ್ಯವನ್ನು ಸಾರುವ ಹಾಗೆ 'ಸತಿ ಸಪ್ತಮಿ' ಇದು ಮಾಸದ ಯಾವುದೋ ದಿನದ ಕುರಿತಾಗಿ ಇರಬಹುದೇ ಅಂತ ಅನಿಸಲೂಬಹುದು.

ಆದರೆ ಇವೆರಡರ ಹೊರತಾಗಿ 'ಸತಿ ಸಪ್ತಮಿ' ಅಂದರೆ ಸಂಸ್ಕೃತ ವ್ಯಾಕರಣದಲ್ಲಿ ಒಂದು ವಿಶಿಷ್ಟ ಅಥವಾ ವಿಚಿತ್ರ ವಾಕ್ಯಪ್ರಯೋಗ.

'ಸತಿ ಸಪ್ತಮಿ' ಯಲ್ಲಿ 'ಸತಿ' ಅಂದರೆ ಹೆಣ್ಣು ಅಂತ ಅರ್ಥವಲ್ಲ. 'ಇರುತ್ತದೆ' ಅಂತ ಅರ್ಥ. ಅಂದರೆ 'ಸಪ್ತಮಿ ಇರುತ್ತದೆ' ಅಂತ ಅರ್ಥ. ಸಾಮಾನ್ಯವಾಗಿ ಮೊದಲ ವಾಕ್ಯಾರ್ಧದ ('ಯದಾ'ದಿಂದ ಪ್ರಾರಂಭವಾಗುವ) ಕ್ರಿಯಾಪದದ ಹಾಗೂ ವಿಶೇಷ್ಯದ ವಚನ ಹಾಗೂ ಸಪ್ತಮಿ ವಿಭಕ್ತಿಯಂತೆ ನಾಮಪದ ಅಥವಾ ವಿಶೇಷಣ ಬದಲಾವಣೆ ಹೊಂದುತ್ತದೆ. (ಇಂತಹದೇ ಇನ್ನೊಂದು ಪ್ರಯೋಗ ಸತಃ ಷಷ್ಠಿ).

ಎರಡು ವಾಕ್ಯಗಳು ಸೇರಿ ಒಂದು ವಾಕ್ಯವಾಗುವುದು ತಿಳಿದಿದ್ದೇ ಆಗಿದೆ. ಉದಾ:

"ಯಾವಾಗ ಮಾವಿನ ಫಲ ಬಿದ್ದಿತೋ ಆಗ ಕಿಶೋರನು ನಕ್ಕನು".

ಈ ವಾಕ್ಯಗಳನ್ನು ಕೂಡಿಸಿ ಬರೆಯುವಾಗ 'ಯಾವಾಗ' ಮತ್ತೂ 'ಆವಾಗ' ಶಬ್ದಗಳು ಕಳಚಿಕೊಳ್ಳುತ್ತವೆ. ಹಾಗೆ ಬರೆಯುವಾಗ 'ಮಾವಿನ ಫಲ ಬಿದ್ದಾಗ ಕಿಶೋರನು ನಕ್ಕನು' ಅಂತಾಗುತ್ತದೆ.

ಆದರೆ ಸಂಸ್ಕೃತದಲ್ಲಿ 'ಯದಾ' ಹಾಗೂ 'ತದಾ' ಶಬ್ದಗಳು ಕಳಚಿಕೊಳ್ಳುವುದರ ಜೊತೆ ನಾಮಪದ ಹಾಗೂ ಕ್ರಿಯಾಪದಗಳು ಸಪ್ತಮಿ ವಿಭಕ್ತಿಯಲ್ಲಿ ಪ್ರಯೋಗವಾಗುತ್ತವೆ. ಇದೇ 'ಸತಿ ಸಪ್ತಮಿ'.

ಈ ಸತಿ ಸಪ್ತಮಿ ಪ್ರಯೋಗದ ಕೆಲವು ಉದಾಹರಣೆಗಳು ಕೆಳಗಿನಂತಿವೆ. (ಕನ್ನಡದಲ್ಲಿಯೂ ವಿವರಿಸಿದ್ದೇನೆ. ಆದರೆ ಕನ್ನಡದಲ್ಲಿ ಸತಿ ಸಪ್ತಮಿಯ ಪ್ರಯೋಗದ ಕ್ರಮ ಬೇರೆ.)

೧.
ಯದಾ ಆಮ್ರಮ್ ಅಪತತ್ ತದಾ ಕಿಶೋರಃ ಅಹಸತ್.
ಆಮ್ರೇ ಪತಿತೇ ಕಿಶೋರಃ ಅಹಸತ್.
(ಯಾವಾಗ ಮಾವಿನ ಫಲ ಬಿದ್ದಿತೋ ಆಗ ಕಿಶೋರನು ನಕ್ಕನು.
ಮಾವಿನ ಫಲ ಬಿದ್ದಾಗ ಕಿಶೋರನು ನಕ್ಕನು.)

೨.
ಯದಾ ಬಾಲಕಃ ಪಠನ್ ತದಾ ಅಧ್ಯಾಪಕಃ ವರ್ಗಂ ಪ್ರವಿಶತಿ.
ಬಾಲಕೇ ಪುಸ್ತಕಂ ಪಠತೇ ಅಧ್ಯಾಪಕಃ ವರ್ಗಂ ಪ್ರವಿಶತಿ.
(ಯಾವಾಗ ಬಾಲಕನು ಪುಸ್ತಕವನ್ನು ಓದುತ್ತಿದ್ದನೋ ಆವಾಗ ಅಧ್ಯಾಪಕರು ವರ್ಗವನ್ನು ಪ್ರವೇಶಿಸಿದರು.
ಬಾಲಕನು ಪುಸ್ತಕವನ್ನು ಓದುತ್ತಿದ್ದಾಗ ಅಧ್ಯಾಪಕರು ವರ್ಗವನ್ನು ಪ್ರವೇಶಿಸಿದರು.)

೩.
ಯದಾ ಸೂರ್ಯಃ ಪ್ರಕಾಶಿತಃ ತದಾ ಖಗಾಃ ಅಗಾಯನ್
ಸೂರ್ಯೇ ಪ್ರಕಾಶಿತೇ ಖಗಾಃ ಅಗಾಯನ್
(ಯಾವಾಗ ಸೂರ್ಯನು ಪ್ರಕಾಶಿಸಿದನೋ ಆವಾಗ ಹಕ್ಕಿಗಳು ಹಾಡಿದವು.
ಸೂರ್ಯನು ಪ್ರಕಾಶಿಸಿದಾಗ ಹಕ್ಕಿಗಳು ಹಾಡಿದವು.)

೪.
ಯದಾ ವಸಂತಸಮಯಃ ಪ್ರಾಪ್ತಃ ತದಾ ಕಾಕಃ ಕಾಕಃ ಪಿಕಃ ಪಿಕಃ
ವಸಂತಸಮಯೇ ಪ್ರಾಪ್ತೇ ಕಾಕಃ ಕಾಕಃ ಪಿಕಃ ಪಿಕಃ
(ಯಾವಾಗ ವಸಂತ ಸಮಯ ಬರುತ್ತದೆಯೋ ಆವಾಗ ಕಾಗೆಯು ಕಾಗೆ. ಕೋಗಿಲೆಯು ಕೋಗಿಲೆ.
ವಸಂತಸಮಯ ಬಂದಾಗ ಕಾಗೆಯು ಕಾಗೆ. ಕೋಗಿಲೆಯು ಕೋಗಿಲೆ.)

೫.
ಯದಾ ಬಾಲಕಃ ಮೋದಕಂ ಖಾದಿತಃ ತದಾ ಏಕಃ ಮೂಷಕಃ ವರ್ಗಂ ಪ್ರವಿಶತ್
ಬಾಲಕೇನ ಮೋದಕೇ ಖಾದಿತೇ ಏಕಃ ಮೂಷಕಃ ವರ್ಗಂ ಪ್ರವಿಶತ್
(ಯಾವಾಗ ಬಾಲಕನು ಮೋದಕವನ್ನು ತಿಂದನೋ ಆವಾಗ ಒಂದು ಇಲಿಯು ವರ್ಗವನ್ನು ಪ್ರವೇಶಿಸಿತು.
ಬಾಲಕನು ಮೋದಕವನ್ನು ತಿಂದಾಗ ಒಂದು ಇಲಿಯು ವರ್ಗವನ್ನು ಪ್ರವೇಶಿಸಿತು.)

೬.
ಯದಾ ಬಾಲಕಃ ದೂರದರ್ಶನಂ ದೃಷ್ಟವತಃ ತದಾ ಬಾಲಿಕಾ ಗ್ರಂಥಂ ಪಠಿತವತೀ
ಬಾಲಕೇ ದೂರದರ್ಶನಂ ದೃಷ್ಟವತೀ ಬಾಲಿಕಾ ಗ್ರಂಥಂ ಪಠಿತವತೀ
(ಯಾವಾಗ ಬಾಲಕನು ದೂರದರ್ಶನವನ್ನು ನೋಡುತ್ತಿದ್ದನೋ ಆವಾಗ ಬಾಲಿಕೆಯು ಪುಸ್ತಕವನ್ನು ಓದುತ್ತಿದ್ದಳು.
ಬಾಲಕನು ದೂರದರ್ಶನವನ್ನು ನೋಡುತ್ತಿದ್ದಾಗ ಬಾಲಿಕೆಯು ಪುಸ್ತಕವನ್ನು ಓದುತ್ತಿದ್ದಳು.)

೭.
ಯದಾ ಪುಣ್ಯಃ ಕ್ಷೀಣಃ ಭವತಿ ತದಾ ಮರ್ತ್ಯಲೋಕಂ ಪ್ರವಿಶಂತೀ
ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತೀ.
(ಯಾವಾಗ ಪುಣ್ಯವು ಕ್ಷೀಣವಾಗುತ್ತದೆಯೋ ಆವಾಗ ಮರ್ತ್ಯಲೋಕವನ್ನು ಪ್ರವೆಶಿಸುತ್ತಾರೆ.
ಪುಣ್ಯವು ಕ್ಷೀಣವಾದಾಗ ಮರ್ತ್ಯಲೋಕವನ್ನು ಪ್ರವೇಶಿಸುತ್ತಾರೆ.)

೮.
ಯದಾ ಅಪತ್ಯಃ ಕ್ರಂದಿತಃ ತದಾ ಮಾತಾ ಧಾವಂತಿ ಆಗಚ್ಛತ್
ಅಪತ್ಯೇ ಕ್ರಂದಿತೇ ಮಾತಾ ಧಾವಂತಿ ಆಗಚ್ಛತ್
(ಯಾವಾಗ ಮಗು ಅಳುವುದೋ ಆವಾಗ ತಾಯಿ ಓಡುತ್ತಾ ಬಂದಳು.
ಮಗು ಅಳುವಾಗ ತಾಯಿ ಓಡುತ್ತಾ ಬಂದಳು).

ಸತಿ ಸಪ್ತಮಿಯ ಕುರಿತಾಗಿ ಇದು ಸ್ಥೂಲ ವಿವರಣೆ ಅಷ್ಟೇ.

***

ಮಂದಾನಿಲ ಚೌಪದಿ

ಗುರು ವಂದನೆ

-ಪೂರ್ಣಿಮ ಭಗವಾನ್

ಅರಿವಿನ ಕಣಜಕೆ ಬುದ್ಧಿಯ ತುಂಬಿಸೊ
ಗುರುವಿಗೆ ನಮನವು ಶಿರಬಾಗಿ
ಸರಿ ತಪ್ಪಿನರಿವು ತೋರುವ ದೀವಿಗೆ
ಹರುಷಕೆ ನಾಂದಿಯ ಹಾಡುತಲಿ

ಸುರಿಸುತ ಕೃಷ್ಣಾಮೃತವನುಗಾಲವು
ಚರಿತೆಯ ಪುಟಗಳ ತಿರುವುತಲಿ
ಅರಿವಿನ ಬೀಜದ ವೃಕ್ಷವದಮರವು
ಗುರುಗಳೆ ನಿಮಗಿದೊ ವಂದನೆಯು

ಶೋಧನೆ ಮಾಡುತೊಳಿತನೇ ಹೆಕ್ಕುತ
ಬೋಧಿಸೊ ಕಾಯಕ ಗುರುವಿನದು
ಸೋದಾಹರಣವು ಗುರುಕುಲ ಪದ್ಧತಿ
ಬೋಧಕ ನೀಡುತ ಸುಜ್ಞಾನ

ಕಳೆಯುತ ತಮವನು ಬೆಳಕನು ಕೊಡುವನು
ಕಳೆಯನು ಕೀಳುತ ಬೆಳೆ ಬೆಳೆದು
ಹಳಿಯಲಿ ಬಂಡಿಯನೋಡಿಸಿ ಕಲಿಕೆಯ
ಸುಳಿವನು ಹೇಳುವ ಬೋಧಕನು

ಕಥೆಗಳ ಹೇಳುತ ಪಾಠವ ಕಲಿಸುತ
ಮತಿಯನು ಚಿಗುರಿಸೊ ಮರವಾಗಿ
ಇತಿಮಿತಿಯೊಳಗಿರೆ ಸುಲಲಿತವೆನ್ನುವ
ಹಿತಚಿಂತಕನವನಾಗಿಹನು

ಗತವನು ಮರೆಸುತ ಹಿತವನೆ ಕೋರುತ
ಪಥವನು ತೋರುವ ಸರಿಯಾಗಿ
ಲತೆಗಾಶ್ರಯ ಮರ ಶಿಷ್ಯರಿಗಾಶ್ರಯ ಗುರು
ಮಿತಿಯನರಿಯದಿಹ ಜೋಡಿಯದು.

***

ಹೊರಗೆ ಯಾರಿಲ್ಲ.. ಯಾರೂ ಇಲ್ಲ!

– ಸುಷುಮಾ ಸುರೇಶ್, ಕುಣಿಗಲ್

ಗೌರವವು ದೊರೆಯುವುದು ಘನ ಬದುಕಿನಿಂದ
ಬೊಬ್ಬಿಟ್ಟು ಪಡೆಯಲದು ಯಾರಪ್ಪನಾಸ್ತಿ?
ಮಮತೆಯಿಂ ಮಾತ್ರವೇ ಗೆಲ್ಲಬಹುದಷ್ಟೆ
ಮಕ್ಕಳೆದೆಯೊಡಲ ಆಜೀವ ಪ್ರೀತಿ!

ಬಗ್ಗಿಸಲು, ಬಾಗಿಸಲು, ಮೆಟ್ಟಿ, ಮೀಟಲು
ಹೃದಯಗಳು ಪಣಕಿಟ್ಟ ಧನುಗಳೇನು?
ಆಲಿಸುತ, ಲಾಲಿಸುತ, ಓಲೈಸುತ
ಸಂತೈಸುತೆದೆಗಪ್ಪಿ ರಮಿಸಬೇಕು

ಜನ್ಮ ನೀಡಿದ್ದಕ್ಕೆ, ಉಣಿಸಿ, ತೊಡಿಸಿದ್ದಕ್ಕೆ
ಕಾಳಜಿಯ ಕಪ್ಪ ಕೇಳುತಿಹಿರೇನು?
ಹಕ್ಕೆಂದು ಹೂಂಕರಿಸಿ ತೊಡೆ ತಟ್ಟಬೇಡಿ
ನಿಮ್ಮಾಸ್ತಿ ಆಯುಧವ ಝಳಪಿಸಲೇಬೇಡಿ

ಪ್ರೀತಿಯೊರತೆಯ ಘಮವ ನಿಷ್ಠುರಕೆ ಅಡವಿಟ್ಟು
ಅಹಮಿಕೆಯ ನಾತವನು ಹರಡುತಿಹಿರಿ
ಮಂದಹಾಸದ ಮಳೆಯ ಕಿಚ್ಚಿನಲಿ ಮುಚ್ಚಿಟ್ಟು
ಕಟುನುಡಿಯ ರಣಬೇಗೆ ಹಂಚುತಿಹಿರಿ

ಕೈ ಕಾಲು ಸೋತಾಗ, ದೇಹ ಕೃಶವಾದಾಗ,
ಕ್ಷಣಕ್ಷಣಕು ಎದೆ ಮಿಡಿತ.... ವಿಲಗುಟ್ಟುವಾಗ
'ಬಾ ಕಂದಾ ಬಾ' ಎಂದು ಕೈ ಚಾಚಿ ಕೂಗಿದರೆ
'ಓ' ಎಂದು ಒಳಬರಲು ಹೊರಗೆ ಯಾರಿಲ್ಲ

ಯಾರೂ ಉಳಿದಿರುವುದಿಲ್ಲ!!!

***

ಸಕ್ಕರೆ ನಾಡಿನ ಸವಿನೆನಪುಗಳು

– ಮಹಾಬಲ

ಮೂರು ವರುಷ ದಕ್ಷಿಣ ಕಾಶಿ ಎಂದೇ ಖ್ಯಾತವಾದ ನಂಜನಗೂಡಿನ ವಾಸದ ನಂತರ ಮಂಡ್ಯಕ್ಕೆ ವರ್ಗವಾದುದು ಒಂದು ಬಗೆಯಲ್ಲಿ ಸಂತಸವಾದರೂ, "ಮಂಡ್ಯ ಅಂದರೆ ಇಂಡಿಯಾ" ಎಂದೇ ಭಾವಿಸಿರುವ ಜನರ ಮಧ್ಯೆ ಹುಷಾರು ಎಂದು ಎಚ್ಚರಿಸುವವರು ಕೆಲವರು ಇದ್ದುದರಿಂದ ಸ್ವಲ್ಪ ಅಳುಕಾದರೂ "ಬಿಡ್ರಯ್ಯ, ನಮ್ಮ ಪೂರ್ವಜರ ಊರು ಮಂಡ್ಯ ಜಿಲ್ಲೆಯ ಕೆ ಆರ್ ಪೇಟೆ ತಾಲೂಕಿನ ಕಿಕ್ಕೇರಿ. ಇನ್ನು ನನಗೇನು ಭಯ" ಎಂದು ಉತ್ತರಿಸಿ ಅವರೆಲ್ಲರ ಬಾಯಿ ಮುಚ್ಚಿಸಿದೆ. ಅಂತೂ ಕಪಿಲೆಯಿಂದ ಕಾವೇರಿಯತ್ತ ಈಗ ನನ್ನ ಚಲನೆ ಅನಿವಾರ್ಯವಾಯಿತು.

ಈ ನಡುವೆ ಶಾಖೆಯ ಅಂದಿನ ವ್ಯವಸ್ಥಾಪಕರು ಫೋನ್ ಮಾಡಿ ಸ್ವಾಗತಿಸಿ, "ಹೆದರಬೇಡ ನಾನು ಇನ್ನೂ ಒಂದು ವರ್ಷ ಇರುತ್ತೇನೆ. ಊರಿನವರಿಗೆಲ್ಲ ನಿನ್ನ ಬಗ್ಗೆ , ನಿನ್ನ ಪಿತಾಶ್ರೀ ಬಗ್ಗೆ ತಿಳಿಸಿದ್ದೇನೆ." ಎಂದು ಧೈರ್ಯದ ಕಾವೇರಿ ನೀರು ಹನಿಸಿದರು.

ಶಾಖೆಗೆ ಹೋದ ದಿನ ಬಾಗಿಲಲ್ಲೇ ಮಂಡ್ಯದ ಅಂಚೆ ಕಚೇರಿಯ ಪೋಸ್ಟ್ ಮ್ಯಾನ್ ಮತ್ತು ನನ್ನ ದೂರದ ಸಂಬಂಧಿ ಶಂಕರ ಮೂರ್ತಿ ಭೇಟಿಯಾಗಿ ವಿವರ ತಿಳಿದು ಸಂತಸಪಟ್ಟರು. ಅಲ್ಲಿಗೆ ಊರಿನ ಇನ್ನಷ್ಟು ಜನರಿಗೆ ನನ್ನ ಬರುವು ತಿಳಿಯುವುದು ಖಾತ್ರಿಯಾಯಿತು.

ಒಳಗೆ ಹೋದೊಡನೆ ವ್ಯವಸ್ಥಾಪಕರು ಬರಮಾಡಿಕೊಂಡು ರಾಹುಕಾಲ ನೋಡಿ, "ಸರಿಯಾಗಿದೆ. ಬನ್ನಿ ಎಲ್ಲರ ಪರಿಚಯ ಮಾಡಿಕೊಡುತ್ತೇನೆ" ಎನ್ನುತ್ತಾ ಅಲ್ಲಿದ್ದ ಎಲ್ಲ ಸಿಬ್ಬಂದಿ ಮತ್ತು ಗ್ರಾಹಕರನ್ನು ಪರಿಚಯಿಸಿದರು. ಹಾಗೆಯೇ ಏಕಾಂತದಲ್ಲಿ ಪ್ರತಿಯೊಬ್ಬರ ಸ್ವಭಾವ, ವರ ಕೊಡುವವರು ಯಾರು, ಶಾಪ ಕೊಡುವವರು ಯಾರು ಎಂದೆಲ್ಲ ವಿವರಗಳನ್ನೂ ತಿಳಿಸಿ ಉಪಕರಿಸಿದರು.

ತಕ್ಷಣ ಹೊರಗಡೆ ಸ್ವಲ್ಪ ಜೋರು ಎಂದೇ ಹೇಳಬಹುದಾದ ಗದ್ದಲ ಕೇಳಿಸಿತು. ಬನ್ನಿ, ಅದೇನು ನೋಡೋಣ ಎಂದು ವ್ಯವಸ್ಥಾಪಕರು ನನ್ನನ್ನೂ ಕರೆದುಕೊಂಡು ಅತ್ತ ಹೊರಟರು. ಸಾಲ ವಿಭಾಗ ಅಧಿಕಾರಿ ದೇಸಾಯಿಯರಿಗೆ ಒಬ್ಬ ರೈತಬಾಂಧವ ಜೋರು ದನಿಯಲ್ಲಿ "ವಸಿ ಮಂಡ್ಯದ ಕನ್ನಡದಲ್ಲಿ ತಿಳಿಹೇಳಿ" ಎನ್ನುತ್ತಿದ್ದ ಅದಕ್ಕೆ ಅವರು, "ಕನ್ನಡ ಎಲ್ಲಾ ಒಂದೇ. ನಿನಗೇಕೆ ಅರ್ಥವಾಗಲ್ಲ" ಎಂದು ಉತ್ತರಿಸಲು ಹೆಣಗುತ್ತಿದ್ದರು. ನಾನು ಮಧ್ಯೆ ಪ್ರವೇಶಿಸಿ "ಯಜಮಾನ್ರೇ ಏನು ನಿಮ್ಮ ಹೆಸರು?" ಎಂದು ಕೇಳಿದೆ. ಅವನು ನನ್ನ ಎಸ್ರು ಬೋರಣ್ಣ, ತಾವು ಯಾರೋ" ಎಂದು ಪ್ರತಿಪ್ರಶ್ನೆ ಮಾಡಿದ. "ನಾನು ಹೊಸದಾಗಿ ಬಂದವನು, ಇದೇ ಕೆಆರ್ ಪೇಟೆ ಕಿಕ್ಕೇರಿ ನಮ್ಮ ಸ್ವಂತ ಊರು"ಎಂದೆ.

ಅವನ ಸಿಟ್ಟಿನ ಝಳ ಕಡಿಮೆಯಾಯಿತು. " ಅಲ್ರ, ನೀವೇ ಯೋಳಿ, ನಾನು ನನ್ನ ಕಬ್ಬಿನ ಸಾಲ ಎಷ್ಟು ಬಾಕಿ ಅಂದರೆ ನಾಕೂವರೆ ಸಾವಿರ ಆಡು ಅಂತಾರೆ. ನಾನು ಸಾಲ ತಗೊಂಡಿದ್ದು ಕಬ್ಬಿಗೆ ಆಡಿಗಲ್ಲ ಅಂತ ಎಷ್ಟು ಯೇಳೋದು ಈ ಸಾಹೇಬ್ರಿಗೆ" ಎಂದ.

ಪಾಪ, ದೇಸಾಯರು ಮಂಡ್ಯದ ಸೀಮೆಗೆ ಹೊಸಬರು. ದೈನಂದಿನ ವ್ಯಹಹಾರಗಳಲ್ಲಿ ಕನ್ನಡವನ್ನೇ ಹಾಸಿ ಹೊದ್ದಿರುವ ಈ ಮಂಡ್ಯದ ರೈತಾಪಿಗಳಿಗೆ ಆಡ್ ಎಂಬ ಇಂಗ್ಲಿಷ್ ಪದ ಪರಕೀಯವೇ. ನಾನು "ಬೋರಣ್ಣನೋರೆ ಸಾಹೇಬರು ಹೇಳಿದ್ದು ಆಡು ಅಲ್ಲ. ಅದು ಆಡ್ ನೀವು ಕೊರೆ ಅಂತೀರಲ್ಲ ಅದು" ಎಂದೆ.

ಬೋರಣ್ಣ "ಕೊರೆ ಅನ್ನೋದ್ಕೆ ಇವರಿಗೇನು?'"ಎಂದು ಪ್ರತಿಕ್ರಿಯಿಸಿದ.

"ಹೊಸಬರು, ಕಲೀತಾರೆ ಬಿಡ " ಎಂದು ಸಮಾಧಾನಿಸಿದೆ.

"ನಾನು ಇವತ್ತೆ ವರ್ಗಾವಣೆ ಅರ್ಜಿ ಕೊಡ್ತೇನೆ" ಎಂದು ದೇಸಾಯಿಯವರು ಗೊಣಗಿದ್ದು ನನಗೂ ಕೇಳಿಸಿಯೇಬಿಟ್ಟಿತು.

ಒರಟು ಮಾತಿನ ಮೃದುಹೃದಯಿಗಳ ಈ ಸ್ವಭಾವ ಕಾಲಕ್ರಮೇಣ ನನಗಂತೂ ಬಹಳ ಬೇಗ ಒಗ್ಗಿಹೋಯಿತು.

‘‘ಕೂಳೆ ಕಬ್ಬಿಗೆ ಉಪ್ಪಬೂದಿ ಚೆಲ್ಲಬೇಕು. ಉಪ್ಪಿನ ಬಿಲ್ಲು ತಂದಿದ್ದೀನಿ. ದುಡ್ಡು ಕೊಡಿ’’ ಎಂದು ಮಂಡ್ಯ ಸೀಮೆಯ ರೈತ ಸೀನಪ್ಪ ಬಂದರೆ ಬೆಂಗಳೂರಿನ ಕಾನ್ವೆಂಟುಗಳಿಂದ ಬಂದ ಕಂದಮ್ಮಗಳಿಗೆ ತಲೆ ಗಿರ್ರನೆ ತಿರುಗುವುದು ಖಚಿತ. ಕೂಳೆಬೆಳೆ ಎಂದರೆ ರಟೂನ್ ಕ್ರಾಪ್ ಎಂದರೆ ಎರಡನೆಯ ಬೆಳೆಗೆ ಕಬ್ಬು ಕತ್ತರಿಸಿ ಹಾಗೇ ಬಿಟ್ಟರೆ ಮತ್ತೊಂದು ಬಾರಿ ಫಸಲು ಬರುತ್ತದೆ. ಹೊಸದಾಗಿ ಕಬ್ಬು ಬಿತ್ತನೆ ಮಾಡಲು ಸಸಿ ಕಬ್ಬು (ಫ್ರೆಶ್ ಕ್ರಾಪ್) ಎನ್ನುತ್ತಾರೆ. ಉಪ್ಪಬೂದಿ ಎಂದರೆ ರಸಗೊಬ್ಬರ. ವೃತ್ತಿ ಬದುಕಿನ ಶಾಲೆ ನಿಮಗೆ ಕಲಿಸುವಷ್ಟು ನಾಲ್ಕು ಗೋಡೆಯ ಮಧ್ಯದ ಯಾವ ಶಾಲೆ ಕಲಿಸೀತು?

‘‘ನಲವತ್ತು ಟನ್ ಕಬ್ಬಿನ ಒಪ್ಪಿಗೆ ರಟ್ಟು, ಎರಡೆಕ್ರೆ ಪಾಣಿ ತಕೊಳ್ಳಿ, ಕಬ್ಬಿನ ಸಾಲ ಕೊಡ್ರಿ.’’ ಎಂದರೆ ಸಕ್ಕರೆ ಕಾರ್ಖಾನೆಯವರು ಕಬ್ಬು ಸ್ವೀಕರಿಸಲು ನೀಡಿದ ಪರ್ಮಿಟ್ಟಿಗೆ ಒಪ್ಪಿಗೆ ಎನ್ನುತ್ತಾರೆ. ಕಾರ್ಡಿನಲ್ಲಿ ವಿವರ ಬರೆದು ಕೊಟ್ಟಿರುವುದರಿಂದ ಅದು ಹಳ್ಳಿಗರ ಬಾಯಲ್ಲಿ ಒಪ್ಪಿಗೆ ರಟ್ಟು. ಪಾಣಿ ಎಂದರೆ ಪಹಣಿ (ರಿಕಾರ್ಡ್ ಆಫ್ ರೈಟ್ಸ್) ಜಮೀನು ದಾಖಲೆ. ಮೊದಲ ಭೇಟಿಯಲ್ಲೇ ಯಾರಿಗಾದರೂ ಅರ್ಥವಾದರೆ ಅವನೇ ರುಸ್ತುಂ.

ಇಂಗ್ಲಿಷ್ ಪ್ರಬಲ ಪ್ರತಿಪಾದಕ ಅಧಿಕಾರಿಯೊಬ್ಬರು ಸಿಕ್ಕಿಕೊಂಡ ಮತ್ತೊಂದು ಪ್ರಸಂಗವಿದು ."ನಿನ್ನ ಲೋನ್ ಅಕೌಂಟಿನಲ್ಲಿ ಅರಿಯರ್ಸ್ ತುಂಬಾ ಇದೆ. ಎನ್ ಪಿ ಎ ಆಗುತ್ತದೆ ಸಿದ್ದಣ್ಣ’’ ಎಂದು ಅವರು ವಿವರಿಸಿದಾಗ ಸಿದ್ದಣ್ಣ ತಣ್ಣಗೆ "ಆಗ್ಲಿ ಬುಡಿ" ಎಂದ. ಪಾಪ ಅಧಿಕಾರಿ ಎಷ್ಟು ಬಾರಿ ಹೇಳಿದರೂ ಪರಿಣಾಮವೇ ಇರಲಿಲ್ಲ. ಅಕಸ್ಮಾತ್ ಅಲ್ಲಿಗೆ ಬಂದ ಅಟೆಂಡರ್ ಚಂದ್ರಪ್ಪ ಇವನ್ನು ಕೇಳಿಸಿಕೊಂಡು "ಸಿದ್ಧ, ನಿನ್ನ ಕಬ್ಬಿನ ಸಾಲ ಸುಸ್ತಿಯಾಗಿದೆ. ಬಾಕಿ ಕಟ್ಟದಿದ್ದರೆ ಮನೆ ಮುಂದೆ ತಮಟೆ ಹೊಡೆಸ್ತಾರೆ ಹುಷಾರು" ಎಂದು ವಿವರಿಸಿದ. ಸಿದ್ದಣ್ಣ ಗಾಬರಿಗೊಂಡು "ಹಂಗ್ ಮಾಡಬ್ಯಾಡ್ರಿ ದಮ್ಮಯ್ಯ, ವಸಿ ಟೇಮ್ ಕೊಡಿ" ಬೇಡಿದ.

ನಾನು ಮಂಡ್ಯಕ್ಕೆ ಹೋದ ಹೊಸದರಲ್ಲಿ ಕಿವಿ ಮೇಲೆ ಬಿದ್ದು ಗೊಂದಲ ಮೂಡಿಸಿದ ಮತ್ತೊಂದು ಪದ ಅಜ್ಜಪಾಲು (ಅವರ ಬಾಯಲ್ಲಿ ಅಜ್ಪಾಲು) ನಂದು ನಾಲ್ಕು ಎಕರೆ ಅದರಲ್ಲಿ ಎರಡು ಅಜ್ಪಾಲು ಎನ್ನುತ್ತಿದ್ದರು ಕೆಲ ರೈತರು. ಹಾಗೆಂದರೇನು ಎಂದು ಒಬ್ಬನನ್ನು ಕೇಳಿಯೇ ಬಿಟ್ಟೆ. ಅದಕ್ಕೆ ಅವನು ‘‘ಸೋಮಿ, ಅಪ್ಪ ಅಮ್ಮ ಬದುಕಿದ್ದಾಗಲೇ ಮಕ್ಕಳಿಗೆ ಆಸ್ತಿ ಭಾಗ ಮಾಡಿ ಒಂದು ಭಾಗ ತಾವೇ ಇಟ್ಕೋತಾರೆ. ಅದೇ ಅಜ್ಜಪಾಲು. ಅವರನ್ನು ಯಾರು ಕಡೇತನಕ ನೋಡ್ಕೋತಾರೋ ಅವರಿಗೆ ಆ ಭಾಗ ಸಿಗತ್ತೆ’’ಎಂದು ನನಗೇ ಪಾಠ ಮಾಡಿದ.

ಮಂಡ್ಯ ತಾಲೂಕಿನಲ್ಲಿ ಶಿವಾರಗುಡ್ಡ ಎಂಬ ರಮಣೀಯವಾದ ಸ್ಥಳವಿದೆ. ಗುಡ್ಡದ ಮೇಲೆ ಶಿವನ ದೇವಾಲಯ ಇರುವುದರಿಂದ ಆ ಹೆಸರು ಬಂದಿದೆ. ಹತ್ತಿರವೇ ಜವಾಹರ್ ನವೋದಯ ವಿದ್ಯಾಲಯ ಇತ್ತು. ಬಹಳ ಸುಸಜ್ಜಿತವಾದ ಕಟ್ಟಡಗಳು. ಸುಂದರವಾದ ಪರಿಸರ. ಅಲ್ಲಿಗೆ ಸಾಲ ಖಾತೆಗಳ ಸಂಬಂಧ ಆಗಾಗ್ಗೆ ಹೋಗುತ್ತಿದ್ದೆ. ಒಮ್ಮೆ ಆ ಬೆಟ್ಟದ ತಪ್ಪಲಿನಲ್ಲಿ ಉಡುಪಿ ಮೂಲದ ಹಿರಿಯ ದಂಪತಿಗಳು ನಡೆಸುತ್ತಿದ್ದ ಒಂದು ಚಿಕ್ಕ ಕ್ಯಾಂಟೀನಿಗೆ ಹೋಗಿ ಕಾಫಿಗೆ ಹೇಳಿ ಕುಳಿತೆ. ಅಲ್ಲಿ ಆಗಲೇ ಇಬ್ಬರು ಹಳ್ಳಿಗರು ಲೋಕಾಭಿರಾಮವಾಗಿ ಮಾತನಾಡುತ್ತಿದ್ದರು. ಅಲ್ಲಿಗೆ ಮತ್ತೊಬ್ಬ ಯುವಕ ಬಂದ. ಅಲ್ಲಿದ್ದವರಲ್ಲಿ ಒಬ್ಬ ‘‘ಏನ್ಲಾ ಸಮಾಚಾರ. ಕಾಣನಿಲ್ಲ ಇತ್ತಿತ್ತಲಾಗೆ?’’ಎಂದು ವಿಚಾರಿಸಿದಾಗ.

‘‘ಮಾಭಾರ್ತ ನಾಟಕದಲ್ಲಿ ಸಕುನಿ ಪಾಲ್ಟು ಮಾಡ್ತಾ ಇವ್ನಿ.. ಮೇಷ್ಟು ಏಳಿಕೊಡ್ತಾ ಅವ್ರೆ’’ ಎಂದು ಆತ ಉತ್ತರಿಸಿದ.

ತಕ್ಷಣ ಅವನು, ‘‘ನೀನ್ ಬುಡು, ಬಣ್ಣ ವೇಸ ಇಲ್ದೆ ಸಕುನಿ ಮಾಡೋ ತಾಕತ್ತು ಇರೋನು’’ ಎಂದು ತಮಾಷೆ ಮಾಡಿದ. ಮತ್ತೊಬ್ಬ ಸಮಾಧಾನ ಮಾಡುವವನಂತೆ ‘‘ಹುಷಾರಪ್ಪ, ಮಾಭಾರ್ತದಲ್ಲಿ ಸಕುನಿ ಪಾಲ್ಟು ಬೋ ಇಂಪಾರ್ಟೆಂಟು. ಗ್ಯಾನ ಇಟ್ಟು ಮಾಡು’’ ಎಂದು ಸಲಹೆ ನೀಡಿದ. ನಾವು ಏನೂ ತಿಳಿಯದವರು ಎಂದೇ ನಿರ್ಧರಿಸಿಬಿಟ್ಟಿರುವ ಈ ಜನರ ಹಾಸ್ಯಪ್ರಜ್ಞೆ ಹಾಗೂ ವಿಶ್ಲೇಷಣಾ ಸಾಮರ್ಥ್ಯ ಬೆರಗು ತರಿಸುವಂತಿತ್ತು.

ಪೋಲಿಸ್ ಇಲಾಖೆಯ ಸಂಬಳ ಖಾತೆಯೆಲ್ಲ ನಮ್ಮ ಬ್ಯಾಂಕಿನ ಮೂಲಕವೇ ಜಮಾ ಆಗುತ್ತಿದ್ದುದರಿಂದ ಆ ಠಾಣೆಯ ಸಿಬ್ಬಂದಿಗೆ ವೈಯಕ್ತಿಕ ಸಾಲ ನೀಡುವ ಪರಿಪಾಠವಿದ್ದು ಆ ಕೆಲಸವನ್ನು ನಿರ್ವಹಿಸುವ ಹೊಣೆ ನನ್ನ ಪಾಲಿಗಿತ್ತು. ಅವರು ಠಾಣೆಯಲ್ಲಿ ಕಷ್ಟಪಟ್ಟು ಅನುಮತಿ ಪಡೆದು ಬ್ಯಾಂಕಿಗೆ ಬಂದಿರುತ್ತಾರೆ, ಅವರ ಕೆಲಸ ಬೇಗ ಮಾಡಿ ಕೊಡಿ ಎಂದಿದ್ದರು ವ್ಯವಸ್ಥಾಪಕರು. ಅದರಂತೇ ಆ ಸಿಬ್ಬಂದಿ ಬಂದು ಕೈಸಾಲ ಬೇಕು ಎನ್ನುತ್ತಿದ್ದರು. ಅರ್ಜಿ ಬರೆದುಕೊಡಿ ಎಂದಾಗ ತಮ್ಮ ಜತೆ ಬಂದಿದ್ದವರ ಹತ್ತಿರ ಬರೆಸುತ್ತಿದ್ದರು. 'ಮಳೆ ಬಂದು ಗೋಡೆ ಬಿದ್ದಿದೆ' ಎಂದೋ, 'ಮಕ್ಕಳ ವಿದ್ಯಾಭ್ಯಾಸಕ್ಕೆ' ಎಂದೋ, 'ತಂದೆ ತಾಯಿಗೆ ಹುಷಾರಿಲ್ಲ' ಎಂದೋ ಕಾರಣ ಕೊಡುತ್ತಿದ್ದರು. ನಾನು ಸಾಲದ ದಾಖಲೆ ಪಡೆದು ಅವರಿಗೆ ಷರತ್ತುಗಳನ್ನು ವಿವರಿಸಿ, ಕಂತಿನ ಮೊತ್ತ ಖಾತೆಯಲ್ಲಿ ಉಳಿಸಿ, ಉಳಿದ ಸಂಬಳ ಮಾತ್ರ ಪಡೆಯಬೇಕು ಎಂದು ತಾಕೀತು ಮಾಡುತ್ತಿದ್ದೆ. ಸಾಲ ಪಡೆದು ಸಂತಸದಿಂದ ನಮಸ್ಕರಿಸಿ ಹೋಗುತ್ತಿದ್ದರು. ಸ್ಟೇಷನ್ನಿನ ಮುಂದೆ ಹಾದು ಹೋದಾಗಲೆಲ್ಲ 'ಕೈಸಾಲದ ಆಫೀಸರು' ಎಂದು ಗೌರವದಿಂದ ಮಾತನಾಡಿಸುತ್ತಿದ್ದರು.

ಒಮ್ಮೆ ಮತ್ತೊಬ್ಬ ಸಿಬ್ಬಂದಿ ಬಂದು ಕೈಸಾಲ ಬೇಕು ಎಂದು ಕೇಳಿದ್ದ. ಅರ್ಜಿ ಎಲ್ಲಿ ಎಂದಾಗ, "ಈಗ ತಾನೇ ನಮ್ಮ ಕೆಂಪಯ್ಯ ತೊಗೊಂಡಿದಾನಲ್ಲ ಅದೇ ಅರ್ಜಿ ಕೊಡಿ ನಕಲು ಮಾಡಿಕೊಡ್ತೇನೆ" ಎಂದ.

"ನಿನಗೆ ಮದುವೆ ಆಗಿದ್ಯಾ?" ಎಂದು ಕೇಳಿದೆ.

"ಇಲ್ಲ, ಅದಕ್ಕೂ ಸಾಲಕ್ಕೂ ಏನು ಸಂಬಂಧ?' ಎಂದು ಗಲಿಬಿಲಿಗೊಂಡು ಕೇಳಿದ.

"ಕೆಂಪಯ್ಯ ಹೆಂಡತಿ ಹೆರಿಗೆ ಖರ್ಚಿಗೆ ಸಾಲ ಮಾಡಿದ್ದು, ಅರ್ಥವಾಯಿತಾ?" ಎಂದಾಗ ಆತ ಪೆಚ್ಚಾಗಿ ತಲೆ ಕೆರೆದುಕೊಂಡು "ಈಗೇನು ಮಾಡೋಮಾ?" ಎಂದ.

"ಅಪ್ಪ ಅಮ್ಮ ಇದ್ದರೆ ಅವರಿಗೆ ಹುಷಾರಿಲ್ಲ, ಆಸ್ಪತ್ರೆ ಖರ್ಚು ಬೇಕು ಅಂತ ಬರೆದುಕೊಡು". ಎಂದು ನಾನೆಂದಾಗ ಹಾಗೇ ಮಾಡಿದ.

"ಈಗಲೇ ಮದುವೆಯಾಗು. ಮುಂದಲ ಸಾರಿ ಕೈಸಾಲ ತೊಗೋವಾಗ ನೀನೂ ಹೆಂಡತಿಯ ಹೆರಿಗೆಯ ಖರ್ಚು ಅಂತ ಬರೀಬಹುದು" ಎಂದು ತಮಾಷೆ ಮಾಡಿದೆ. ಅವನೂ ಮನಸಾರೆ ನಗುತ್ತ ಅಲ್ಲಿಂದ ಹೊರಟ.

ಇದೇ ಇಲಾಖೆಯ ತಿಪ್ಪಯ್ಯ ಎನ್ನುವ ಸಿಬ್ಬಂದಿಯ ಸ್ವಾರಸ್ಯಕರ ಪ್ರಸಂಗ. ನಾನು ಅಧಿಕಾರ ವಹಿಸಿಕೊಳ್ಳುವ ಸಂದರ್ಭದಲ್ಲಿ ತಿಪ್ಪಯ್ಯನ ಗೃಹಸಾಲ ಖಾತೆ ನೋಡಿದಾಗ ಮನೆ ಅಡಿಪಾಯದ ಹಂತದಲ್ಲಿ ನಿಂತಿತ್ತು. ಬಿಡುಗಡೆಯಾದ ಕಂತಿಗೆ ಬಡ್ಡಿ ಬಾಕಿಯಾಗಿತ್ತು. ಕರೆಸಿ ಕೇಳಿದಾಗ, ಮನೆಯಲ್ಲಿ ತೊಂದರೆಯಿಂದಾಗಿ ಕಟ್ಟಡ ನಿಂತಿದೆಯೆಂದೂ ಗೋಡೆಯ ಹಂತ ಬರುವವರೆಗೆ ಬ್ಯಾಂಕಿನ ಕಂತು ಕೊಡಲಾಗುವುದಿಲ್ಲವೆಂದು ಹಿಂದಿನ ಅಧಿಕಾರಿಗಳು ಹೇಳಿದ್ದಾರೆಂದೂ, ಏನಾದರೂ ಸಹಾಯ ಮಾಡಬೇಕೆಂದೂ ಬೇಡಿಕೊಂಡ. ನಾನೂ ನಿಯಮ ಮೀರಿ ಸಹಾಯ ಮಾಡುವಂತಿಲ್ಲ. ಬ್ಯಾಂಕಿನಿಂದ ಕೈಸಾಲವನ್ನೂ ತೆಗೆದುಕೊಂಡಿರಲಿಲ್ಲ. ಬೇರೆ ವ್ಯಕ್ತಿಗಳಿಂದ ಸಾಲ ಮಾಡಲೂ ಅವನಿಗೆ ಧೈರ್ಯವಿರಲಿಲ್ಲ. ಏನೋ ಹೊಳೆದಂತಾಗಿ, "ಮನೆಯಲ್ಲಿ ಏನಾದರೂ ಚಿನ್ನದ ಒಡವೆ ಇದೆಯೇ?"ಎಂದು ಕೇಳಿದೆ.

"ಹತ್ತು ಸಾವಿರದಷ್ಟು ಇರಬೈದು. ಅದು ಹೆಂಡತೀದು. ಕೇಳೋಕ್ಕಾಗಲ್ಲ" ಎಂದ. ಅವನ ಹೆಂಡತಿ ಕರೆಸಿ ಒಪ್ಪಿಸಿ ಆಕೆಯ ಹೆಸರಲ್ಲೇ ಒಡವೆ ಸಾಲ ಕೊಡುವಂತೆ ವ್ಯವಸ್ಥಾಪಕರನ್ನು ಒಪ್ಪಿಸಿದೆ.

ಅವನಿಗೆ ಮನೆ ಕಟ್ಟಡ ಮುಂದುವರೆಸಲು ಇದರಿಂದ ಸಾಧ್ಯವಾಗಿ ಬ್ಯಾಂಕಿನಿಂದ ಮುಂದಿನ ಕಂತೂ ಬಟವಾಡೆಯಾಯಿತು. ಮನೆ ಪೂರ್ಣವಾದಾಗ ಸಂತಸದಿಂದ ಆತ, "ಸಾರ್, ಮನೆಗೆ ನಿಮ್ಮ ಹೆಸರೇ ಇಡಬೇಕು" ಎಂದ. ನಾನು "ಹಾಗೆ ಮಾಡಬೇಡ, ಮನೆಯ ಹಿರಿಯರ ಹತ್ತಿರ ಚರ್ಚೆಮಾಡು" ಎಂದು ತಿಳಿಹೇಳಿ ಕಳಿಸಿದೆ.

ಮುಂದಿನ ವರ್ಷ ಅವನಿಗೆ ಬೆಂಗಳೂರಿನ ಸಿಬಿಐ ಕಚೇರಿಗೆ ವರ್ಗವಾಯಿತು. ಹೊರಡುವಾಗ ಅವನು, ‘‘ಸಾರ್, ಮುಂದೆ ನಿಮಗೇನಾದರೂ ಸಿಬಿ ಐನಿಂದ ಸಹಾಯ ಬೇಕಿದ್ದರೆ ನನ್ನನ್ನು ಸಂಪರ್ಕ ಮಾಡಿ’’ ಎಂದ.

ನಾನು ’’ಅಂಥ ಪರಿಸ್ಥಿತಿ ಬರೋದೇ ಬೇಡ ತಿಪ್ಪಯ್ಯ’’ ಎಂದೆ. ಅವನೂ ಪೆಚ್ಚಾಗಿ ನಕ್ಕ.

ಮಂಡ್ಯ ಜನರ ಅತಿಥಿ ಸತ್ಕಾರ ಗುಣ ಬೇರೆಕಡೆ ಕಾಣಸಿಗದು. ಸಾಲದ ಖಾತೆಯ ಅನುಸರಣಕ್ಕಾಗಿ ಹಳ್ಳಿಗಳಿಗೆ ಹೋದಾಗ ಸಂಬಂಧಪಟ್ಟ ಸಾಲಗಾರ ಇರಲಿ ಇಲ್ಲದಿರಲಿ "ಬನ್ನಿ, ಕುಂತ್ಕೋಳಿ. ಇನ್ನೇನು ವೀರೇಶಿ ಬರೋ ಹೊತ್ತು. ಏಳಿ ಹಿಟ್ಟುಣ್ಣಿ. ಕಾಫಿ ತಗೊಳ್ಳಿ, ಎಳನೀರು ತರಿಸ್ತೀನಿ." ಎನ್ನುತ್ತಿದ್ದರು. ಅವರ ತಾಯಿಯೋ, ಅಕ್ಕನೋ, ಹೆಂಡತಿಯೋ ಎಂಥ ಸಂಕೋಚಜೀವಿಯೂ ಇಂಥ ಮನದಾಳದ ಮಾತುಗಳಿಂದ ಕರಗಿಹೋಗಲೇಬೇಕು.

ಕೋರ್ಟುಗಳಲ್ಲಿ ನಾನು ಬ್ಯಾಂಕ್ ಸಾಲದ ಸಂಬಂಧದ ಮೊಕದ್ದಮೆಗಳಲ್ಲಿ ಫಿರ್ಯಾದುದಾರರ ಸಾಕ್ಷಿ ಹೇಳಲು ಹೋದಾಗ ನಮ್ಮ ಬ್ಯಾಂಕಿನ ವಕೀಲರು ನ್ಯಾಯಾಧೀಶರಿಗೆ, ‘‘ಸ್ವಾಮಿ, ಇವರು ಮೈಸೂರ ಮಲ್ಲಿಗೆ ಕವಿ ಕೆ ಎಸ್ ನ ಅವರು ಪುತ್ರರು’’ ಎಂದು ಪರಿಚಯಿಸುತ್ತಿದ್ದರು. ಅವರೂ ಕೂಡ ಸಂತಸದಿಂದ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿ ಮುಂದಿನ ಕಲಾಪ ನಡೆಸುತ್ತಿದ್ದರು.

ನಮ್ಮ ಬ್ಯಾಂಕಿನ ಜೀಪು ಅವರ ಹಳ್ಳಿಗಳ ಮುಂದೆ ಹಾದುಹೋದರೆ ಸಾಕು ರೈತಾಪಿತ ಗ್ರಾಹಕರು ತಮ್ಮೆಲ್ಲ ಕೆಲಸ ನಿಲ್ಲಿಸಿ ಬಂದು ಜೀಪಿನತ್ತ ಕೈಬೀಸಿ ತಮ್ಮ ಅಭಿಮಾನ ಪ್ರದರ್ಶಿಸುತ್ತಿದ್ದು ಇಂದೂ ನನ್ನ ನೆನಪಿನಲ್ಲಿದೆ.

ಮೊಗೆದಷ್ಟೂ ಅಕ್ಷಯ ಸಕ್ಕರೆ ನಾಡಿನ ಇಂಥ ಸವಿನೆನಪುಗಳು.

***

ಕಾಲಚಕ್ರ ಉರುಳುತಿದೆ

-ಎಲ್. ಗಿರಿಜಾ ರಾಜ್

ಸೂರ್ಯನ ಸುತ್ತ ಸುತ್ತುತಿರೆ, ತಿರೆ
ಕಾಲಚಕ್ರದ ಉರುಳು ನಿರಂತರ!
ನಿಮಿಷ, ಗಂಟೆ, ವರ್ಷ, ಮನ್ವಂತರ
ಕಾಲದ ನಡೆ ಅಪರಂಪಾರ...
ಬಂದಿದೆ ಹೊಸ ವರುಷ ಯಥಾ ಪ್ರಕಾರ!

ಮುಂದೋಡುವುದೇ ಕಾಲದ
ನಿಯಮ! ಬಾರದೆಂದೂ ಕಳೆದ
ಒಂದೊಂದು ಗತ ಗಳಿಗೆ
ಕೊನೆಗೆ ಮರ್ತ್ಯ ತನುವಿದೂ ಮಾಯ!
ದೇಹ ಎಂದಾದರೂ ಮಣ್ಣಾಗುವುದೇ ಥತ್ಯ!

ನಿಷ್ಕಲಂಕ ಸಾಧನೆಗಳ ಹೊರತು
ಉಳಿದೀತೆ ಇಲ್ಲಿ ಹೆಜ್ಜೆ ಗುರುತು?
ನೀನಿಲ್ಲಿ ಬಂದುದಕೆ, ಬಾಳಿದ ರೀತಿಗೆ!

ಅಸಂಖ್ಯ ಘಾತ ವಿಘಾತಗಳ
ತನ್ನೊಳಡಗಿಸಿ ಸರಿದು ಹೋಯಿತು
ಹಳೆಯ ವರುಷ!
ಹೆಕ್ಕಿ ತೆಗೆದರೆ ಬೊಗಸೆಯಷ್ಟು
ಸಿಕ್ಕೀತು ಹರುಷ!
ದುಃಖಿಸುತ ಕೂಡುವುದೇ
ವಿನಾಶ ಎಂಬ ನೆಪ ಹೂಡಿ,
ಹಾಕಲೇಬೇಕು ಬದುಕಲು ಹೊಸವೇಷ!

ನಮ್ಮ ಹಿಂದೆ ಓಡುವುದಿಲ್ಲ
ಕಾಲಚಕ್ರ! ಸದಾ ಅದರ ಹಿಂದೆ ನಮ್ಮ ಓಟ!
ಆಟಾಟೋಪ, ತಂತ್ರ-ಕುತಂತ್ರ!

ಸದಾ ಉಸುರು, ಒಂದೇ ಮಂತ್ರ
ಬಂದದ್ದು ಬರಲಿ, ಗೋವಿಂದನ
ದಯೆ ಇರಲಿ! ರೂಪಿಕೊಂಡಾಗಿದೆ ಸಿದ್ಧ ತಂತ್ರ!!

ಕಣ್ಣೆದುರೇ ಸಂಭವಿಸುತಿವೆ
ಭವಿಹೃದಯಗಳು ದ್ರವಿಸುತಿದೆ
ಕಣ್ಣಿರಿವ ಅದೆಷ್ಟೋ ನೋಟಗಳ
ನೋಡಿಯೂ ನೋಡದಂತೆ
ನಟಿಸುವ ಧೂರ್ತ ವಿದ್ಯೆ!
ಯಾರೂ ಹೇಳಿಕೊಡದೆ ಬಂದಿದೆ
ಬೇಗ! ಹುಂಬರಂತೆ ಸುಮ್ಮನಿರುವ
ವೇಷ ನಮ್ಮದೀಗ!

ಒಂಟಿ ಜೀವಗಳ ಹೋರಾಟ
ಪ್ರಾಣಕ್ಕೆ ಮೂಲ! ಶಿಕ್ಷೆಯಿಲ್ಲದೆ
ಹೆಚ್ಚಿಕೊಂಡಿವೆ ಜಾಲ!

ವ್ಯಷ್ಟಿಯ ಅಸಹಾಯಕತೆ ಸಾಕು!
ಕ್ರಿಯೆಗಿಳಿಯದ ಅಯ್ಯೋಗಳೇಕೆ
ಬೇಕು? ಅನಿಷ್ಟಗಳ ತೊಲಗಿಸೆ
ಸಮಷ್ಟಿಯ ಸಂಕಲ್ಪ ಬೇಕು!

ಇಲ್ಲದಿರೆ ಹೊಸ ವರುಷದಲೂ
ಇವೇ ಸಂಕಟಗಳ ಸುರಿಮಳೆ!
ಅಯ್ಯೋ! ಅಯ್ಯೋ! ವ್ಯರ್ಥ
ಪುನರಾವರ್ತನೆ!

ಕೈ ಕೈ ಹಿಡಿದು ಕುಲುಕಿದ್ದು,
ಹೊಸ ಸಂಕಲ್ಪಗಳ ಸಾರಿದ್ದು,
ಹ್ಯಾಪಿ ನ್ಯೂ ಇಯರ್ ಕಿವಿ
ಕಿವಿಯೊಳಾಡಿದ್ದು,
ಹುಸಿ ಸಂಭ್ರಮಗಳೆಲ್ಲ
ಗಹಗಹಿಸಿ ನಗುತ್ತವೆ..!

***

ನಾಗತ್ತೆಯ ಶಿಶುವಿಹಾರ

– ಗೋಪಿನಾಥ್

ನಾಗತ್ತೆಯ ಗಂಡ ನಮ್ಮ ಸೋದರಮಾವ. ಅದೇಕೆ ಸೋದರಮಾವ ಅನ್ನುವ ಬದಲು ನಾಗತ್ತೆಯ ಗಂಡ ಎಂದಿರಲ್ಲ! ಆಶ್ಚರ್ಯ ವಾಗುತ್ತಲ್ಲ, ಈ ಇಬ್ಬರಲ್ಲಿ ಯಾರು ಪ್ರಖ್ಯಾತರು ಎನ್ನುವುದು ಮುಖ್ಯ ಅದಕ್ಕೆ ಹಾಗೆಂದೆ.

ನನ್ನ ಸೋದರಮಾವನ ಪ್ರವರ ಬಹಳ ದೊಡ್ಡದು, ಅವರ ಹೆಸರು ಸತ್ಯಯೇಂದ್ರಪ್ಪ ಅಂತ.

ಒಂದೂ ಉದ್ಯೋಗವಿರದೆ ಎಲ್ಲ ಉದ್ಯೋಗ ಬಲ್ಲವರು. ಸಕಲ ಕಲಾ ಪ್ರವೀಣ. ಆದರೆ ಒಂದೂ ಉದ್ಯೋಗ ಮಾಡಲಿಲ್ಲ. ಆದರೂ ಅದು ಹೇಗೆ ಟೋಪಿ ಹಾಕಿ ಹೆಣ್ಣು ಪಡೆದರು ಎನ್ನುವುದು ಒಂದು ಸೋಜಿಗವೇ ಸರಿ. ನನ್ನ ಸೋದರತ್ತೆ ಮೊದಲಿಗೆ ಒಂದು ತರ ಪೆದ್ದು. ಸತ್ಯಯೇಂದ್ರಪ್ಪ ಹೇಳಿದ್ದೆಲ್ಲ ಅವನ ಹೆಸರಷ್ಟೇ ಸತ್ಯ ಎಂದು ನಂಬಿದ್ದಳು. ಪಕ್ಕದ ಮನೆಯಲ್ಲಿ ಇದ್ದುಕೊಂಡೆ ನಮ್ಮ ತಾತನಿಗೆ ತಿಳಿಯದಹಾಗೆ ಹುಡುಗಿ ನಾಗಮ್ಮನ್ನ ಪಟಾಯಿಸಿದ್ದರು.

"ನಾಗಮ್ಮನಿಗೆ ಪಕ್ಕದಮನೆ ಸತ್ಯಯೇಂದ್ರಪ್ಪನ ಮೇಲೆ ಕನಿಕರ. ಒಂಟಿ, ಮದುವೆಯಿಲ್ಲದ ಬ್ರಾಹ್ಮಣ, ಅದೇಕೋ ಮದುವೆಯಾಗಿಲ್ಲ. ಪಾಪ ಒಬ್ಬನೆ ಕೈಬಾಯಿ ಸುಟ್ಟುಕೊಂಡು ತಿಂಡಿ, ಅಡುಗೆ ಮಾಡಿಕೊಳ್ಳುತ್ತಾನೆ ಎನಿಸಿ ಕೆಲವೊಂದು ಸಲ ಮೂರು ಜನಕ್ಕೆ ಅಡುಗೆ ಮಾಡುವಾಗ ಇನ್ನೊಬ್ಬರಿಗೆ ಮಾಡುವುದಕ್ಕೇನು ಸವೆಯುತ್ತೆ ಎಂದು ಒಂದು ಹಿಡಿ ಅಕ್ಕಿ ತಾನೆ ಎಂದುಕೊಂಡು ಅವನಿಗೂ ಸೇರಿಸಿ ಅಡುಗೆ ಮಾಡಿ ನಮ್ಮ ತಾತನಿಗೆ, ಅಜ್ಜಿಗೆ ತಿಳಿಯದ ಹಾಗೆ ಕದ್ದು ಮುಚ್ಚಿ ಅಡುಗೆ ಕೊಡುತ್ತಿದ್ದಳು.

"ಸತ್ಯಪ್ಪ, ನೀವು ಏಕೆ ಇನ್ನೂ ಮದುವೆಯಾಗಿಲ್ಲ, ನಾನು ಎಷ್ಟು ದಿನ ಹೀಗೆ ನಿಮಗೆ ಕದ್ದು ಅಡುಗೆ ಮಾಡಿ ಡಲಿ"

"ಏಕೆ ಮದುವೆಯಾಗಿಲ್ಲಾಂದ್ರೆ ನೀನು ಪಕ್ಕದಲ್ಲಿ ಹೆಂಡತಿಯಾಗುವಳಿಗಿಂತ ಕಾಳಜಿವಹಿಸಿ ಅಡುಗೆ ಕೊಡುತ್ತೀಯ. ಬೇರೆಯವಳನ್ನು ಮದುವೆಯಾಗಲು ನನಗೆ ಮನಸ್ಸಿಲ್ಲ" ಎಂದು ಅವಳ ಹೃದಯಕ್ಕೆ ಹೂಬಾಣ ಬಿಟ್ಟ.

"ಹೋಗಪ್ಪ, ನೀವು ಹೀಗೆಲ್ಲ ಹೇಳಿದರೆ ನಾಚಿಕೆಯಾಗುತ್ತೆ, ಮತ್ತೆ ಬಂದು ಅಪ್ಪನ ಹತ್ತಿರ ಮಾತಾಡಿ" ಎಂದು ಸೀರೆ ಸೆರಗು ತಿರುಚುತ್ತ ಹೇಳಿ ನಾಗಮ್ಮ ತಾನಾಗೆ ಹಳ್ಳಕ್ಕೆ ಬಿದ್ದಳು.

"ಅಪ್ಪ, ಪಕ್ಕದಮನೆ ಸತ್ಯಪ್ಪಂಗೆ ನನ್ನ ಮದುವೆಯಾಗುವ ಆಸೆಯಂತೆ"

"ಹೇಳದೆ ಏನು ಮಾಡ್ತಾನೆ ಬಡವ. ಉಂಬೋದಕ್ಕೆ ಒಂದು ಪುಗಸಟ್ಟೆ ಮನೆ ಬೇಕಲ್ಲ, ಪಕ್ಕದಮನೆ ಹುಡುಗಿನೇ ಏಕಾಗಬಾರದೂಂತ ನಿಂಗೆ ಗಾಳ ಹಾಕಿದ್ದಾನೆ. ನೀನು ಹೇಗೂ ಕದ್ದು ಕದ್ದು ಊಟ ಕೊಡತ್ತೀಯಲ್ಲ. ಊಟದ ಯೋಚನೆಯಿಲ್ಲ. ಸುಖಕ್ಕೆ ಹೆಂಡತಿ ಬೇಕು, ನನ್ನ ಮನೆಗೆ ಬಂದುಬಿಡಲಿ, ಹೆಂಡತಿಯೂ ಸಿಕ್ಕಹಾಗಾಗುತ್ತೆ ಎನ್ನುವ ಆಸೆ. ಪುಂಡ, ಸೋಮಾರಿ ಮೂರು ಕಾಸಿಗೆ ಪ್ರಯೋಜನ ಇಲ್ಲ, ಬರೀ ಸುಳ್ಳು. ಇದುವರೆಗೂ ಒಂದು ಕಾಯಂ ಕೆಲಸವಿಲ್ಲ. ಸಂಪಾದನೆ ಸೊನ್ನೆ. ನೀನು ಹಳ್ಳಕ್ಕೆ ಬಿದ್ರೆ ಮೂರು ಹೊತ್ತಿನ ಭೋಜನದ ಯೋಚನೆ ಇರಲ್ಲ. ಅದಕ್ಕೆ ನಿನ್ನ ತಲೆ ಕೆಡಿಸಿದ್ದಾ . ಅವನು ದನ ಕಾಯಕ್ಕೂ ಲಾಯಕ್ಕಿಲ್ಲ".

"ಅಪ್ಪ, ನಮ್ಮ ಹತ್ರ ಹೇಗೂ ಹಸು ಕಾಯಕ್ಕೆ ಆಳುಬೇಕಲ್ಲ, ಇಟ್ಟಕೊಳ್ಳಬಹುದು"

"ಅಗಲಿ ಮಗಳೆ, ನಿನ್ನ ದೂರದೃಷ್ಟಿ ಮೆಚ್ಚಬೇಕು. ಇರಲಿ, ಹಸು ಕಾಯಕ್ಕೆ ಹೇಳು, ಆರು ತಿಂಗಳು ಚೆನ್ನಾಗಿ ನೋಡಿಕೊಂಡರೆ ಮದುವೆ ಮಾಡ್ತೀನಿ. ಅದಕ್ಕಾದರೂ ಉಪಯೋಗವಾಗ್ತಾನೋ ನೋಡ್ತೀನಿ''.

ಸತ್ಯಯೇಂದ್ರಪ್ಪ ದನ ಕಾಯೋನಾದ. ಚೆನ್ನಾಗಿ ಉಂಡು, ಹೊಂಗೆ ಮರದ ನೆರಳಲ್ಲಿ ಭುಜದ ಮೇಲಿನ ರಗ್ಗು ಕೆಳಗೆ ಹಾಸಿಕೊಂಡು ಪಿಳ್ಳಂಗೋವಿ ಬಾರಿಸಿಕೊಳ್ಳುತ್ತ, ಆಗೊಮ್ಮೆ ಈಗೊಮ್ಮೆ ಹಸುಗಳನ್ನು ನೋಡಿಕೊಳ್ಳುತ..ನಿದ್ರಿಸುತ್ತಿದ್ದ. ಒಂದು ವಾರದಲ್ಲಿ ಮೂರು ಹೆಣ್ಣು ಕರುಗಳನ್ನು ಚಿರತೆ ಎಳೆದೊಯ್ಯಿತು.

ಹೇಳುವುದೇನು, ಕೆಲಸ ಹೋಯಿತು. ಕೆಲಸ ಹೋದರೇನು ನಾಗಮ್ಮನ ಅನುರಾಗ ಕಡಿಮೆಯಾಗಲಿಲ್ಲ. ಅಪ್ಪ, ಹಸು ಕಾಯೋಕೆ ಸತ್ಯಪ್ಪ ಲಾಯಕ್ಕಿಲ್ಲ ಅಂದ್ರು. ಹೇಗಾದರೂ ಮಾಡಿ ನಮ್ಮ ಪ್ರೀತಿಯನ್ನು ಉಳಿಸಿಕೊಳ್ಳಬೇಕು ಎಂದು ಆ ಪೆದ್ದು ನಾಗಮ್ಮಳ ತಲೆಯಲ್ಲಿಯೂ ಒಂದು ಆಲೋಚನೆ ಹೊಳೆಯಿತು. "ನೋಡು ಸತ್ಯಪ್ಪ, ನಾವು ಒಂದಾಗಬೇಕಾದರೆ ನಾ ಹೇಳದಂಗೆ ಕೇಳಬೇಕು. ನಾನು ಅಪ್ಪಯ್ಯನ್ನ ಒಪ್ಪಿಸುತ್ತೀನಿ" ಎಂದಳು.

"ಆಗಲಿ" ಎಂದ ಸತ್ಯಪ್ಪ.

ಹಳ್ಳಿಯಲ್ಲಿನ ಹತ್ತಾರು ಮನೆಯಲ್ಲಿನ ಮೂರು, ನಾಲ್ಕು ವಯಸ್ಸಿನ ಮಕ್ಕಳನ್ನೆಲ್ಲ ಅವರ ತಂದೆತಾಯಿಯರನ್ನು ಒಪ್ಪಿಸಿ ಇಪ್ಪತ್ತೈದು ಮಕ್ಕಳನ್ನು ಕರೆತಂದು, "ಅಪ್ಪ, ನಾನು ಸತ್ಯಪ್ಪ ಇಬ್ಬರು ಸೇರಿ ಹಳ್ಳಿಯ ಮಕ್ಕಳನ್ನು ನೋಡಿಕೊಳ್ಳುತ್ತೇವೆ. ಹಿರಿಯರೆಲ್ಲ ಹೊಲ ಗದ್ದೆ ಕೆಲಸಕ್ಕೆ ಹೋಗಲು ಅನುಕೂಲವಾಗುತ್ತೆ. ದುಡಿಯೋರಿಗೆ ಮಕ್ಕಳ ತೊಂದರೆ ಇರಲ್ಲ. ನಾವು ಸಾಯಂಕಾಲದ ತನಕ ನೋಡಿಕೊಳ್ಳುತ್ತೇವೆ. ಅವರಿಗೆ ಹೆಚ್ಚು ಅನುಕೂಲವಾಗಿ ಒಳ್ಳೆಯ ಬೆಳೆ ಬರುತ್ತೆ. ನಮಗೂ ಸಹಾಯಮಾಡಿದ್ದಕ್ಕೆ ನಾಲ್ಕು ಕಾಸು ಕೊಡಬಹುದಲ್ಲ" ಎಂದಳು.

"ಮಗಳೆ, ನೀನು ಎಷ್ಟು ಬುದ್ದಿವಂತಳಮ್ಮ, ಸೋಮಾರಿ ವರನ್ನ ಕೆಲಸಕ್ಕೆ ಹಚ್ಚಿದೆ ಮತ್ತು ಎಲ್ಲರಿಗೂ ಅನುಕೂಲ ಕಲ್ಪಿಸಿದೆ ದುಡಿಯಕ್ಕೆ" ಎಂದು ಹಾಡಿ ಹೊಗಳಿದರು.

ಹೀಗೆ ನಾಗತ್ತೆ ಉದರನಿಮಿತ್ತ ಒಂದು ಉದ್ಯೋಗಕ್ಕಾಗಿ ಮಾಡಿದ ಆಲೋಚನೆ ಅದೃಷ್ಟ ಕೈಗೂಡಿತು. ಅವಳು, ಅವಳ ಗಂಡನಿಂದಲೇ ಮೊದಲು ಶಿಶುವಿಹಾರದ ಕಾನ್ಸೆಪ್ಟ್ ಶುರುವಾಗಿದ್ದು. ಮುಂದೆ ನಾಗತ್ತೆಯ ಶಿಶುವಿಹಾರ ತುಂಬ ಪ್ರಚಾರಕ್ಕೆ ಬಂದು ಹಳ್ಳಿಯಿಂದ ಪಟ್ಟಣ ಸೇರಿದರು. ನಾಗತ್ತೆಯ ಶಿಶುವಿಹಾರ ಎಂದೇ ಪ್ರಖ್ಯಾತವಾಯಿತು!

***

ಹರಟೆ

ಹಸಿದವರ ಅಳಲು

– ಕಮಲಾಕ್ಷಿ ಸಿ.ಆರ್.

ಅದು ಡಿಸೆಂಬರ್ ತಿಂಗಳ ಎರಡನೇ ವಾರದ ಒಂದು ದಿನ. ಸಂಜೆ ಸುಮಾರು ಆರು ಗಂಟೆ ಆಗಿತ್ತು. ಬೆಂಗಳೂರು ಜನ ಶಾಲು, ಸ್ವೆಟರ್, ಜರ್ಕಿನ್ನು ಅಂತ ಹಾಕ್ಕೊಂಡಿದ್ರೂ ಚಳಿ ತಡೆಯೋಕ್ಕಾಗದೆ ಗಡಗಡ ನಡುಗ್ತಾ ಎದ್ನೋ ಬಿದ್ನೋ ಅಂತ ಗಡಿಬಿಡಿಯಿಂದ ಮನೆ ದಾರಿ ಹಿಡಿದಿದ್ರು. ಜೆಪಿ ನಗರದ ಸಣ್ಣ ಕಾಡು ಅಂತ ಕರೆಯೋ ಒಂದು ಪಾರ್ಕಿದೆ. ಅದರ ಎದುರಿಗೆ ಎಂಟಿಆರ್ ಹೋಟೆಲ್, ಪಾರ್ಕ್ ವ್ಯೂ ಹೋಟೆಲ್ ಇವೆ. ಜೊತೆಗೆ ಇಡ್ಲಿ, ದೋಸೆ, ಚಿತ್ರಾನ್ನ ಬಡಿಸೋ ತಳ್ಳು ಗಾಡಿಗಳೂ ಇವೆ. ನಾನು ಹೇಳೋಕೆ ಹೊರಟಿರೋದು ಈ ಊಟ ತಿಂಡಿ ವಿಚಾರ ಅಂತೂ ಅಲ್ಲ ಬಿಡಿ. ಇಷ್ಟೆಲ್ಲ ಊಟದ ವ್ಯವಸ್ಥೆ ಇದ್ರೂ ಒಂದು ವಾರದಿಂದ ಹಸಿದುಕೊಂಡು ಒದ್ದಾಡ್ತಾ ಇರೋ ರಕ್ತ ಹೀರೋ ಜೀವಿಗಳ ಬಗ್ಗೆ.

ಅದೇ ಆ ಸಣ್ಣ ಕಾಡಿನ ಸುತ್ತ ರಸ್ತೆಗಳಲ್ಲಿ ಕ್ಷೀಣಿಸಿದ ಸ್ವರದಲ್ಲಿ ಸೋಂಯ್ ಅಂತ ಸಂಗೀತ ಹಾಡೋದು ಕೇಳಿಸ್ತು. ಅದೇನು ಅಂತ ನೋಡಿದ್ರೆ ಆ ದಿನ ಸೊಳ್ಳೆಗಳ ಮಹಾಸಭೆ ಕರೆದಿದ್ರಂತೆ. "ಮೀಟಿಂಗ್ ಕರೆದ್ರೆ ಬರಕ್ಕಾಗಲ್ವಾ ಇವಕ್ಕೆ? ಸಂಖ್ಯೆ ಬಹಳ ಕಡಿಮೆಯಾಗಿದೆ" ಅಂತ ಆ ಸೊಳ್ಳೆಗಳ ನಾಯಕ ಹಾರಾಡ್ತಾ ಇದ್ದ. ಅವಕ್ಕೆ ರಾಜಕೀಯದವರಂತೆ ಕಾಸು ಕೊಟ್ಟು ಜನ ಸೇರಿಸೋದು ಗೊತ್ತಿಲ್ಲವಲ್ಲ ಪಾಪ. ಆ ನಾಯಕನ ಹಾರಾಟ ನೋಡಿ, ಒಂದು ವಯಸ್ಸಾದ ಸೊಳ್ಳೆ ಅದರ ರೆಕ್ಕೆ ಹಿಡಿದು ಜಗ್ಗಿ ಹೇಳಿತು, "ಬಲವಾದ ಕಾರಣ ಇರಬೇಕು, ವಿಚಾರಿಸೋಣ ಇರು" ಅಂತ ಸಮಾಧಾನ ಮಾಡ್ತು.

ಅದನ್ನು ಕೇಳಿದ ನಡುವಯಸ್ಸಿನ ಸೊಳ್ಳೆಯೊಂದು ತನ್ನ ಮಾತು ಶುರು ಮಾಡಿತು. "ನಾಯಕರೆ, ನೋಡಿ ನಾಲ್ಕು ದಿನದಿಂದ ನಮ್ಮವರೆಲ್ಲ ಊಟ ಸಿಗದೆ, ರಕ್ತ ಹೀರಕ್ಕಾಗದೆ ನಿತ್ರಾಣರಾಗಿದ್ದಾರೆ. ಹಾರಲೂ ಆಗದಿರೋ ನಮ್ಮ ಮಕ್ಕಳನ್ನು ಎಲ್ಲಾದ್ರೂ ಊಟ ಸಿಕ್ಕರೆ ನೋಡಿ, ರಕ್ತ ಸಿಕ್ಕರೆ ಹೀರಿ ಅಂತ ಬಿಟ್ಟು ಬಂದಿದ್ದೀವಿ" ಎಂದಿತು.

ಅದರ ಮಾತಿಗೆ ಹೌದೆನ್ನುವಂತೆ ತಲೆಯಾಡಿಸಿದ ನಾಯಕ ಸೊಳ್ಳೆ, "ಛೇ.. ಈ ಬೆಂಗಳೂರು, ದೇಶ ವಿದೇಶದ ಮನುಷ್ಯರಿಗೆ ಮಾತ್ರವಲ್ಲ, ನಮಗೂ ಒಳ್ಳೆಯ ವಾಸ ಸ್ಥಾನ ಆಗಿತ್ತು. ಯಾರ ಕಣ್ಣು ಬಿತ್ತೋ, ಕೆಲದಿನಗಳಿಂದ ನಮ್ಮ ಕುತ್ತಿಗೆಗೆ ಬಂದಿದೆ. ಅದಕ್ಕೆ ನಿಮ್ಮನ್ನೆಲ್ಲ ಕರೆದದ್ದು" ಅಂತ ಪ್ರಸ್ತಾವನೆ ಇಡ್ತು.

ಮತ್ತೊಂದು ಸೊಳ್ಳೆ ಇದನ್ನೇ ಕಾಯ್ತಾ ಇತ್ತೇನೋ.., "ಹೌದು ನಾಯಕ, ಗಿಡಗಳ ಎಲೆಗಳೆಲ್ಲ ಕಳಚಿಕೋತಾ ಇವೆ, ಹೂವು ಅರಳ್ತಾನೆ ಇಲ್ಲ. ಅವುಗಳಲ್ಲಿ ಹೀರೋಕೆ ರಸನೇ ಇಲ್ಲದಂಗೆ ಒಣಗ್ತಾ ಇವೆ. ಸಾಲದು ಅಂತ ಈ ಜನ ನಾವು ರಕ್ತ ಹೀರೋಕೆ ಆಗದಹಾಗೆ ದಪ್ಪ ಬಟ್ಟೆ ಹಾಕ್ತಾ ಇದ್ದಾರೆ. ದಪ್ಪ ಜೀನ್ಸ್, ಶಾಲು, ಸ್ವೆಟರ್‌ಗಳಿಂದ ದೇಹ ಪೂರ್ತಿ ಹಾಕ್ಕೋತಾರೆ. ಪಾರ್ಕಿಗೆ, ಹೋಟೆಲ್ಲು, ಶಾಪಿಂಗು ಬರೋದೇ ಬಿಟ್ಟಿದ್ದಾರೆ. ಹೀಗಾದ್ರೆ ಹೇಗೆ?" ಎಂದು ಅಲವತ್ತುಕೊಳ್ತು.

ಆ ಸೊಳ್ಳೆ ಇಷ್ಟೊಂದು ವಿಷಯ ಹೇಳ್ತು, ನಾನೇಕೆ ಸುಮ್ಮನಿರಬೇಕು ಅಂತ ಮತ್ತೊಂದು ತನ್ನ ಪ್ರವರ ಶುರುಮಾಡ್ತು. "ಅಲ್ಲಾ ಇಲ್ಲಿರೋ ತಳ್ಳೋ ತಿಂಡಿ ಗಾಡಿ ಹತ್ರ ಕಸದ ಡಬ್ಬಿ ಯಾವಾಗಲೂ ತುಂಬಿರೋದು. ಈಗ ವಾರದಿಂದ ಪಾಪ ತೊಳೆದದ್ದು ತೊಳೆದಹಾಗೇ ಇದೆ. ಅಲ್ಲೂ ಊಟ ಸಿಕ್ತಾ ಇಲ್ಲ. ಆ ಹೋಟೆಲ್ ಕಥೇನೂ ಅದೆ. ನಮ್ಮ ಹೈಕಳೆಲ್ಲ ಛಳಿ, ಹಸಿವು ಅಂತ ಮುದುರಿಕೊಂಡು ಕೂತಿವೆ. ಹಸಿವು ನೀಗಿಸಿಕೊಳ್ಳೋದಾದ್ರೂ ಹೇಗೆ ಅಂತ" ಅಂತು.

ಗಂಡು ಸೊಳ್ಳೆಗಳ ನಡುವೆ ಸೊರಗಿದ್ದ ಒಂದು ಹೆಣ್ಣು ಸೊಳ್ಳೆ ಬಿಂಕ ತೋರುತ್ತ ಮುಂದೆ ಬಂದು ತನ್ನ ಮಾತು ಶುರು ಮಾಡ್ತು. "ನೋಡಿ, ಗಂಡು ಸೊಳ್ಳೆ ಬದುಕೋದೆ ಒಂದು ವಾರ. ಮನುಷ್ಯರ ರಕ್ತ ಗಂಡುಮಕ್ಕಳಿಗೆ ಅವಶ್ಯ ಇರದಿದ್ರೂ ಹೆಣ್ಣು ಸೊಳ್ಳೆಗಳಿಗೆ ಬೇಕೇಬೇಕು. ರಕ್ತ

ಹೀರದಿದ್ರೆ ನಮ್ಮ ಸಂತಾನಕ್ಕೆ ಬೇಕಾದ ಪ್ರೋಟೀನ್ ಸಿಗೋದಾದ್ರೂ ಹೇಗೆ? ನಮಗೆ ಯಾರು ಪ್ರೋಟೀನ್ ಮಿಕ್ಸ್ ಮಾಡಿ ಕೊಡ್ತಾರೆ? ಅಲ್ಲದೆ ಈಗಂತೂ ನೀರು ಬಳಸೋದೆ ಕಡಿಮೆಯಾಗಿ ಎಲ್ಲೂ ನೀರು ನಿಲ್ತಾ ಇಲ್ಲ. ನಾವೆಲ್ಲಿ ಮೊಟ್ಟೆ ಇಡೋದು?" ಎಂದು ತಮ್ಮ ಅಸ್ತಿತ್ವಕ್ಕೆ ಧಕ್ಕೆಯಾದ ಕುರಿತು ಗಂಭೀರವಾದ ಪ್ರಶ್ನೆ ಕೇಳಿತು.

"ನೋಡು ನಾಯಕ, ಇಷ್ಟು ಸಾಲ್ದು ಅಂತ ಈ ಮನುಷ್ಯರು ಈಗೀನ ಬೇಗನೆ ಮನೆ ಸೇರ್ತಾ ಇದ್ದಾರೆ. ಕಿಟಕಿ ಬಾಗಿಲು ಹಾಕಿ ನಾವು ಒಳಗಡೆ ಹೋಗದಂಗೆ ಮಾಡ್ತಾ ಇದ್ದಾರೆ. ಸಾಲದು ಅಂತ ಅದೇನೋ ಕರೆಂಟ್ ಹೊಡೆಸಿ ಸಾಯಿಸೋ ಬ್ಯಾಟ್ನಾಗೆ ಹೊಡ್ದು ನಮ್ಮನ್ನ ಸಾಯಿಸ್ತಾರೆ. ಹಿಂಗಾದ್ರೆ ನಾವು ಬಾಳೇವು ಮಾಡೋದು ಹೆಂಗೆ?" ಅಂತ ಮತ್ತಷ್ಟು ಸಮಸ್ಯೆ ಹೇಳಿತು ಯುವನಾಯಕ ಸೊಳ್ಳೆ.

ಇದನ್ನೆಲ್ಲ ಕೇಳಿದ ನಾಯಕಂಗೆ ಒಮ್ಮೆಲೆ ಕೋಪ ತಲೆಗೇರಿತು. "ಎಲ್ಲರೂ ಬರಿ ಸಮಸ್ಯೆ ಬಗ್ಗೆ ಹೇಳ್ತೀರಲ್ಲ. ಬೆಂಗಳೂರಿನಲ್ಲಿ ಜನಕ್ಕೆ ಬರವಾ? ಅವರನ್ನ ಹಿಡಿಯೋದು ಹೆಂಗೆ ಅಂತ ಯೋಚಿಸಿ. ಈ ಚಳಿ ಎಷ್ಟು ದಿನ ಇದ್ದೀತು? ಕೆಲದಿನ ತಡೆದುಕೊಂಡು ಹೇಗಾದ್ರೂ ಬದುಕಿರಬೇಕು. ಈ ಜನ ಎಷ್ಟು ದಿನ ಪಾನಿಪುರಿ, ಪಿಜ್ಜಾ, ಬರ್ಗರ್ ತಿನ್ನದೇ ಇರ್ತಾರೆ? ಜಾಗ ಬದಲಾಯಿಸಿ, ರಕ್ತ ಸಿಗೋಕಡೆ ಹೋಗಿ. ಈ ಚಳಿಗಾಲದಲ್ಲಿ ದೊಡ್ಡ ಬಂಗಲೆಗಳ ಮುಂದೆ, ಕಛೇರಿಗಳ ಮುಂದೆ ಇರೋ ತೋಟಕ್ಕೆ ಹೋಗಿ, ಮಕ್ಕಳು ಮೈದಾನದಲ್ಲಿ ಆಡಬೇಕಾದರೆ ಸ್ವೆಟರ್ ಬಿಚ್ತಾವೆ. ಶೂ ಹಾಕದವರ ಕಾಲು ಹುಡುಕಿ ರಕ್ತ ಹೀರಲು ನಿಮ್ಮ ಮಕ್ಕಳಿಗೆ ಹೇಳಿ ಕೊಡಿ. ಸಮಯ ನೋಡಿ ದಾಳಿ ಮಾಡಬೇಕು ಅಷ್ಟೆ. ಪರಿಹಾರ ಇರದ ಸಮಸ್ಯೆ ಎಲ್ಲಿರ್ತಾವೆ? ನಮ್ಮ ಸಂತತಿ ಇರೋಹಾಗೆ ನಾವೆಲ್ಲ ಪಣ ತೊಡಬೇಕು. ಚಳಿ ಜಾಸ್ತಿ ಆಗ್ತಾ ಇದೆ. ಇನ್ನು ಹಸಿವು ಕೂಡ. ಸೂರ್ಯದೇವನ ಕೇಳಿಕೊಳ್ಳೋಣ. ನಿನ್ನ ಕಿರಣಗಳು ಪ್ರಖರವಾಗಲಿ ಅಂತ. ಇನ್ನೆರಡು ದಿನ ಬಿಟ್ಟು ಮತ್ತೆ ಸೇರೋಣ. ಎಲ್ಲರೂ ಹೊರಡಿ. ನಿಮ್ಮೆಲ್ಲರಿಗೂ ಆಹಾರ ಸಿಗಲಿ, ಹೆಣ್ಣುಮಕ್ಕಳಿಗೆ ರಕ್ತ ಸಿಗಲಿ.." ಎಂದು ಫರ್ಮಾನು ಹಾಕಿ ಶುಭ ಕೋರಿ ಸಭೆಗೆ ಮುಕ್ತಾಯ ಹಾಡಿತು. ಸೊಳ್ಳೆಗಳು ಸೋಯ್ ಅಂತ ಹಾರಾಡುತ್ತ ಎಲೆಗಳ, ಹೂಗಳ ರಸ, ರಕ್ತವನ್ನು ಅರಸುತ್ತ ಹೊರಟವು.

***

ಶಾಲೆಯೇಕೆ ಬೇಡವಾಯಿತು?

– ಗಾಯತ್ರಿ ಮೂರ್ತಿ

ಸುಷ್ಮ ಏಳನೆಯ ತರಗತಿಯ ವಿದ್ಯಾರ್ಥಿನಿ. ಶಾಲೆಯಲ್ಲಿ ಜಾಣೆಯೆಂದೇ ಹೆಸರು ಪಡೆದವಳು. ಯಾವಾಗಲೂ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸುತ್ತಿದ್ದಳು. ಜೊತೆಗೆ ಅವಳು ಟೀಚರ್‌ಗಳ ನೆಚ್ಚಿನ ಹುಡುಗಿಯರಲ್ಲಿ ಒಬ್ಬಳು. ಶಾಲೆಗೆಂದೂ ಚಕ್ಕರ್ ಹಾಕಿದವಳಲ್ಲ. ತೀರಾ ಜ್ವರ ಬಂದು ಮಲಗಿದರೆ ಅಥವಾ ಇನ್ನಾವುದಾದರೂ ಅನಾರೋಗ್ಯ ಕಾಡಿದರೆ ಮಾತ್ರ ಶಾಲೆಗೆ ರಜೆ ತೆಗೆದುಕೊಳ್ಳುತ್ತಿದ್ದಳು.

ಅದೇಕೋ ತಿಳಿಯದು, ಇದ್ದಕ್ಕಿದ್ದಂತೆ ಸ್ವಲ್ಪ ದಿನಗಳಿಂದ ಶಾಲೆಗೆ ಹೋಗುವುದನ್ನು ನಿಲ್ಲಿಸಿದಳು. 'ನಾನು ಸ್ಕೂಲಿಗೆ ಹೋಗಲ್ಲ. ಹೋಗಲ್ಲ ಅಂದ್ರೆ ಹೋಗಲ್ಲ' ಎಂದು ಮೊಂಡು ಹಿಡಿದಾಗ ತಂದೆತಾಯಿಗೆ ದಾರಿ ಕಾಣದಾಯಿತು. ಇವಳನ್ನು ಹೇಗಪ್ಪಾ ಸ್ಕೂಲಿಗೆ ಕಳಿಸೋದು? ಏನು ಮಾಡಿದರೆ ಸರಿ ಹೋಗ್ತಾಳೆ'? ಎಂದು ಚಿಂತೆಗೀಡಾದರು.

ಅಂದು ಸುಷ್ಮಳ ತಾಯಿ ಕರುಣಾಳ ಗೆಳತಿ ಶೈಲಾ ಅಕಸ್ಮಾತ್ತಾಗಿ ಮನೆಗೆ ಬಂದಳು. 'ಏನೇ ಕರುಣಾ? ಯಾಕೋ ಮಂಕಾಗಿದೀಯಾ? ಯಾವತ್ತೂ ನಿನ್ನನ್ನು ಹೀಗೆ ನೋಡಿರಲಿಲ್ಲ. ಏನಾಯ್ತು?' ಎಂದು ಕೇಳಿದಾಗ ಕರುಣಾ ಹಿಂಜರಿಯುತ್ತಲೇ ಮಗಳ ಸಮಸ್ಯೆ ಬಗ್ಗೆ ಹೇಳಿದಳು.

'ಯಾಕಂತೆ ಹೀಗೆ? ಕಾರಣ ಹೇಳಲ್ವಾ?'

'ಇಲ್ಲಾ. ನಾವೆಷ್ಟೋ ಪ್ರಯತ್ನಪಟ್ವಿ. ಆದರೆ ಅವಳು ಬಾಯಿ ಬಿಚ್ತಲ್ಲ. ಸುಮ್ಮನೆ ನನಗೆ ತೊಂದರೆ ಕೊಡಬೇಡಿ. ನಾನು ಸ್ಕೂಲಿಗೆ ಹೋಗಲ್ಲ. ಯಾಕೇಂತ ಕೇಳ್ಬೇಡಿ ಅಷ್ಟೆ' ಎಂದು ಖಡಾಖಂಡಿತಾಗಿ ಹೇಳಿದ್ಲು. ಏನು ಮಾಡೋಕ್ಕೂ ತೋಚ್ತಿಲ್ಲ' ಎಂದಾಗ ಅಸಹಾಯಕತೆಯಿಂದ ಕರುಣಾಳ ಕಣ್ತುಂಬಾ ನೀರು.

'ಹೌದಾ? ಅಳ್ಬೇಡ್ವೇ. ಅದಕ್ಯಾಕೆ ಯೋಚನೆ ಮಾಡ್ತೀಯಾ? ನನಗೆ ಒಬ್ಬರು ಮನೋವೈದ್ಯರು ಗೊತ್ತು. ಅವರ ಹತ್ರ ಕರ್ಕೊಂಡು ಹೋಗು. ಎಲ್ಲಾ ಸರಿ ಹೋಗತ್ತೆ' ಎಂದಾಗ ಮರುಭೂಮಿಯಲ್ಲಿ ಓಯಸಿಸ್ ಕಂಡಂತಹ ಅನುಭವ ಕರುಣಾಳಿಗೆ.

ಮರುದಿನವೇ ಶೈಲಾ ಮನೋವೈದ್ಯೆ ಮೀರಾಳೊಂದಿಗೆ ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಕರುಣಾಳಿಗೆ ಫೋನ್ ಮಾಡಿ, ನಾಳೆ ಬೆಳಿಗ್ಗೆ ೧೧ ಗಂಟೆಗೆ ಸರಿಯಾಗಿ ಅವರ ಕ್ಲಿನಿಕ್ಕಿಗೆ ಹೋಗು. ನಾನು ನಿನ್ನ ಮಗಳ ಹೆಸರಿನಲ್ಲಿ ಅಪಾಯಿಂಟ್‌ಮೆಂಟ್ ತೆಗೆದುಕೊಂಡಿದ್ದೇನೆ,' ಎಂದಳು. ಕರುಣಾಳಿಗೆ ಮುಳುಗುವವನಿಗೆ ಹುಲ್ಲುಕಡ್ಡಿ ಸಿಕ್ಕಂತಾಯತು.

ಇನ್ನು ಮಗಳನ್ನು ಈ ಬಗ್ಗೆ ಒಪ್ಪಿಸುವುದೆಂತು? ಹೊಸ ಯೋಚನೆ ಕರುಣಾಳಿಗೆ. ಮೊದಲು ಸುಷ್ಮಾ ಒಪ್ಪಲಿಲ್ಲ. ಆದರೆ ಕರುಣಾ, 'ಸುಷ್ಮಾ, ನಿನ್ನ ಒಳ್ಳೆಯದಕ್ಕೆ ಕಣೆ. ನೋಡು, ನೀನಿನ್ನೂ ಬಹಳ ಚಿಕ್ಕವಳು. ವಿದ್ಯಾಭ್ಯಾಸ ಮುಂದುವರೆಸಿ, ಲಾಯರಾಗಬೇಕು ಅನ್ನೋ ನಿನ್ನ ಆಸೆಯನ್ನು ಪೂರೈಸಿಕೊಳ್ಳಬೇಕಲ್ವಾ? ಹೀಗೆ ಸ್ಕೂಲಿಗೆ ಹೋಗದೆ ಮನೆಯಲ್ಲಿ ಕೂತರೆ ನಿನ್ನ ಕನಸು ನನಸಾಗೋದು ಹೇಗೆ'? ಎಂದು ಬಗೆಬಗೆಯಾಗಿ ಹೇಳಿದಾಗ ಸುಷ್ಮಾ ಹಿಂಜರಿಯುತ್ತಲೇ ಮನೋವೈದ್ಯೆಯನ್ನು ನೋಡಲು ಒಪ್ಪಿದಳು.

ಮನೋವೈದ್ಯೆ ಮೀರಾ ಬಳಿ ಹೋದಾಗ ಅವರು ಕರುಣಾಳಿಗೆ, 'ಮೊದಲು ನಾನು ಸುಷ್ಮಾ ಜೊತೆ ಮಾತಾಡ್ತೀನಿ. ಆಮೇಲೆ ನಿಮ್ಮನ್ನೂ ಕರೀತೀನಿ' ಎಂದಾಗ, ಸುಷ್ಮಾ ಹಿಂಜರಿದಳು. 'ಹೆದರಬೇಡ ಸುಷ್ಮಾ' ಎಂದು ಹೇಳಿ ಅವಳಿಗೆ ಕುಡಿಯಲು ನೀರು ಕೊಟ್ಟು, ನಿಧಾನವಾಗಿ ಅವಳ ಶಾಲೆಯ ವಿಷಯಕ್ಕೆ ಬಂದರು. ಯಾವ ವಿಷಯ ಇಷ್ಟ, ಯಾವುದು ಕಷ್ಟ ಎಂಬ ಬಗ್ಗೆ ವಿಚಾರಿಸಿದರು. 'ನಿಮ್ಮ ಸ್ಕೂಲಲ್ಲಿ ಫಿಸಿಕಲ್ ಎಜುಕೇಶನ್ ಅಂದ್ರೆ ವ್ಯಾಯಾಮಕ್ಕೆ ಮೀಸಲಾದ ಪೀರಿಯಡ್ ಇದೆಯಾ'?

ಆ ಪ್ರಶ್ನೆಗೆ ಸುಷ್ಮಳ ಮುಖ ಬಿಗಿದುಕೊಂಡಿತು. ಅವಳು ಇದ್ದಕ್ಕಿದ್ದಂತೆ ಅಳತೊಡಗಿದಳು. 'ಅಳಬೇಡ. ಸಮಾಧಾನ ಮಾಡ್ಕೊ. ನೀರು ಕುಡಿ. ಆಮೇಲೆ ನಿಧಾನವಾಗಿ ಯೋಚಿಸಿ ಮಾತನಾಡು' ಎಂದರು ಮನೋವೈದ್ಯರು.

ಸುಷ್ಮಾ ಹೇಳಿದ್ದಿಷ್ಟು. ಅವರ ಫಿಸಿಕಲ್ ಎಜುಕೇಶನ್ ಮಾಸ್ಟರ್ ಆ ಪೀರಿಯಡ್‌ನಲ್ಲಿ ಹೆಣ್ಮಕ್ಕಳ ಮೈಮುಟ್ಟಿ ಮಾತಾಡಿಸ್ತಿದ್ರಂತೆ. ಆದರೆ ಅವರ ಸ್ಪರ್ಶದಲ್ಲಿ ವಿದ್ಯಾರ್ಥಿನಿಗೆ ಸಹಾಯ ಮಾಡುವ ಬದಲು, ಬೇಕೆಂದೇ ಅವರುಗಳನ್ನು ಅಸಭ್ಯವಾಗಿ ಸ್ಪರ್ಶಿಸುತಿದ್ದರಂತೆ. ಒಂದು ದಿನ ಸುಷ್ಮಾ ತಡೆಯಲಾರದೆ, 'ಸರ್, 'ಗುಡ್ ಟಚ್, ಬ್ಯಾಡ್ ಟಚ್ ಬಗ್ಗೆ ಗೊತ್ತಿದೆ. ನಿಮ್ಮದು ಬ್ಯಾಡ್ ಟಚ್. ದಯವಿಟ್ಟು ಹಾಗೆ ಮಾಡಬೇಡಿ. ಮತ್ತೊಮ್ಮೆ ಹೀಗೆ ನಡೆದುಕೊಂಡರೆ ನಾನು ಹೆಡ್ ಮಿಸ್‌ಗೆ ಕಂಪ್ಲೇಂಟ್ ಮಾಡ್ತೀನಿ' ಎಂದಳಂತೆ. ಅಷ್ಟಕ್ಕೇ ಅವರು ಕೋಪಗೊಂಡು, 'ನನಗೇ ಹೇಳಿಕೊಡಕ್ಕೆ ಬರ್ತೀಯಾ? ಬ್ಯಾಡ್ ಟಚ್ ಅಂದ್ರೆ ಏನೂಂತ ಒಂದು ದಿನ ತೋರಿಸ್ತೀನಿ. ಮುಚ್ಚು ಬಾಯಿ' ಎಂದು ಗದರಿದರಂತೆ. ಅಲ್ಲಿಗೆ ಆ ಪ್ರಕರಣ ಮುಗಿದಿತ್ತು. ಸ್ವಲ್ಪ ದಿನ ಆ ಮಾಸ್ತರು ಎಚ್ಚರಿಕೆಯಿಂದಿದ್ದರು.

ಆ ದುರ್ದಿನ ಸುಷ್ಮಾ ತರಗತಿಯಲ್ಲಿ ಪಾಠದ ಮಧ್ಯೆ ಬಾತ್‌ರೂಮಿಗೆ ಹೋಗಲೇಬೇಕಾದ ಅನಿವಾರ್ಯತೆಯುಂಟಾಯಿತು. ಟೀಚರ್‌ಗೆ ಹೇಳಿ ಬಾತ್‌ರೂಮಿಗೆ ಹೋದಕೂಡಲೇ, ಎಲ್ಲಿದ್ದನೋ ಆ ಫಿಸಿಕಲ್ ಎಜುಕೇಶನ್ ಮಾಸ್ತರು ಒಳಬಂದು ಬಾಗಿಲು ಹಾಕಿ, ಅವಳ ಮೇಲೆ ಆಕ್ರಮಣ ಮಾಡಿದ. ಕೂಡಲೇ ಅವಳು ಅವನಿಗೆ ಬಲವಾಗಿ ಕಚ್ಚಿ ಅಲ್ಲಿದ ತಪ್ಪಿಸಿಕೊಂಡು ಓಡಿಹೋದಳು. 'ನನ್ನ ಕೈಗೆ ಸಿಗದೆ ಎಲ್ಲಿ ಹೋಗ್ತೀಯಾ? ಒಂದಲ್ಲ ಒಂದು ದಿನ ನಾನೇನು ಅಂತ ನಿನಗೆ ತೋರಿಸ್ತೀನಿ. ಆಗ ಗೊತ್ತಾಗತ್ತೆ' ಎಂದು ಕೂಗುತ್ತಾ ಹೊರಗೋಡಿದ ಆ ಮಾಸ್ತರು. ಮರುದಿನದಿಂದಲೇ ಸುಷ್ಮಾ ಶಾಲೆಗೆ ಹೋಗುವುದಿಲ್ಲವೆಂದು ಹಠ ಹಿಡಿದು ಮನೆಯಲ್ಲಿ ಉಳಿದುಕೊಂಡಿದ್ದಳು. ಅವಳಿಗೂ ತಿಳಿಯದು, ಮುಂದೇನು ಮಾಡಬೇಕೆಂದು.

'ಹೆಡ್‌ಮಿಸ್‌ಗೆ ಯಾಕೆ ಹೇಳ್ಲಿಲ್ಲ?' ಎಂಬ ಪ್ರಶ್ನೆಗೆ, 'ಆ ಮಾಸ್ತರು ತುಂಬಾ ಇನ್ಫ್ಲುಯೆನ್ಸ್ ಇರವ್ರು. ಮಿನಿಸ್ಟರ್ ಕಡೆಯಿಂದ ಬಂದವರು. ಅದಕ್ಕೇ ಅವರದು ಆಡಿದ್ದೇ ಆಟ' ಎಂದಳು ಸುಷ್ಮಾ.

ಮನೋವೈದ್ಯರು 'ಸುಷ್ಮಾಳಿಗೆ ನೀನು ಸುಮ್ಮನಿರು. ನಾನು ಎಲ್ಲಾ ಸರಿಮಾಡ್ತೀನಿ' ಎಂದು ಧೈರ್ಯ ಹೇಳಿ, 'ನೀನು ಆಚೆ ಇರು. ನಿನ್ನ ತಾಯೀನ ಕಳಿಸು' ಎಂದು ಹೇಳಿದಾಗ 'ಡಾಕ್ಟರ್, ಎಲ್ಲಾ ಸರಿಹೋಗತ್ತೆ ಅಲ್ವಾ? ನಾನು ಮತ್ತೆ ಸ್ಕೂಲಿಗೆ ಹೋಗ್ಬೋದಾ?' ಕೇಳಿದಳು.

'ಖಂಡಿತವಾಗ್ಲೂ. ನೀನು ಯೋಚನೆ ಮಾಡ್ಬೇಡ' ಎಂದು ಅವಳ ಬೆನ್ನು ತಟ್ಟಿ ಕಳಿಸಿದರು ಮನೋವೈದ್ಯೆ. ನಂತರ ತಾಯಿಗೆ ಸುಷ್ಮಾಳ ಶಾಲೆಯ ಹೆಡ್ ಮೇಡಂ ಬಳಿ ಮಾತನಾಡಲು ಹೇಳಿದರು. ಜೊತೆಗೆ ಅಂದೇ ಆ ಶಾಲೆಯ ಹೆಡ್ ಮೇಡಂಗೆ ಫೋನ್ ಮಾಡಿ ವಿಷಯ ತಿಳಿಸಿ, ಆ ಮಾಸ್ತರಿಗೆ ಬುದ್ಧಿ ಕಲಿಸಲು ತಿಳಿಸಿದರು.

ಹೆಡ್ ಮೇಡಂ ಕೂಡಲೇ ಆ ಮಾಸ್ತರರನ್ನು ಕರೆಸಿ ವಿಚಾರಿಸಿದಾಗ ಮೊದಲು ಒಪ್ಪಿಕೊಳ್ಳದಿದ್ದರೂ. ಪೋಲೀಸರ ಬೆದರಿಕೆ ಹಾಕಿದಾಗ ಹೌದೆಂದು ತಪ್ಪೊಪ್ಪಿಕೊಂಡ. 'ನೀವು ಹೆಣ್ಣುಮಕ್ಕಳ ಶಾಲೆಯಲ್ಲಿರಲು ಲಾಯಕ್ಕಿಲ್ಲ. ಈ ಕೂಡಲೇ ರಾಜೀನಾಮೆ ಕೊಡಿ. ಇಲ್ಲವಾದರೆ ಡಿಸ್ ಮಿಸ್ ಮಾಡ್ತೀನಿ' ಎಂದಾಗ ಆತ ರಾಜೀನಾಮೆ ನೀಡಿ ದುರ್ದಾನ ತೆಗೆದುಕೊಂಡವನಂತೆ ಶಾಲೆಯಿಂದ ಹೊರಟುಹೋದ.

ಮರುದಿನದಿಂದಲೇ ಸುಷ್ಮಾ ಶಾಲೆಗೆ ಹೋಗಲಾರಂಭಿಸಿದಳು. ಜೊತೆಗೆ ಏಳನೆಯ ತರಗತಿಯ ಅಂತಿಮ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ಪಾಸಾದಳು. ತನಗೆ ಸಹಾಯ ಮಾಡಿದ ಮನೋವೈದ್ಯರ ಬಳಿ ಬಂದು ಅವರಿಗೆ ಸಿಹಿ ನೀಡಿ ಸಂಭ್ರಮಪಟ್ಟಾಗ, ಮನೋವೈದ್ಯೆಯ ಮುಖದಲ್ಲಿ ಸಾರ್ಥಕತೆಯ ಭಾವ ಮೂಡಿತು.

***

ಡಾ. ದೇಬಾಲ ಮಿತ್ರ

– ನಾಗರತ್ನ ಚಂದ್ರಶೇಖರ್



ಡಾ. ದೇಬಾಲ ಮಿತ್ರ (1925–2005) ಭಾರತದ ಮೊದಲ ಮಹಿಳಾ ಪುರಾತತ್ವ ಶಾಸ್ತ್ರಜ್ಞೆ. ಡಿಸೆಂಬರ್ 14, 1925ರಂದು ಬಂಗಾಳ ಪ್ರಾಂತ್ಯದ (ಈಗ ಬಾಂಗ್ಲಾದೇಶ) ಖುಲ್ನಾದಲ್ಲಿ ಜನಿಸಿದರು.

ಇಂದು ಭಾರತ ವೈಜ್ಞಾನಿಕವಾಗಿ ಮಂಚೂಣಿಯಲ್ಲಿದೆ. ಸ್ವಾತಂತ್ರ್ಯಪೂರ್ವದ ಮತ್ತು ಸ್ವಾತಂತ್ರ್ಯೋತ್ತರ ಸಂಶೋಧನಾಸಕ್ತ ಮಹಿಳೆಯರಿಗೆ ಇವರು ದಾರಿದೀಪವಾಗಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ. ಬೆಂಗಾಲದಲ್ಲಿ ಶಿಕ್ಷಣವು ಬ್ರಾಹ್ಮಣ, ವೈದ್ಯ, ಕ್ಷತ್ರಿಯ ಕುಟುಂಬಗಳಿಗೆ ಮಾತ್ರ ಮೀಸಲಾಗಿದ್ದು, ವೈಜ್ಞಾನಿಕ ಇತಿಹಾಸದ ವಾರ್ಷಿಕಗಳಲ್ಲಿ ಮಹಿಳಾ ವಿಜ್ಞಾನಿಗಳ ಅಮೂಲ್ಯ ಕೊಡುಗೆಗಳನ್ನು ಬಹಳ ಸಮಯದಿಂದ ಮರೆ ಮಾಡಲಾಗಿದೆ ಅಥವಾ ಕಡೆಗಣಿಸಲಾಗಿದೆ. ನಾವು ಭೂತಕಾಲವನ್ನು ಪರಿಶೀಲಿಸಿದಾಗ ಭಾರತದಲ್ಲಿನ ವಿಜ್ಞಾನ ವಿಕಾಸವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಸಮಾಜದ ಮಾನದಂಡಗಳನ್ನು ಧಿಕ್ಕರಿಸಿದ, ಗಾಜಿನ ಚಾವಣಿಗಳನ್ನು ಒಡೆದುಹಾಕಿದ ಮತ್ತು ವಿಜ್ಞಾನದಲ್ಲಿ ಅಳಿಸಲಾಗದ ಛಾಪು ಮೂಡಿಸಿರುವ ಭಾರತದ ಪ್ರಸಿದ್ಧ ಮಹಿಳಾ ವಿಜ್ಞಾನಿಗಳ ಒಂದು ಶ್ರೇಣಿಯನ್ನೇ ನಾವು ಕಂಡುಕೊಳ್ಳಬಹುದು.

ಇತ್ತೀಚಿನ ವರ್ಷಗಳಲ್ಲಿ ಲಿಂಗ ಸಮಾನತೆಯು ವಿವಾದಾಸ್ಪದ ವಿಷಯವಾಗಿದೆ. ವಿಜ್ಞಾನ, ಕಲೆಗಳು, ಕ್ರೀಡೆ ಮತ್ತು ಹಣಕಾಸು ಕ್ಷೇತ್ರಗಳಲ್ಲಿ ಮಹಿಳೆಯರ ಸಾಧನೆಗಳನ್ನು ಗುರುತಿಸುವುದು ಅತ್ಯಗತ್ಯ. ಭಾರತೀಯ ಮಹಿಳೆಯರು ವಿಜ್ಞಾನ ಕ್ಷೇತ್ರಕ್ಕೆ ತಮ್ಮ ಅಮೂಲ್ಯ ಕೊಡುಗೆಗಳೊಂದಿಗೆ ನಾವು ಹೆಮ್ಮೆಪಡುವಂತೆ ಮಾಡಿದ್ದಾರೆ. ತಾಂತ್ರಿಕ ಪ್ರಗತಿಯನ್ನು ಹೆಚ್ಚಿಸಲು ನೆರವಾಗಿದ್ದಾರೆ.

ದೇಬಾಲ ಮಿತ್ರ, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಮಹಾನಿರ್ದೇಶಕರಾಗಿ (ಎಎಸ್ಐ) ಸೇವೆ ಸಲ್ಲಿಸಿದರು. .ಖುಲ್ನಾ ಮತ್ತು ಕೊಲ್ಕತ್ತಾದಲ್ಲಿ ಆರಂಭಿಕ ಶಿಕ್ಷಣವನ್ನು ಪಡೆದು, ನಂತರ ಪ್ಯಾರೀಸ್‌ನಲ್ಲಿ ಡಾಕ್ಟರೇಟ್ ಗಳಿಸಿದರು. 1940ರ ದಶಕದಲ್ಲಿ ಎಎಸ್ಐ ಸೇರಿದರು. 1981ರಲ್ಲಿ ಬಿ.ಕೆ. ಥಾಪರ್ ನಂತರ ಮಹಾ ನಿರ್ದೇಶಕರಾಗಿ ಈಸ್ಟರ್ನ್ ಸರ್ಕಲ್ ಮತ್ತು ಕೆಎಸ್ಐ ಹೆಚ್ಚುವರಿ ಮಹಾ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ಇವರ ಅನ್ವೇಷಣೆಗಳು ಮತ್ತು ಬೌದ್ಧ ಸ್ಥಳಗಳಲ್ಲಿ ನಡೆಸಿದ ಉತ್ಖನನಗಳು ಭಾರತದ ಶ್ರೀಮಂತ ಇತಿಹಾಸ ಮತ್ತು ಪರಂಪರೆಯ ಬಗ್ಗೆ ನಮ್ಮ ಜ್ಞಾನವನ್ನು ಪುಷ್ಟೀಕರಿಸುತ್ತವೆ.

ದೇಬಾಲ ಮಿತ್ರ ಅವರ ವಿದ್ವತ್ಪೂರ್ಣ ಕೊಡುಗೆಗಳನ್ನು ಮೆಚ್ಚಿ ಅವರನ್ನು ಗೌರವಿಸುವ ಸಲುವಾಗಿ ಅವರಿಗೆ 65 ವರ್ಷಗಳಾದಾಗ ಅವರ ಜನ್ಮದಿನದಂದು ಒಂದು ಬೃಹತ್ ಅಭಿನಂದನಾ ಗ್ರಂಥವನ್ನು ಅವರಿಗೆ ಅರ್ಪಿಸಲಾಯಿತು. "ಅಕ್ಷಯನೀವಿ" ಹೆಸರಿನ ಈ ಗ್ರಂಥವನ್ನು ಗೌರೀಶ್ವರ ಭಟ್ಟಾಚಾರ್ಯ ಅವರು ಸಂಪಾದಿಸಿದ್ದು ಇದರ ಬೆಲೆ 5000 ರೂ.ಗಳು. 1991ರಲ್ಲಿ ಇದನ್ನು ಪ್ರಕಟಿಸಲಾಯಿತು. ಹೇಗೆ ಫಲಭರಿತ ಮರ ಕೆಳಗೆ ಬಾಗುವುದೋ ಹಾಗೆ ದೇಬಾಲ ಮಿತ್ರ ತಮ್ಮ ನಡೆ ನುಡಿಗಳು, ವಿನಮ್ರತೆಯಿಂದ ಅಪಾರ ಜನರ ಮೆಚ್ಚುಗೆ ಗಳಿಸಿಕೊಂಡವರು. ತಮ್ಮ ಬೃಹತ್ ಕೃತಿಗಳಿಗಷ್ಟೇ ಹೆಸರುವಾಸಿಯಾಗದೆ ಕ್ಷೇತ್ರ ಕೆಲಸಗಾರರಾಗಿ ಹಲವಾರು ಪ್ರಮುಖ ಉತ್ಖನನಗಳಿಗೆ ಕೈಜೋಡಿಸಿದ್ದಾರೆ ಕೂಡ.

ಡಾ. ಮಿತ್ರ ತಮ್ಮ ಅಧಿಕೃತ ವೃತ್ತಿ ಜೀವನದಿಂದ ನಿವೃತ್ತರಾಗಿದ್ದರೂ ಶೈಕ್ಷಣಿಕ ಅನ್ವೇಷಣೆಗಳ ಆಸಕ್ತಿಯಿಂದಾಗಿ ಸ್ವತಹ ಇಂಡಾಲಜಿಯ ವಿಶಾಲ ಕ್ಷೇತ್ರದಲ್ಲಿ ತೊಡಗಿಕೊಂಡ ವಿದ್ವಾಂಸರೂ ಆಗಿದ್ದರು. ಭಾರತೀಯ ಕಲೆ ಮತ್ತು ಪುರಾತತ್ವ ಶಾಸ್ತ್ರದ ಕುರಿತು ಹಲವಾರು

ವಿದ್ವಾಂಸರು ಸುದೀರ್ಘ ಅವಧಿ ಮತ್ತು ವಿಶಾಲ ಪ್ರದೇಶಕ್ಕೆ ಸೇರಿದ ವಿವಿಧ ವಿಷಯಗಳಿಗೆ ಕೊಡುಗೆ ನೀಡಿದ್ದಾರೆ. ಡಾ.ಮಿತ್ರ ಕೂಡ ನೇಪಾಳದಲ್ಲಿ ಉತ್ಖನನ ಮತ್ತು ಕಲಾ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದರಿಂದ ಅಭಿನಂದನ ಗ್ರಂಥದಲ್ಲಿ ಆ ಕುರಿತು ಮೂರು ಲೇಖನಗಳು ಇವೆ. ಒಟ್ಟು ವಿವಿಧ ವಿದ್ವಾಂಸರು ಬರೆದ 44 ಲೇಖನಗಳ ಬೃಹತ್ ಸಂಪುಟ ಇದು..."ಅಕ್ಷಯನಿವಿ."

ಡಾ. ದೇಬಾಲ ಮಿತ್ರ ಅವರು ರಚಿಸಿದ ಪುಸ್ತಕಗಳು: 1. ಅಜಂತ, 2. ಕೋನಾರ್ಕ 3. ಸಾಂಚಿ ಬುದ್ಧಿಸ್ಟ್ ಮಾನ್ಯುಮೆಂಟ್ಸ್ (Buddist monuments), 4. ಬ್ರಾಂಝುಸ್ ಫ್ರಂಮ್ ಬಾಂಗ್ಲಾದೇಶ್ (Bronzes from Bangladesh), 5. ಭ್ರಾಂಝುಸ್ ಫ್ರಂಮ್ ಅಚ್ಯುತರಾಜ್ಪುರ್ (Bronzes from Achuttrajpur).

ಸಂಶೋಧನೆ:. ಸ್ವರ್ಣ ಜಲೇಶ್ವರ ದೇವಾಲಯ, ಒರಿಸ್ಸಾದ ಒಂದು ಪ್ರಾಚೀನ ದೇವಾಲಯ. ಪೂರ್ವಕ್ಕೆ ಮುಖ ಮಾಡಿರುವುದು ಈ ದೇವಾಲಯದ ವಿಶೇಷ. ಇದನ್ನು ಮೂರು ರಥಗಳ ಶೈಲಿಯಲ್ಲಿ ಎರಡು ಹಂತದ ಮಂಟಪದಿಂದ ರಚಿಸಲಾಗಿತ್ತು ಎಂದು ಸೂಚಿಸುವ ಸೂಚನೆಗಳನ್ನು ಇವರು ಸಂಶೋಧಿಸಿ ಬರೆಯುತ್ತಾರೆ. ರೇಖಾ ಶೈಲಿಯ ಶಿಖರವು ಪಂಚ ರಥ ಎಂದು ಪರಿಗಣಿಸುತ್ತಾರೆ. ಪೂರ್ವ ದ್ವಾರವನ್ನು ಮೂರು ಪಟ್ಟಿಗಳಿಂದ ಮಾಡಲಾಗಿದ್ದು ಹಾಸುಗಲ್ಲು (ಲಿಂಟಲ್)ತುಂಬಾ ಹಾಳಾಗಿದೆ. ಹಾಸುಗಲ್ಲಿನ ಮೇಲಿರುವ ಎಂಟು ಅಷ್ಟ ಗ್ರಹಗಳಲ್ಲಿ ಆರು ಗ್ರಹಗಳು ಅಖಂಡವಾಗಿದೆ. ಅವು ಸೋಮ, ಮಂಗಳ, ಬುಧ, ಬೃಹಸ್ಪತಿ, ಶುಕ್ರ ಮತ್ತು ಶನಿ ಎಂದು ಗುರುತಿಸಿದ್ದಾರೆ. (ಮಾಹಿತಿ: ಮೆಮೋಯರ್ಸ್ ಆಫ್ ದ ಆರ್ಕ್ಯಾಲಜಿಕಲ್ ಸರ್ವೆ ಆಫ್ ಇಂಡಿಯಾ. ನಂಬರ್ 80 ರತ್ನಗಿರಿ 1958– 61 ಸಂಪುಟ (ಎರಡು).

ದೇಬಾಲ ಮಿತ್ರ ಅವರ ಕಾರ್ಯತತ್ಪರತೆಯ ಒಂದು ಉದಾಹರಣೆ ಇಲ್ಲಿದೆ. ಫೆಬ್ರವರಿ 1987 ಮತ್ತು ಫೆಬ್ರವರಿ–ಮಾರ್ಚ್ 1989ರ ನಡುವೆ ಎಲ್ಲೋ ಮಹಂತ್ ಕಾಂಪೌಂಡ್ (ಬ್ರಾಹ್ಮಣರ ಮಠ) ಬೋಧಗಯದಿಂದ ಕದ್ದ ಅಭಯಮುದ್ರಾ (ನಿರ್ಭರತೆಯ ಸೂಚಕ) ಬುದ್ಧನ 8ನೇ ಶತಮಾನದ ಪ್ರತಿಮೆಯನ್ನು ಬೋಧಗಯಕ್ಕೆ ಮರಳಿ ತರಲಾಗಿದ್ದು, ಅಲ್ಲಿನ ವಸ್ತು ಸಂಗ್ರಹಾಲಯದಲ್ಲಿ ಇರಿಸಲಾಗಿದೆ. ಬಿಹಾರದಲ್ಲಿ ಇದೇ ಮೊದಲಬಾರಿಗೆ ಈ ರಾಜ್ಯದಿಂದ ಕದ್ದ ಶಿಲ್ಪವೊಂದು ವಿದೇಶದಿಂದ ಮರಳಿ ತನ್ನ ಮೂಲಸ್ಥಾನಕ್ಕೆ ಮರಳುತ್ತದೆ. ಭಾರತದ ಪುರಾತತ್ವ ಸರ್ವೇಕ್ಷಣ ಇಲಾಖೆಯ (1975–83) ಮಾಜಿ ಮಹಾ ನಿರ್ದೇಶಕರಾದ ಡಾ.ದೇಬಾಲ ಮಿತ್ರ ಅವರ ಪ್ರಯತ್ನದಿಂದ ಈ ಕೆಲಸ ಸಾಧ್ಯವಾಯಿತು. ಈ ಪ್ರತಿಮೆಯನ್ನು ನ್ಯೂಯಾರ್ಕ್ ಮೆಟ್ರೋಪಾಲಿಟಿನ್ ಮ್ಯೂಸಿಯಂ ಹಿಂದಿರುಗಿಸಿತು ಮತ್ತು ಪುರಾತತ್ವ ಸರ್ವೇಕ್ಷಣೀಯ ತನ್ನ ಸಂಗ್ರಹಣೆ ವಿಭಾಗದಲ್ಲಿ ಇರಿಸಲಾಯಿತು. ಈ ಕಥೆಯು ಫೆಬ್ರವರಿ 1987ರ ಹಿಂದಿನದು. ಡಾ.ಮಿತ್ರ ಬೋಧಗಯಾಗೆ ಭೇಟಿ ನೀಡಿದಾಗ ಸಂಯುಕ್ತ ಆವರಣದಲ್ಲಿ ಬುದ್ಧನ ಈ ಪ್ರತಿಮೆಯನ್ನು ನೋಡಿದ್ದರು. ಮಾರ್ಚ್ 1989ರಲ್ಲಿ ಪ್ರತಿಮೆ ಕಳುವಾಗಿದ್ದು ಈ ಕುರಿತು ಮಾತಾ ಜನರು ಪೊಲೀಸರಿಗೆ ದೂರು ನೀಡಿಲ್ಲದಿರುವುದು ಅವರ ಅರಿವಿಗೆ ಬಂತು. ಇವರು ಇದೇ ಪ್ರತಿಮೆಯ ಕುರಿತು ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ಕ್ಯಾಟಲ್ ಆರ್ಟ್‌ನಲ್ಲಿ ಪ್ರಕಟವಾದ ಚಿತ್ರವೆಂದು ಖಚಿತಪಡಿಸಿಕೊಂಡು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಗೆ ವರದಿ ಮಾಡಿದರು. ನ್ಯೂಯಾರ್ಕ್ ಮೆಟ್ರೋಪಾಲಿಟನ್ ಮ್ಯೂಸಿಯಂ ತಾ 23.03,99 ರಂದು ಮಿತ್ರ ಅವರ ಪ್ರಯತ್ನದ ಫಲವಾಗಿ ಪ್ರತಿಮೆಯನ್ನು ಹಿಂದಿರುಗಿಸಲು ಒಪ್ಪಿಕೊಂಡಿತು.

***

ಹೆಸರಿನ 'ಮೊದಲಕ್ಷರ'ಗಳ ಉಪಟಳ

– ನಿರ್ಮಲ ಜಿ.ವಿ.

ಒಬ್ಬ ವ್ಯಕ್ತಿಯ ಹೆಸರಿನ ಮೊದಲಿನಲ್ಲಿ ಅಥವಾ ಕೆಲವೊಮ್ಮೆ ಕೊನೆಯಲ್ಲಿಯೂ ಕಾಣಬರುವ ವ್ಯಕ್ತಿಯ ತಂದೆಯ ಹೆಸರು, ಊರಿನ ಹೆಸರು, ಮನೆತನದ ಹೆಸರು ಇತ್ಯಾದಿಗಳನ್ನು ಸೂಚಿಸುವ ಬಿಡಿ ಅಕ್ಷರಗಳಿರುತ್ತವೆ, ಆಂಗ್ಲ ಭಾಷೆಯಲ್ಲಿ 'Initials' ಎಂದು ಗುರುತಿಸಲಾಗುವ ಇವನ್ನು ಅಚ್ಚಕನ್ನಡದಲ್ಲಿ 'ಮೊದಲಕ್ಷರಗಳು', 'ಆರಂಭಿಕಾಕ್ಷರಗಳು' ಅಥವಾ 'ಆದ್ಯಕ್ಷರಗಳು' ಎನ್ನಬಹುದು. ಉದಾಹರಣೆಗೆ ಪ್ರಸಿದ್ಧ ಸಾಹಿತಿ 'ಎಸ್.ಎಲ್. ಭೈರಪ್ಪ'ನವರ ಹೆಸರಿನಲ್ಲಿ ಇಂಗ್ಲೀಷಿನ 'ಎಸ್', ಅವರ ಊರಾದ ಸಂತೇಶಿವರವನ್ನೂ, 'ಎಲ್', ಅವರ ತಂದೆ ಲಿಂಗಣ್ಣಯ್ಯನವರನ್ನೂ ಪ್ರತಿನಿಧಿಸುತ್ತವೆ. ಕನ್ನಡದಲ್ಲಿ ಇದು 'ಸ.ಲಿ' ಎಂದಾಗುವುದು. ಜ್ಞಾನಪೀಠ ಪುರಸ್ಕೃತ ಲೇಖಕರಾದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪನವರ ಹೆಸರಿನಲ್ಲಿ ಅವರ ಹೆಸರಿನ ಜೊತೆಗೇ ಸೇರಿರುವ 'ಆರಂಭಿಕ ಅಕ್ಷರಗಳು', 'ಕುವೆಂಪು' ಎನ್ನುವ ಸಂಕ್ಷಿಪ್ತ ರೂಪದಲ್ಲಿಯೇ ಜನಜನಿತವಾಗಿದೆ.

ಯಾವುದೇ ವ್ಯಕ್ತಿ ತನ್ನ ಹೆಸರನ್ನು ದಾಖಲಾತಿ, ಅರ್ಜಿ, ನಮೂನೆ ಇತ್ಯಾದಿಗಳಲ್ಲಿ ನಮೂದಿಸುವಾಗ ಹೆಸರಿನ ಜೊತೆಯಲ್ಲಿ ಇಂತಹ ಆರಂಭಿಕ ಅಕ್ಷರಗಳನ್ನು ಸಮರ್ಪಕವಾಗಿ ಜೋಡಿಸಿದಾಗ ಆತನ/ಆಕೆಯ ಪರಿಚಯ ಕರಾರುವಾಕ್ಕಾಗಿ ಆಗುವುದೆನ್ನುವ ಭರವಸೆ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ಆರಂಭಿಕ ಅಕ್ಷರಗಳನ್ನು ವಿಸ್ತರಿಸಿ ಬರೆಯುವಂತೆ ಸೂಚನೆಗಳೂ ಇರುತ್ತವೆ. ಇಂತಹ ಸಂದರ್ಭಗಳಲ್ಲಿ ಸಾಕಷ್ಟು ಗೊಂದಲಗಳಾಗುವುದೂ ಉಂಟು.

ಇತ್ತೀಚಿಗೆ ನನ್ನ ಆಧಾರ್ ಚೀಟಿಯಲ್ಲಿದ್ದ ಒಂದು ಮಾಹಿತಿಯನ್ನು ಬದಲಿಸುವ ಸಮಯದಲ್ಲಿ ನನಗಾದ ಅನುಭವ ಹೀಗಿದೆ. ಆಧಾರ್ ಚೀಟಿಯಲ್ಲಿ ನನ್ನ ಹೆಸರಿನ ಮೊದಲಕ್ಷರಗಳು 'ಜಿ.ವಿ' ಎಂದಿತ್ತು. ಮೇಲೆ ಹೇಳಿದಂತೆ ಒಂದು ಮಾಹಿತಿಯನ್ನು ಬದಲಿಸುವಾಗ ಆಧಾರ್ ಕಾರ್ಡಿಗೆ ಪುರಾವೆ ನೀಡಬೇಕಾಗಿತ್ತು. ನಾನು ಕೊಟ್ಟ ಪುರಾವೆಯಾದ ನನ್ನ ಪಾಸ್‌ಪೋರ್ಟ್‌ನಲ್ಲಿ 'ಜಿ.ವಿ.' ಅಕ್ಷರಗಳ ವಿಸ್ತಾರ ರೂಪವಿತ್ತು. ಇದರಿಂದ ನಾನು ನೀಡಿದ್ದ ಪುರಾವೆ ಸರಿ ಇಲ್ಲವೆಂದು ಎರಡು ಬಾರಿ ತಿರಸ್ಕೃತವಾಯ್ತು. ಅನಂತರ ಆಧಾರ್ ಚೀಟಿಯ ಕೇಂದ್ರಕ್ಕೇ ಹೋಗಿ ವಿಚಾರಿಸಿದಾಗ ನಾನು ಕಳಿಸಿದ್ದ ಪುರಾವೆ ಮತ್ತು ಆಧಾರ್ ಚೀಟಿಯಲ್ಲಿದ್ದ ಮೊದಲಕ್ಷರಗಳ ರೂಪ ವ್ಯತ್ಯಾಸವಾಗಿದ್ದರಿಂದ, ಅವನ್ನು ಹೋಲಿಸಿ ಪರೀಕ್ಷಿಸುವ ಯಂತ್ರದಿಂದ ತಿರಸ್ಕೃತವಾಗಿದೆಯೆಂದು ತಿಳಿಯಿತು. ಇದಕ್ಕೆ ಪರಿಹಾರವೇನು ಎಂದೂ ತಿಳಿಯಲಿಲ್ಲ. ನಾನು ಮತ್ತೆ ಮತ್ತೆ ವಿವರಿಸಿ ವಿನಂತಿಸಿದಾಗ, 'ಹೋಗಲಿ ಪಾಪ, ನವೀಕೃತ ಆಧಾರ್ ಕೊಡೋಣ.' ಎಂದು ನನ್ನ ಮೇಲೆ ಕರುಣೆ ತೋರಿದರು ಅಲ್ಲಿದ್ದ ಸಿಬ್ಬಂದಿವರ್ಗ! ಹೀಗೆ ಮೊದಲಕ್ಷರಗಳ ವಿಭಿನ್ನ ರೂಪದಿಂದ ನನಗೆ ಬಹಳ ತೊಂದರೆಯಾಯಿತು. ಅದರಿಂದ ನನಗೇನೂ ಚಿಂತೆಯಿಲ್ಲ; ಈ ಅನುಭವ ನನಗೆ ಲೇಖನ ಬರೆಯಲು ಪ್ರೇರಣೆಯಾಯಿತು!

ಪೌರಾಣಿಕ ಯುಗದಲ್ಲಿಯೂ ಭಾರತೀಯರು ಮೊದಲಕ್ಷರಗಳಿಗೆ ಬದಲು ತಂದೆಯ ಹೆಸರನಿಂದ ಮಗ ಅಥವಾ ಮಗಳನ್ನು ಗುರುತಿಸುತ್ತಿದ್ದರಂತೆ. ಉದಾಹರಣೆಗೆ ದಶರಥನ ಮಗನಾದ ರಾಮನನ್ನು ದಾಶರಥಿ ಎಂದೂ, ವಸುದೇವನ ಮಗ ಕೃಷ್ಣನನ್ನು ವಾಸುದೇವ ಎಂದೇ ಸಂಬೋಧಿಸುವ ರೂಢಿ ಇತ್ತು. ತದನಂತರ ಉಪನಿಷತ್ತಿನ ಕಾಲದಲ್ಲಿಯೂ ಇಂತಹ ಪದ್ಧತಿ ಇತ್ತು. ಆಗಿನ ಕೆಲವು ಉದಾಹರಣೆಗನ್ನು ನೋಡುವುದಾದರೆ 'ಉಪಕೋಸಲ ಕಮಲಾಯನ' ಅಂದರೆ ಕಮಲನ ಮಗ ಉಪಕೋಸಲ ಎಂದೂ, 'ಪ್ರವಾಹನಾ ಜೈವಲಿ' ಎಂದರೆ ಜೀವಲನ ಮಗ ಪ್ರವಾಹನಾ ಎಂದೂ ಅರ್ಥ ಬರುತ್ತದೆ. ಕೆಲವೊಮ್ಮೆ ತಾಯಿಯ ಹೆಸರನ್ನೇ ಸೇರಿಸಿ ಮಗನನ್ನು ಗುರುತಿಸಲಾಗುತ್ತದೆ. 'ರೇಣುಕೇಯ' ಅಂದರೆ ರೇಣುಕನ ಮಗ ಎಂದು ಪರಶುರಾಮನನ್ನು ಸೂಚಿಸುವುದು ಉಂಟು. ತಂದೆಯ ಹೆಸರು ಗೊತ್ತಿಲ್ಲದಾಗಲೂ ಹೆಸರಿನ ಕೊನೆಯಲ್ಲಿ ತಾಯಿಯ ಹೆಸರನ್ನೇ ನಮೂದಿಸುವ ವಾಡಿಕೆಯೂ ಇತ್ತು. ಇದಕ್ಕೆ ನಿದರ್ಶನ 'ಸತ್ಯಕಾಮ ಜಾಬಾಲ'. ಇದು ಜಾಬಾಲಳ ಮಗ ಸತ್ಯಕಾಮ ಎಂದೂ ತಿಳಿಸುತ್ತದೆ.

ಮತ್ತಷ್ಟು ನಿದರ್ಶನಗಳನ್ನು ಗಮನಿಸಿದಾಗ ಗೋತ್ರದ ಹೆಸರು ಅಥವಾ ದೇಶದ ಹೆಸರನ್ನೂ ಹೆಸರಿನೊಡನೆ ಸೇರಿಸುವುದು ಕಂಡುಬರುತ್ತದೆ. ಗಾರ್ಗ್ಯ ವಂಶದ ಸೌರ್ಯಯಾನಿಯನ್ನು 'ಸೌರ್ಯಯಾನಿ ಗಾರ್ಗ್ಯ' ಎಂದು ಸಂಬೋಧಿಸಿದರೆ, 'ಭಾರ್ಗವ ವೈದರ್ಭಿ'

ಎಂದರೆ ವಿದರ್ಭದ ಭಾರ್ಗವ ಎಂದಾಗುತ್ತದೆ. ಹೀಗೆ ಭಾರತದಲ್ಲಿಯೂ ವಿಭಿನ್ನ ರೀತಿಗಳಲ್ಲಿ ಓರ್ವ ವ್ಯಕ್ತಿಯ ಹೆಸರನ್ನು ಕರಾರುವಕ್ಕಾಗಿ ಗುರುತಿಸುವ ಪದ್ಧತಿ ಪ್ರಾಚೀನವಾದುದೇ.

ಆದರೆ ಇತ್ತೀಚಿಗೆ ಪಾಶ್ಚಾತ್ತ ಪ್ರಭಾವದಿಂದ ರೂಢಿಯೂ ಬೇರೆಯಾಗಿರುವುದಲ್ಲದೆ ಸಾಕಷ್ಟು ಗೊಂದಲಗಳಿಗೂ ಎಡೆಮಾಡಿದೆ. ಮದುವೆಯಾದಾಗ ಹೆಣ್ಣುಮಕ್ಕಳು ತಮ್ಮ ಪತಿಯ ಹೆಸರು, ಪತಿಯ ವಂಶದ ಹೆಸರನ್ನು ತಮ್ಮ ಹೆಸರಿಗೆ ಜೋಡಿಸಿಕೊಳ್ಳುವ ರೂಢಿಯೂ ಕಂಡುಬರುತ್ತದೆ. ಆಧುನಿಕ ಪದ್ಧತಿಯಲ್ಲಿ ಹುಟ್ಟು ಹೆಸರು ಅಥವಾ ಪ್ರಚಲಿತ ಹೆಸರಿನ ಜೊತೆಯೇ ಪತಿಯ ವಂಶದ ಹೆಸರನ್ನೂ ಜೊತೆಗೂಡಿಸುವ ರೂಢಿಯೂ ಕಾಣುತ್ತದೆ. ಉದಾಹರಣೆಗೆ ಐಶ್ವರ್ಯ ರೈ ಮದುವೆಯ ನಂತರ ಐಶ್ವರ್ಯ ರೈ ಬಚ್ಚನ್, ದೀಪಿಕಾ ಮತ್ತು ರಣವೀರ್ ಸಿಂಗ್ ಮಗಳು ದಿಯಾ ಪಡುಕೋಣೆ ಸಿಂಗ್ ಎಂದಾಗಿರುವುದನ್ನೂ ನೋಡಬಹುದು.

ವ್ಯಕ್ತಿಯ ಹೆಸರಿನಲ್ಲಿಯೂ ಯಾವುದೇ ವ್ಯತ್ಯಾಸವಿರದಂತೆ ಗಮನಿಸುವುದು ಅಗತ್ಯವೇ. ಉದಾಹರಣೆಗೆ 'ಸುಬ್ರಹ್ಮಣ್ಯ' ಎನ್ನುವ ಹೆಸರಿನಲ್ಲಿ ವ್ಯತ್ಯಾಸವಾಗಬಹುದು. ಆಂಗ್ಲ ಭಾಷೆಯಲ್ಲಿ ಅಕ್ಷರಗಳು ಬದಲಾಗಬಹುದು. ಅಂದರೆ Ishwara ಎನ್ನುವುದನ್ನು Ishvara ಎಂದೂ ಬರೆಯಬಹುದಲ್ಲವೇ?

ಹೆಸರುಗಳನ್ನು ಸರಿಯಾಗಿ ನಮೂದಿಸದಿದ್ದರೆ, ವಿಶೇಷವಾಗಿ ಅಧಿಕೃತ ದಾಖಲೆಗಾಗಿ ಮತ್ತು ವ್ಯಕ್ತಿಯ ಪುರಾವೆಯಂತೆ ಬಳಸುವ ಅರ್ಜಿಗಳನ್ನು ತುಂಬುವಾಗ ಬಹಳಷ್ಟು ಫಜೀತಿಗಳಾಗುತ್ತವೆ.

ಹಲವಾರು ಜನಹಿತ ಕಾರ್ಯಕ್ರಮಗಳನ್ನು ರೂಪಿಸಿರುವ ದೀನಬಂಧು ಪ್ರತಿಷ್ಠಾನದ ಪ್ರತಿಷ್ಠಾಪಕರಾದ ಶ್ರೀಯುತ ಗೋಲಕ್ ಚಂದ್ರ ಮಿಶ್ರರವರು ಜನರ ಹಿತದೃಷ್ಟಿಯಿಂದ 'ಆದ್ಯ ಅಕ್ಷರ'ಗಳಿಂದ ಗೊಂದಲಗಳುಂಟಾಗಬಾರದೆಂದು ಅಹಮದಾಬಾದಿನಿಂದ ದೆಹಲಿವರೆಗೆ ಸೈಕಲ್ಲಿನಲ್ಲಿ ಸಾಗುತ್ತಾ, ಒಂದು ಅಭಿಯಾನವನ್ನೇ ಮಾಡಿದ್ದಾರೆ. ಮತ್ತೆ ಮತ್ತೆ ಬೇರೆ ಸ್ಥಳಗಳಿಂದಲೂ ಇಂತಹ ಅಭಿಯಾನಗಳನ್ನು ಮಾಡುತ್ತಲೇ ಇದ್ದಾರೆ. "One Nation, One Person, One Name"– "ಒಂದು ದೇಶ, ಒಬ್ಬ ವ್ಯಕ್ತಿ, ಒಂದು ಹೆಸರು" ಎನ್ನುವ ಘೋಷವಾಕ್ಯವನ್ನು ಎತ್ತಿ ಹಿಡಿಯುತ್ತಿರುವ ಮಿಶ್ರರವರು "ನಿಮ್ಮ ಅರಿವಿಗೆ" ("You Aware") ಎನ್ನುವ ಈ ಅಭಿಯಾನವನ್ನು ಹಮ್ಮಿಕೊಂಡಿದ್ದಾರೆ.

ಇಂತಹ ಅಭಿಯಾನ ಅಗತ್ಯವೇ ಎನ್ನುವ ವಿಚಾರ ನಮ್ಮಲ್ಲಿ ಮೂಡುವುದು ಸಹಜವೇ. ಆದರೆ ನಮ್ಮ ದೇಶದ ಎಲ್ಲಾ ರಾಜ್ಯಗಳಲ್ಲಿ ಸಂಪೂರ್ಣ ಹೆಸರಿನ ಸ್ವರೂಪ ಒಂದೇ ಬಗೆಯಲ್ಲಿಲ್ಲದಿದ್ದರೆ ಆಗುವ ತೊಂದರೆಗಳನ್ನು ತಿಳಿದ ನಂತರ ಇದು ಖಂಡಿತವಾಗಿಯೂ ಅತ್ಯಾವಶ್ಯಕ ಎಂದು ಮಂದಟ್ಟಾಗುತ್ತದೆ.

ಮೊದಲಿಗೆ ಯಾವ, ಯಾವ ಅಧಿಕೃತ ಪತ್ರಗಳಲ್ಲಿ ಹೆಸರು ನಮೂದಿಸಬೇಕಾಗುತ್ತದೆ ಎಂದು ತಿಳಿಯೋಣ.
1. ಜನನ ಪ್ರಮಾಣಪತ್ರ, 2. ಶಾಲಾ ಪ್ರಮಾಣಪತ್ರ, 3. ಆಧಾರ್ ಚೀಟಿ, 4. ಚುನಾವಣಾ ಚೀಟಿ, 5. ಪಡಿತರ ಚೀಟಿ, 6. ಕಾಲೇಜು ಪ್ರಮಾಣಪತ್ರ, 7. ಪಾಸ್‌ಪೋರ್ಟ್ ಪ್ರಮಾಣಪತ್ರ, 8. ಆದಾಯ ಪ್ರಮಾಣಪತ್ರ, 9. ಜಾತಿ ಪ್ರಮಾಣಪತ್ರ, 10.ಅಂಗವಿಕಲ ಪ್ರಮಾಣಪತ್ರ, 11. ಅನಿಲ ಸಂಪರ್ಕ ಚೀಟಿ, 12. ವಿದ್ಯುತ್ ಸಂಪರ್ಕ ಚೀಟಿ, 13. ತೆರಿಗೆ ಪಾವತಿ ಪತ್ರ, 14. PAN ಚೀಟಿ, 15. ಬಂದೂಕು ಪರವಾನಗಿ ಪತ್ರ, 16. GST ಪರವಾನಗಿಪತ್ರ, 17. ಬ್ಯಾಂಕ್ ಖಾತೆ, 18. ಜಮೀನು ಖರೀದಿ ಪತ್ರ, 19. ಚಾಲನೆ ಪರವಾನಗಿ ಪತ್ರ, 20. ವಾಹನ ನೋಂದಣಿ ಪತ್ರ, 21. ಪಿಎಫ್ ಖಾತೆ, 22. ಪಿಪಿಎಫ್ ಖಾತೆ, 23. ವಿಮಾ ಪತ್ರ, 24. ಮೆಡಿಕ್ಲೇಮ್ ಪಾಲಿಸಿ, 25. ವಾಹನ ವಿಮಾ ಪಾಲಿಸಿ, 26. ಉದ್ಯೋಗ ಗುರುತು ಚೀಟಿ, 27. ಮರಣ ಪ್ರಮಾಣಪತ್ರ ಇತ್ಯಾದಿ.

ಮೇಲಿನ ಎಲ್ಲಾ ಪತ್ರಗಳಲ್ಲಿ ನಿಮ್ಮ ಹೆಸರು ಸಮರ್ಪಕವಾಗಿ ಏಕರೂಪದಲ್ಲಿದ್ದರೆ ನೀವು ನಿಮ್ಮ ಜೀವನ ಪಯಣದ ಯುದ್ಧ ಗೆದ್ದಂತೆಯೇ ಸೈ.

***

ಅನಿರೀಕ್ಷಿತ

- ಗಾಯತ್ರಿ ಮೂರ್ತಿ

ನಗರದಲ್ಲಿ ನೆಲಸಿದ್ದ ಸುಹಾಸ ಹಳ್ಳಿಯಲ್ಲಿದ್ದ ತನ್ನ ತಂದೆತಾಯಿಗೆ, 'ನಿಮಗೂ ವಯಸ್ಸಾಯಿತು. ಮನೆ, ಹೊಲ ಗದ್ದೆ ಎಲ್ಲ ಮಾರಿ, ನಗರಕ್ಕೆ ಬಂದು ನಮ್ಮೊಂದಿಗಿರಿ. ಎಲ್ಲರೂ ಆರಾಮವಾಗಿ ಒಟ್ಟಿಗಿರೋಣ' ಎಂದು ಹಲವು ವರ್ಷಗಳಿಂದ ಹೇಳುತ್ತಲೇ ಇದ್ದ.

ಆದರೆ, ಹಳ್ಳಿಯ ಸರಳ ಜೀವನಕ್ಕೆ ಹೊಂದಿಕೊಂಡಿದ್ದ ಆ ತಂದೆತಾಯಿಗೆ ನಗರದ ಬೆಡಗಿನ ಜೀವನ ಅಷ್ಟಾಗಿ ಆಕರ್ಷಕವೆನಿಸಿರಲಿಲ್ಲ. 'ನಮ್ಮ ಕೈಲಾಗುವವರೆಗೂ ನಾವು ಇಲ್ಲಿರ್ತೀವಿ. ಆಮೇಲೆ ಇದ್ದೇ ಇದೆ' ಎಂದೇ ಕಾಲ ಕಳೆದರು.

ಆ ಕಾಲವೂ ಬಂತು. ಸುಹಾಸನ ತಂದೆತಾಯಿ ಹಳ್ಳಿಯಲ್ಲಿದ್ದ ಮನೆ, ಹೊಲ, ಗದ್ದೆ ಎಲ್ಲ ಮಾರಿ ನಗರಕ್ಕೆ ಮಗನ ಮನೆಗೆ ಬಂದು ಸೇರಿದರು.

ಮಗನ ಮನೆಗೆ ಬಂದು ಕೆಲ ದಿನಗಳು ಸುಖವಾಗಿ ಕಳೆಯಿತು. ಮಗ ಸೊಸೆ ಉಪಚಾರ ಮಾಡಿ ಅವರನ್ನು ಮರುಳು ಮಾಡಿದರು. ಕೆಲದಿನಗಳು ಕಳೆದ ಮೇಲೆ, ಒಂದು ದಿನ ಸುಹಾಸ ತಂದೆಯನ್ನು ಕುರಿತು, 'ಅಪ್ಪಾ, ನೀನು ಮನೆ, ಜಮೀನು ಎಲ್ಲ ಮಾರಿ ತಾನೇ ಇಲ್ಲಿಗೆ ಬಂದಿದ್ದು' ಎಂದು ಕೇಳಿದ. ತಂದೆ ಹೌದೆಂದು ತಲೆ ಆಡಿಸಿದರು.

'ನಿಮ್ಮ ಜೀವನ ಮುಗೀತಾ ಬಂತು. ನಿಮಗೆ ಬೇಕಾಗಿದ್ದೆಲ್ಲಾ ನಾನು ನೋಡ್ಕೊತೀನಿ. ನಿಮಗಿನ್ಯಾಕೆ ಹಣ? ಎಲ್ಲ ಹಣವನ್ನೂ ನನಗೆ ಕೊಡು. ನಾನು ಇನ್ವೆಸ್ಟ್ ಮಾಡ್ತೀನಿ. ಜೊತೆಗೆ ಈಗ ನನಗೆ ಹಣದ ಅವಶ್ಯಕತೆನೂ ಇದೆ' ಎಂದ.

'ಸುಹಾಸ, ನೀನೊಬ್ನೇ ಜಾಣ ಅನ್ಕೋಬೇಡ. ನನಗೂ ಮುಂದಾಲೋಚನೆ ಇದೆ. ನಾನೂ ಸಹ ಹಣವನ್ನು ಪೋಲುಮಾಡದೆ, ತಜ್ಞರ ಸಲಹೆಯ ಮೇರೆಗೆ ಸರಿಯಾದ ದಾರೀಲಿ ಇನ್ವೆಸ್ಟ್ ಮಾಡಿದೀನಿ. ನನ್ನ ನಂತರ ನನ್ನ ಹೆಂಡತಿ ನಿಮ್ಮ ಕೈಕೆಳಗೆ ಅನಾಥಳಂತೆ ಇರಬಾರದಲ್ವಾ? ಅದಕ್ಕೆಲ್ಲಾ ಭದ್ರಮಾಡಿದೀನಿ. ನಿನಗೂ ಸ್ವಲ್ಪ ಹಣ ಕೊಡ್ತೀನಿ, ತೊಗೊ. ಆದರೆ ನಾವಿರೋವರ್ಗೂ ನಾವು ಘನತೆಯಿಂದ ಜೀವನ ಮಾಡ್ಬೇಕೂಂದ್ರೆ ನಮ್ಮ ಹತ್ರ ಹಣ ಇದ್ರೆ ಮಾತ್ರ ಅದು ಸಾಧ್ಯ' ಎಂದು ತಂದೆ ಖಡಾಖಂಡಿತವಾಗಿ ಹೇಳಿದರು. ಅವರ ಮಾತುಗಳಲ್ಲಿ ದೃಢತೆಯಿತ್ತು.

ಮನದಲ್ಲೇ ಮಂಡಿಗೆ ತಿನ್ನುತ್ತಾ ತಂದೆಯ ಹಣವನ್ನೆಲ್ಲಾ ದೋಚುವ ಹುನ್ನಾರ ಮಾಡಿದ್ದ ಮಗ, ಸೊಸೆಯ ಆಸೆ ಭಗ್ನವಾಯಿತು. ತಂದೆ ತಾಯಿಯರನ್ನು ಹಳ್ಳಿಯಲ್ಲಿದ್ದವರು, ಅವರಿಗೇನು ತಿಳಿಯತ್ತೆ, ಸುಲಭವಾಗಿ ಏಮಾರಿಸಿ, ಅವರ ಹಣವನ್ನೆಲ್ಲಾ ದೋಚಬಹುದು ಎಂದು ಯೋಚಿಸಿದ್ದ ಮಗನಿಗೆ ತಂದೆಯ ಬುದ್ಧಿವಂತಿಕೆ ಅನಿರೀಕ್ಷಿತವಾಗಿತ್ತು. ಅವರು ಮಾಡಿದ್ದು ಸರಿ ಎಂದು ಸರಿಯಾಗಿ ಯೋಚಿಸಿದಾಗ ಅರ್ಥವಾಯಿತು. ತಂದೆಯ ಮುಂದಾಲೋಚನೆಗೆ ಮನದೊಳಗೇ ಮೆಚ್ಚಿದ.

***

ಬ್ರೆಡ್ ಪುರಾಣ

– ಮಾಲತಿ ಶ್ರೀನಿವಾಸನ್

ಬೆಳಗಾಗ್ತ ಇದ್ದಂಗೆ ನನ್ನ ತಲೆಗೆ ಮೊದಲ ಯೋಚನೆ ಬರುವುದು, ಇವತ್ತು ತಿಂಡಿಗೇನು?

ಉಪ್ಪಿಟ್ಟು ದೋಸೆ ಅವಲಕ್ಕಿ ಪೂರಿ ಚಪಾತಿ ಲಿಸ್ಟೇ ತಲೆಯಲ್ಲಿ ಹಾದುಹೋದರೂ ಹಿಂದಿನ ದಿನ ದಿನಸಿ ಜೊತೆ ತಂದ ಬ್ರೆಡ್ಡು ಬೆಣ್ಣೆ ನೆನಪಾಗಿ ಕೆಲಸ ಸ್ವಲ್ಪ ಸುಲಭ ಅಂತ ಮನಸ್ಸಿಗೆ ಸಮಾಧಾನ ಅನಿಸುತ್ತೆ.

ಈ ಬ್ರೆಡ್ ಅನ್ನೋದು ನಮ್ಮ ಮನೆಯಲ್ಲಿ ಎಲ್ಲರಿಗೂ ಬಹಳ ಇಷ್ಟವಾದ ತಿಂಡಿ. ಅದನ್ನು ಬರೀದೇ ತಿನ್ನಲಿಕ್ಕೆ ಆಗೋದಿಲ್ಲ. ಪಾಂಗಿತವಾಗಿ ಬೆಣ್ಣೆ, ಆಲೂಗಡ್ಡೆ ಈರುಳ್ಳಿ ಪಲ್ಯ, ಪುದಿನಾ ಚಟ್ನಿ ಎಲ್ಲಾ ತಯಾರಿಸಿ, ಸ್ಯಾಂಡ್‌ವಿಚ್ ಮೇಕರ್‌ನಲ್ಲೋ ಅಥವಾ ದೋಸೆ ತವಾ ಮೇಲೋ ಹದವಾಗಿ ಬೇಯಿಸಿ ತಟ್ಟೇಲಿ ಹಾಕಿ ಕೊಟ್ರೆ ಎರಡು ಮೂರು ಪಾಕೆಟ್ ಆರಾಮವಾಗಿ ಖಾಲಿಯಾಗುತ್ತೆ.

ಈ ಬ್ರೆಡ್ ಪ್ರೇಮ ಅಭ್ಯಾಸವಾಗಿದ್ದು ನನಗೆ ಬಾಲ್ಯದಿಂದಲೇ. ನನ್ನಪ್ಪ ಅಯ್ಯಂಗಾರ್ ಬೇಕರಿಯಿಂದ ಬ್ರೆಡ್ ತಂದು ಅಜ್ಜಿ ಮಾಡಿಟ್ಟ ಕಾಯಿಸಿದ ತುಪ್ಪ ಸವರಿ, ದೋಸೆಯ ತವ ಮೇಲೆ ಅದನ್ನು ಹದವಾಗಿ ಸುಟ್ಟು, ಮೇಲೆ ಧಾರಾಳವಾಗಿ ತುಪ್ಪ ಸವರಿ ಸ್ವಲ್ಪ ಉಪ್ಪು ಅಥವಾ ಚಟ್ನಿಪುಡಿ ಚಿಮುಕಿಸಿ, ಬಿಸಿಬಿಸಿಯಾಗಿ ಹೆಂಚಿನಿಂದ ನಮ್ಮ ತಟ್ಟೆಗೆ ಹಾಕುತ್ತಿದ್ದರೆ ಅದೆಷ್ಟು ಬ್ರೆಡ್ ಚೂರುಗಳು ಹೊಟ್ಟೆ ಒಳಗೆ ಸೇರುತ್ತಿತ್ತೋ ದೇವರೇಬಲ್‌ಲ. ನಮ್ಮ ನಂತರ ಮೊಮ್ಮಕ್ಕಳು ಸಹ ತಾತನ ಬ್ರೆಡ್ಡಿಗೆ ಫಿದಾ. ತಾತ ದೂರಾಗಿ ದಶಕಗಳು ಕಳೆದರು ಈಗಲೂ ತಾತನ ಬ್ರೆಡ್ ಬ್ರೇಕ್‌ಫಾಸ್ಟ್ ಸದಾ ಎಲ್ಲರ ನೆನಪಲ್ಲಿ. ಇಂದು ಸಹ ಮನೆಗೆ ಬ್ರೆಡ್ ತಂದಾಗೆಲ್ಲ ಅಪ್ಪನ ಕೈನ ತುಪ್ಪದ ಘಮಲಿನ ಸ್ಯಾಂಡ್ವಿಚ್ ನೆನಪು ತೇಲಿ ಬರುತ್ತೆ.

ಡಿಗ್ರಿ ಮಾಡುತ್ತಿದ್ದಾಗ ಸೆಂಟ್ರಲ್ ಕಾಲೇಜಿನ ಲೇಡೀಸ್ ಹಾಸ್ಟೆಲಿನಲ್ಲಿ ಈ ತಿನಿಸಿನ ರುಚಿ ನನ್ನಿಂದ ದೂರಾಗಿರಲಿಲ್ಲ. ಸಂಜೆ ಕಾಲೇಜಿನಿಂದ ಬರುತ್ತ್ಲು ನಾಲ್ಕೈದು ಗೆಳತಿರೊಡನೆ ಸೇರಿ ಅವೆನ್ಯೂ ರೋಡಿನಲ್ಲಿದ್ದ ಅಯ್ಯಂಗಾರ್ ಬೇಕರಿಯಿಂದ ಬಿಸಿಬಿಸಿ ಬ್ರೆಡ್ ತಂದು ಅಮ್ಮ ಮಂಡ್ಯದಿಂದ ಕಳುಹಿಸುತ್ತಿದ್ದ ತುಪ್ಪ ಬಟ್ಟಲಿನಲ್ಲಿ ಕರಗಿಸಿ ಅದಕ್ಕೆ ಚಟ್ನಿಪುಡಿ ಹಾಕಿ ಕಲಿಸಿ ಬಿಸಿ ಬ್ರೆಡ್ ತುಂಡನ್ನು ಅದ್ದಿ ತಿನ್ನುತ್ತಿದ್ದರೆ ಸ್ವರ್ಗಕ್ಕೆ ಮೂರೇ ಗೇಣು. 70ರ ಆಚೆಯೂ 20ರ ಹರೆಯದ ನೆನಪು ಮಾಸಿಲ್ಲ.

ಕೆಲವರ ಮನೋಭಾವ ಈ ಬ್ರೆಡ್ ತಿಂಡಿಯ ಬಗ್ಗೆ ಹೀಗೆಯೇ ಇರುತ್ತದೆ. ನನ್ನ ಮೈದುನನ ಪ್ರಶ್ನೆ, 'ಬ್ರೇಕ್‌ಫಾಸ್ಟ್ ಏನು ಅತ್ತಿಗೆ?,

"ಬ್ರೆಡ್ಡು ಕಣೋ" ಅಂದಾಗ, ತಕ್ಷಣ "ಯಾಕೆ, ಹುಷಾರಿಲ್ವಾ"?. ಅವನ ಆತಂಕ. ಇವರ ಆಲೋಚನೆ ಬ್ರೆಡ್ ತಿನ್ನುವುದು ಕಾಯಿಲೆ ಮಲಗಿದಾಗ, ಹುಷಾರ್ ತಪ್ಪಿದಾಗ ಮಾತ್ರ. ಈ ಖಾದ್ಯದ ವೈವಿಧ್ಯಮಯ ತರಾವರಿ ರುಚಿ ಅರಿಯದ ಪಾಮರರು ಇವರು.

ಎರಡು ದಶಕಗಳ ಹೊರದೇಶದ ಸುತ್ತಾಟದಲ್ಲಿ ತರಹಾವರಿ ಜನಗಳ ತರಾವರಿ ಕಾಫಿ ಟೀಗಳ ಜೊತೆ ತರಾವರಿ ಬ್ರೆಡ್ಡುಗಳ ಪರಿಚಯ ಕೂಡ ಮಕ್ಕಳು ಮೊಮ್ಮಕ್ಕಳಿಂದ ನಮಗಾಯಿತು. ಬೆಣ್ಣೆಹಣ್ಣಿನ ಅವಕಾಡೋ ಟೋಸ್ಟ್, ವೆನಿಲ್ಲಾ ಬ್ರೆಡ್, ಸಿನಮನ್ ಬ್ರೆಡ್, ಮಲ್ಟಿ ಗ್ರೇನ್ ಬ್ರೆಡ್, ಗಾರ್ಲಿಕ್ ಬ್ರೆಡ್, ಫ್ರೆಂಚ್ ಬ್ರೆಡ್ ಹೀಗೆ ಒಂದೇ ಎರಡೇ ನಾನಾ ರೀತಿಯ ತಲೆಕೆಡಿಸುವಷ್ಟು ಬಗೆಯ ಬ್ರೆಡ್‌ಗಳನ್ನು ಹೆಸರಿಸಲು ಸಮಯ ಸಾಲಲ್ಲ. ಈ ಜನ ಎರಡು ಬ್ರೆಡ್ ತುಣುಕುಗಳ ನಡುವೆ ನೂರಾರು ರೀತಿಯ ಖಾದ್ಯಗಳನ್ನು ಇಟ್ಟು ಅಗಲವಾಗಿ ರಾಕ್ಷಸರ ತರ ಬಾಯಿ ತೆರೆದು ಒಳಗಿರುವ 32 ದಂತಪಂಕ್ತಿ ತೋರಿಸ್ತಾ, ದಾಳಿ ನಡೆಸ್ತಾ ದಾರದ ಎಳೆಗಳಂತೆ ಮಧ್ಯದ ತರಕಾರಿ, ಚೀಸ್ ತಿನ್ನುವುದನ್ನು, ಬಿಟ್ಟಕಣ್ಣು, ಬಿಟ್ಟಬಾಯಿಂದ ನಾವು ನೋಡ್ತಾ ಇದ್ರೆ ಮಕ್ಕಳ ಎಚ್ಚರಿಕೆಯ ಮಾತು, " ಅಮ್ಮ ಡೋಂಟ್ ಸ್ಟೇರ್".

ನಮಗೋ ಅವರ ಬಾಯಿನ ಹಿಗ್ಗುವಿಕೆ, ಸ್ಯಾಂಡ್‌ವಿಚ್‌ಗಳನ್ನು ತಿನ್ನುವ ರೀತಿ ಮೋಜಿನ ಸಂಗತಿ. ಇನ್ನು ಕೆಲವು ಬಗೆ ಬ್ರೆಡ್ಡ್‌ಗಳು ಹಲ್ಲಿಗೆ ಖಂಡಿತಾ ಸವಾಲು. ಅವುಗಳನ್ನು ಹಾಲಿನಲ್ಲೋ, ಸೂಪಿನಲ್ಲೋ ಅದ್ದಿ ತಿನ್ನಬೇಕಷ್ಟೆ. ಹಾಗೆ ಕಚ್ಚಿದರೆ ಹಲ್ಲು ಮುರಿಯೋದು ಗ್ಯಾರಂಟಿ.

ಸ್ವದೇಶವೋ, ವಿದೇಶವೋ ಈ ಬ್ರೆಡ್ಡಿನ ಉದ್ಯಮ ಬಲು ದೊಡ್ಡ ಪುರಾಣ. ಮನೇಲಿ ಚಪಾತಿ ಮಾಡುವ ರೀತಿ ಅನೇಕರು ವಿವಿಧ ರೀತಿಯ ಪದಾರ್ಥಗಳನ್ನು ಉಪಯೋಗಿಸಿ ಓವೆನ್‌ನಲ್ಲಿ ಬ್ರೆಡ್ ತಯಾರು ಮಾಡುವುದು ಸರ್ವೇ ಸಾಮಾನ್ಯ. ಬ್ರೆಡ್ ತಯಾರಾಗುತ್ತಿದ್ದಾಗ ಅದರ ಘಮಲು, ಬಿಸಿಬಿಸಿ ಬ್ರೆಡ್ ರುಚಿ ಸವಿದವರಿಗೇ ಗೊತ್ತು.

ಅಂತೂ ನನ್ನ ಕುಟುಂಬದಲ್ಲಿ ಎಲ್ಲರೂ ಈ ಖಾದ್ಯವನ್ನು ಇಷ್ಟಪಟ್ಟು ಸವಿಯುವುದರಿಂದ ಇದರ ಘಮಲು ಹಲವಾರು ಸಂತಸದ ಕ್ಷಣಗಳ ನೆನಪಿಸಿ, ಬೆಚ್ಚಗಿನ ಭಾವ ನೀಡುತ್ತದೆ ನನ್ನ ಮನಸ್ಸಿಗೆ. ವಾರದಲ್ಲಿ ಒಂದೆರಡು ಬಾರಿ ಬಿಸಿತುಪ್ಪ, ಬೆಣ್ಣೆ, ಚಟ್ನಿಪುಡಿ, ಕರಿಬೇವಿನ ಪುಡಿ ಜೊತೆ ಇದನ್ನು ಸವಿದು ನೋಡಿ. ನೀವೂ ಖಂಡಿತಾ ಈ ಖಾದ್ಯದ ದಾಸರಾಗುತ್ತೀರಾ. ಏನಂತೀರ?

***

ಸುಮನೋಹರ ದಿನ

– ಹಿಮನಾಥ

ಲಾ ಲಾ ಲಾ ದಿನವಿಂದು ಸುಮನೋಹರ
ಲಾ ಲಾ ಲಾ ನೀಲವರ್ಣಾವೃತ ಅಂಬರವೂ
ನನ್ನ ಬಗಲಿನಲೀ ನೀನಿರಲೂ
ಪ್ರತಿಯೊಂದು ಕ್ಷಣವೂ ನವನವೀನ

ರವಿಕಿರಣ ನರ್ತಿಸುತಿದೆ ಮಸ್ತಕದ ಮೇಲೆ
ನಗುನಗುತಾ ಸಾಗುತಿದೆ ಸಮೀರವೂ
ಕರಹಿಡಿದುಕೊ ಜೊತೆಜೊತೆಗೇ ಸಾಗೋಣ
ಅಂಬರದ ಕೆಳಗೆ ಹರಡಿದೆ ರಶ್ಮೀಯೂ

ಲಾ ಲಾ ಲಾ ಜಾದೂ ಇದೆ ಬೀಸುಗಾಳಿಯಲಿ
ಸರಿಯೆನಿಸುತಿದೆಯಿಂದು ಪ್ರತಿಯೊಂದೂ
ನನ್ನ ಜೊತೆಯಿರುವೆಯೆಂದು ನೀ ಉಸಿರಲೂ
ಲಾ ಲಾ ಲಾ ನಿಜವಾಗಿಯೂ ಶುಭದಿನವು ಇಂದೂ

ಗಾನವಿದೆ ಪ್ರತಿ ಹೃದಯದ ಬಡಿತದಲೀ
ಚಿನ್ನದಂತ ಮಧುರ ವಾಣಿಯಲೀ
ಬೆಳಗಾಗುವುದೂ ನಿನ್ನ ಕಿರುನಗೆಯಿಂದಲೇ
ಹಿಡಿದಿರಬೇಕು ನಾವು ಪ್ರೀತಿಪ್ರೇಮವಾ

ದಾರಿ ತೋರುತಿವೆ ನಮಗೆ ರವಿ ಕಿರಣಾ
ಲಾ ಲಾ ಲಾ ಕಾಲಾ ಸರಿಯುತಿದೆ ಹಾಗೆಯೇ
ಬಳುಕುತಾ ನೀ ಜೊತೆಯಲಿ ನರ್ತಿಸಲೂ
ಲಾ ಲಾ ಲಾ, ದಿನವಿಂದು ಸುಮನೋಹರ


ಲಾ ಲಾ ಲಾ, ದಿನವಿಂದು ಸುಮನೋಹರ

***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಅಧ್ಯಕ್ಷರ ಅನಿಸಿಕೆಗಳು

ಸಾಹಿತ್ಯ ದಾಸೋಹ – 244



ಭ.ರಾ.ವಿಜಯಕುಮಾರ

'ಸಮನ್ವಯ ಸಮಿತಿ ಕನ್ನಡವೇ ಸತ್ಯ' ಹೆಸರಿನ ಗುಂಪು ನಿಯಮಿತವಾಗಿ ನಡೆಸುವ ಕಾರ್ಯಕ್ರಮವೇ ನೋಡಿಯೋ ದಾಸೋಹ. 244ರ ಸಂಖ್ಯೆಯನ್ನು ಮುಟ್ಟಿದ ಈ ಮಾಸದ ಕಾರ್ಯಕ್ರಮ ಅನೇಕರಿಗೆ ಅವರ ಬರೆಹಗಳನ್ನು ಪ್ರಸ್ತುತಪಡಿಸುವ ವೇದಿಕೆ. ಅಂತರ್ಜಾಲದಲ್ಲಿ ನಡೆಯುವುದರಿಂದ ಮನೆಯಲ್ಲೇ ಕುಳಿತು ಅಥವಾ ಎಲ್ಲೆಂದರಲ್ಲಿಂದಲೇ ಭಾಗವಾಗುವ ಸೌಲಭ್ಯವಿದೆ. ಪ್ರಸರಣವಾದ ನಂತರ ಪತ್ರಿಕೆಯಾಗಿ ದಾಖಲಾಗುವುದು ಇದರ ಇನ್ನೊಂದು ವಿಶೇಷ. ಈ ಎಲ್ಲಕ್ಕೂ ಶ್ರಮಿಸುವ ಕೈ ಹಾಗೂ ಮನಸುಗಳಿಗೆ ನನ್ನ ಅಭಿನಂದನೆಗಳು ಹಾಗೂ ನನ್ನನ್ನು ಅಧ್ಯಕ್ಷತೆಗೆ ಆಯ್ಕೆ ಮಾಡಿದುದಕ್ಕೂ ಧನ್ಯವಾದಗಳು.

ದಾಸೋಹದಲ್ಲಿ ಒಟ್ಟು 15 ಬರಹಗಾರರ ಪ್ರಸ್ತುತಿಗಳಿದ್ದವು. ಸಾಹಿತ್ಯದ ವಿವಿಧ ಪ್ರಕಾರಗಳು ಇಲ್ಲಿ ಪ್ರಸಾರವಾದವು. ಬರೆಯುವ ಕೈಗಳೂ ಸಹ ಪಳಗಿದ ಮನಸ್ಸಿನ ಕೃತಿರೂಪಗಳು. ಹಾಗಾಗಿ ಬರೆಹದ ಆನಂದವನ್ನು ಆಸ್ವಾದಿಸುವುದೇ ಮುಖ್ಯ. ಅದನ್ನು ಕಂಡುಕೊಂಡಿರುವೆ.

1. ಸಕ್ಕರೆ ನಾಡಿನ ಸವಿನೆನಪುಗಳು – ಶ್ರೀ ಮಹಾಬಲ

ಕವಿಸಂಸರ್ಗ ಹಾಗೂ ವಂಶವಾಹಿನಿಯ ಹಿನ್ನೆಲೆಯ ಲೇಖಕರು ಮಹಾಬಲರು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನಿವಾರ್ಯವಾದ ವರ್ಗಾವಣೆ ಹಲವು ಹೊಸ ಅನುಭವಗಳಿಗೆ ಕಾರಣವಾಗುತ್ತದೆ. ಅಂಥ ಸಂದರ್ಭವೊಂದನ್ನು ಅವರು ಮಂಡ್ಯಕ್ಕೆ ವರ್ಗವಾದ ದಿನಗಳ ನೆನಪಾಗಿ ದಾಖಲಿಸಿದ್ದಾರೆ. ಕಪಿಲೆಯಿಂದ ಕಾವೇರಿಯೆಡೆಗೆ ವರ್ಗವಾದದ್ದನ್ನು ಸೂಚಿಸುವ ರೀತಿ ಭೌಗೋಳಿಕ ವ್ಯತ್ಯಾಸನ್ನೂ ತೋರುತ್ತದೆ. ಕನ್ನಡವೇ ಆದರೂ ನುಡಿಯುವ ಕಾಕು ಹಾಗೂ ಬಳಸುವ ಪದಗಳು ಕೆಲವೊಮ್ಮೆ ತೊಂದರೆ ನೀಡುತ್ತವೆ. ಇವರ ವಂಶಜರ ಊರೆಂದು ಸಮಾಧಾನ ಹಾಗೂ ಜನಪ್ರಿಯ ಕವಿಯ ಮಗನೆಂಬುದು ಇವರ ಪರಿಚಯವನ್ನು ತಲುಪಿಸಿರುತ್ತದೆ. ಆದರೆ ಶಾಖೆಯಲ್ಲಿರುವ ಭಿನ್ನ ಪ್ರದೇಶದ ಸಹೋದ್ಯೋಗಿಗಳು ಪಟ್ಟ ಪಾಡಿಗೆ ಇವರು ದನಿಯಾಗುತ್ತಾರೆ. ಇಲ್ಲಿ ಬರುವ 'ಕನ್ನಡವೆಲ್ಲ ಒಂದೇ, ನಿನಗೇಕೆ ಅರ್ಥವಾಗುವುದಿಲ್ಲ?' ಎಂಬ ಮಾತು ಪ್ರಬಂಧ ಧ್ವನಿಯಂತೆ ಕೇಳುತ್ತದೆ. ನಾವು ಶಿಕ್ಷಿತರು, ವಾಕ್ಯದ ನಡುವೆ ಸೇರಿಸುವ ಇಂಗ್ಲಿಷ್ ಪದ ಕೂಡ ಸ್ಥಳೀಯನಿಗೆ ಅನರ್ಥ ಕೊಡುವುದು ಇಲ್ಲಿದೆ. ಕೂಳೆಕಬ್ಬು, ಸಸಿಕಬ್ಬು, ಉಪ್ಪುಬೂದಿ ಮೊದಲಾದ ಕೃಷಿ ಪದಗಳು ನಮಗೂ ಒಂದಿಷ್ಟು ತಿಳುವಳಿಕೆ ನೀಡುತ್ತವೆ. ಪಾರಿಭಾಷಿಕ ಪದ NPA ತಿಳಿಯದವನಿಗೆ ಅದರ ಗಾಢತೆಯೂ ತಟ್ಟುವುದಿಲ್ಲ. ಸ್ಥಳೀಯ ಅಜ್ಜಪಾಲು ಪದ ಓದುಗರನ್ನೂ ಅಚ್ಚರಿಗೊಳಿಸುತ್ತದೆ. ಸರಳವಾಗಿ ಓದಿಸಿಕೊಳ್ಳುವ ಲಲಿತ ಪ್ರಬಂಧವಿದು.

2. ಶಾಲೆಯೇಕೆ ಬೇಡ / ಅನಿರೀಕ್ಷಿತ– ಶ್ರೀಮತಿ ಗಾಯತ್ರಿ ಮೂರ್ತಿ

ಇವೆರಡೂ ಪುಟ್ಟ ಕಥೆಗಳು. ಮೊದಲನೆಯ ಕಥೆ 'ಶಾಲೆಯೇಕೆ ಬೇಡ'– ಹರೆಯಕ್ಕೆ ಸಿದ್ಧವಾಗುತ್ತಿರುವ ಬಾಲಕಿಯೊಬ್ಬಳ ಮನೋ ವೈಜ್ಞಾನಿಕ ಚಿತ್ರಣ ಹಾಗೂ ವಿವೇಕರಹಿತ ನಡವಳಿಕೆಯ ಶಿಕ್ಷಕನ ರೀತಿಯೂ ಇಲ್ಲಿದೆ. ಪ್ರಪಂಚದ ರೀತಿನೀತಿಗಳು ಅರಿವಿಲ್ಲದ ಮನ್ನಸ್ಸಿಗೆ 'ಕಾಮ'ದಂಥಹ ವಿಷಯ ಎಂತಹ ಆಘಾತ ತರುತ್ತದೆ, ಆ ತಳಮಳದ ಪರಿಣಾಮ ತಾನು ಶಾಲೆಗೇ ಹೋಗದಿರುವ ನಿರ್ಧಾರಕ್ಕೆ ಕಾರಣವಾಗುವ ಮತ್ತು ಅದು ಗಮನಕ್ಕೆ ಬಂದ ನಂತರ ಮನೋವೈದ್ಯರ ಸಲಹೆಯಂತೆ ಧೈರ್ಯತೋರಿ ನಡೆದುಕೊಳ್ಳುವುದು... ಇವು ಕಥೆಯ ಮುಖ್ಯ ಹಂದರಗಳು. ನಾಗರಿಕರು ಎಂದುಕೊಳ್ಳುವ ಸಮಾಜದಲ್ಲೂ ಕೂಳೆಗಳು ಉಳಿದಿರುವುದನ್ನು ತೋರಿಸಿದ್ದಾರೆ.

ಭ. ರಾ. ವಿಜಯಕುಮಾರ

ಹುಟ್ಟಿದ ಸ್ಥಳ- ಹಾಸನ. ಬೆಂಗಳೂರಿನಲ್ಲಿ ವಿದ್ಯಾಭ್ಯಾಸ. ವಿಜ್ಞಾನ ಪದವೀಧರ ಮತ್ತು ಕನ್ನಡದಲ್ಲಿ ಎಂ.ಎ. ಸ್ನಾತಕೋತ್ತರ ಪದವಿ. ಬ್ಯಾಂಕ್ ಅಧಿಕಾರಿಯಾಗಿ ಸೇವೆ ಸಲ್ಲಿಸಿ, ಪ್ರಸ್ತುತ ಬೆಂಗಳೂರಿನ ವಿದ್ಯಾರಣ್ಯಪುರದಲ್ಲಿ ನಿವೃತ್ತ ಜೀವನ.

ಪ್ರವೃತ್ತಿಯಲ್ಲಿ ಕವಿ, ನಟ, ನಾಟಕಕಾರ, ಗಾಯಕ, ಕಾರ್ಯಕ್ರಮ ನಿರೂಪಕ, ಬರಹಗಾರ, ಆಕಾಶವಾಣಿ ಕಲಾವಿದ, ಗಮಕ ವ್ಯಾಖ್ಯಾನಕಾರ, ಅಷ್ಟಾವಧಾನ, ಶತಾವಧಾನ ಕಾರ್ಯಕ್ರಮಗಳಲ್ಲಿ ಅನೇಕ ವಿಭಾಗಗಳ ಪೃಚ್ಛಕನಾಗಿ ಕಾರ್ಯನಿರ್ವಹಣೆ, 'ಕಲಾಗಂಗೋತ್ರಿ' ನಾಟಕ ತಂಡದ ಸದಸ್ಯ, ಕಿರುತೆರೆ ಮತ್ತು ಸಿನಿಮಾದಲ್ಲೂ ಅಭಿನಯಿಸಿದ ಅನುಭವ– ಹೀಗೆ 'ಭರಾವಿ' ಅವರದು ಬಹುಮುಖ ಪತ್ರಿಭೆ.

'ಪಂಜರದೊಳಗೂ ಇಂಚರ' (ಭಾವಗೀತೆಗಳ ಸಂಕಲನ), 'ಸುರ್ ಸುರ್ ಬತ್ತಿ' (ಮಕ್ಕಳ ಪದ್ಯ ಸಂಕಲನ), 'ಮಹಾಕವಿ ವಿ ನರಹರಿ' (ವ್ಯಕ್ತಿಚಿತ್ರ) – ಈ ಪುಸ್ತಕಗಳು ಪ್ರಕಟವಾಗಿದ್ದು, 'ಕೇಳು ಗೆಳೆಯ' (ಮುಕ್ತಕಗಳ ಕೃತಿ) ಪ್ರಕಟಣೆಗೆ ಸಿದ್ಧವಾಗುತ್ತಿದೆ.

ಪ್ರಸಕ್ತ 'ಅಖಿಲ ಭಾರತೀಯ ಸಾಹಿತ್ಯ ಪರಿಷತ್ತು-ಕರ್ನಾಟಕ'ದ ಸಹ ಖಜಾಂಚಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

***

ಮತ್ತೊಂದು ಕಥೆ 'ಅನಿರೀಕ್ಷಿತ' – ಆಸ್ತಿ—ಹಣ ಎಂಬ ಆಮಿಷಗಳು ಸಂಬಂಧವನ್ನು ಹೇಗೆ ಪ್ರಭಾವಿಸಿ ನಯವಂಚಕತನವನ್ನು ಕಲಿಸುತ್ತವೆ ಎಂಬ ಚಿತ್ರಣ. ವಯಸ್ಸಾದ ತಂದೆತಾಯಂದಿರನ್ನು ಉಪಾಯವಾಗಿ ಒಲಿಸಿಕೊಂಡು ಅವರ ಎಲ್ಲ ಆಸ್ತಿಯನ್ನು ತನ್ನದಾಗಿಸಿಕೊಳ್ಳುವ ಮಗನ ಆಸೆಬುರುಕತನ ಎಂದಿಗೂ ಇರುವ ಪರಿಸ್ಥಿತಿಯೇ. ಆದರೆ ವಿವೇಕವಂತನಾದ ತಂದೆ ಕಾಲಕ್ಕೆ ತಕ್ಕ ಚಿಂತನೆ ಮಾಡಿ ತನ್ನ ನಂತರ ಮಡದಿಗೂ ಅನ್ಯಾಯವಾಗದಂತೆ ವ್ಯವಸ್ಥೆ ಮಾಡಿಕೊಳ್ಳುತ್ತಾನೆ. 'ಅಜ್ಜಪಾಲು' ಎಂಬ ಕಾನೂನು ಇಲ್ಲಿ ಪರಿಣಾಮಕಾರಿಯಾಗಿದೆ. ಇದನ್ನು ಅರಿತಮೇಲೂ ಮಗ ದ್ವೇಷಕಾರದೆ ತಂದೆಯ ವಿವೇಕ ಮತ್ತು ಪ್ರೀತಿಯನ್ನು ಅರ್ಥೈಸಿಕೊಂಡು ಮೆಚ್ಚುಗೆ ತೋರುವುದು ಉತ್ತಮ ಅಂಶ.

3. ಸತಿಸಪ್ತಮಿ — ಶ್ರೀ ಗಣಪತಿ ಹೆಗಡೆ

ವ್ಯಾಕರಣ ಶಾಸ್ತ್ರಕ್ಕೆ ಸಂಬಂಧಿಸಿದ ವಿಷಯವೊಂದು ಹಗುರಾದ ತಿಳುವಳಿಕೆಯ ಲೇಖನವಾಗಿದೆ. ಸಂಸ್ಕೃತ ಭಾಷೆಯಲ್ಲಿ ಹೆಚ್ಚು ಪ್ರಯೋಗದಲ್ಲಿರುವ 'ಸತಿಸಪ್ತಮಿ' ಎಂಬ ಪ್ರಯೋಗದ ರೀತಿಯನ್ನು ಸರಳವಾಗಿ ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ. ಗಂಭೀರ ವಾಗಬಹುದಾದ ಲೇಖನವನ್ನು ಹಾಸ್ಯದ ಮೆರುಗಿತ್ತು ಪ್ರವೇಶಿಸಿರುವುದು ಉತ್ತಮವಾಗಿದೆ. ಎರಡು ಕ್ರಿಯೆಗಳು ಏಕಕಾಲದಲ್ಲಿ ನಡೆದಾಗ ಅದನ್ನು ವ್ಯಕ್ತಪಡಿಸುವ ವ್ಯಾಕರಣಾಂಶ ಇಲ್ಲಿದೆ. ಕ್ರಿಯಾಪದದ ವಿಭಕ್ತಿಯಲ್ಲಿ ಉಚಿತ ಪ್ರಯೋಗದ ಎಂಟು ಉದಾಹರಣೆಗಳ ಮೂಲಕ ವಿಶದಪಡಿಸಿದ್ದಾರೆ. ಭಾಷೆಯ ಸರಿಯಾದ ಕ್ರಮವರಿಯಲು ಆಸಕ್ತರಿಗೆ ಸಣ್ಣ ನೋಟ ಕೊಡುವುದೇ ಸೀಮಿತ ಲೇಖನದ ಉದ್ದೇಶ.

4. ಹೆಸರಿನ ಮೊದಲಕ್ಷರಗಳ ಉಪಟಳ — ಶ್ರೀಮತಿ. ಜಿ.ವಿ.ನಿರ್ಮಲ

ಹೆಸರಿನಲ್ಲೇನಿದೆ- ಎಂಬ ಪ್ರಶ್ನೆ ಬಹು ಪ್ರಸಿದ್ಧ. ಆ ಕುರಿತು ಕವನಗಳೂ ಉಂಟು. ಇಲ್ಲಿ ಲೇಖಕಿ ಹೇಳಹೊರಟಿರುವುದು ಹೆಸರಿನ ಮುಂದಿರುವ 'ಇನಿಷಿಯಲ್ಸ್' ಬಗೆಗೂ ಸಹ. ಇದನ್ನು ಅವರು ಆರಂಭಿಕ/ಆದ್ಯಕ್ಷರ/ಮೊದಲಕ್ಷರ ಎಂದಿದ್ದಾರೆ. ಬಹುಶಃ ಸಂಕೇತಾಕ್ಷರ/ಸೂಚ್ಯಕ್ಷರಗಳೆಂದರೆ ಸೂಕ್ತವಾದೀತೇನೊ? ಇಂದಿನ ವ್ಯವಹಾರಗಳಲ್ಲಿ ಇವು ಎಷ್ಟು ಪ್ರಮುಖವೆಂಬುದು ನಮ್ಮೆಲ್ಲರ ಅನುಭವಕ್ಕೆ ಬಂದಿರುವುದೇ. ಒಂದೇ ಹೆಸರಿನವರಿಗೆ ಭಿನ್ನತೆ ತೋರಲೂ ಇದು ಸಹಾಯಕ. ಕೆಲವು ಅರ್ಜಿಗಳಲ್ಲಿ ಈ ಸೂಚ್ಯಾಕ್ಷರಗಳನ್ನು ಬಿಡಿಸಿಯೂ ಬರೆಯಬೇಕಾಗುತ್ತದೆ. ಇದರಲ್ಲಿ ಕೊಂಚ ಹಿಂಚುಮುಂಚಾದರೂ ಸಮಸ್ಯೆಯೇ. ಅದರಲ್ಲೂ ಆರ್ಥಿಕ ಹಾಗೂ ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಇದರದು ತೊಡಕೇ. ಇಂದಿನ ಜೀವನಕ್ರಮದಲ್ಲಿ ನಾವು ಪಡೆಯಬಹುದಾದ ದಾಖಲೆಗಳ ಪಟ್ಟಿ,

ಇವುಗಳ ಪ್ರಾಮುಖ್ಯತೆ ವಿವರಿಸಲು ಅಭಿಯಾನ ಮಾತ್ರವಲ್ಲದೆ ನಮ್ಮ ಪುರಾಣ ಪರಂಪರೆಗೆ ಇಲ್ಲಿನ ಹೋಲಿಕೆಗಳು ಬರೆಹದ ಮೌಲ್ಯವನ್ನು ಹೆಚ್ಚಿಸಿವೆ.

5. ಸುಮನೋಹರ ದಿನ– ಶ್ರೀ ಎಸ್. ಮಂಜುನಾಥ

ಈ ಕವನವನ್ನು 'ಹಿಮನಾಥ' ಕಾವ್ಯನಾಮದಲ್ಲಿ ಕವಿ ಕೊಟ್ಟಿದ್ದಾರೆ. ಬಹಳ ಸರಳವಾದ, ಒಂದು ಓದಿಗೇ ನಿಲುಕಬಲ್ಲ ಹಾಡುಗವನವಿದು. ಶೀರ್ಷಿಕೆಯೇ ಭಾವವನ್ನು ಸೂಚಿಸಿಬಿಡುತ್ತದೆ. ಹಾಡಿನ ಭಾಗವಾಗುವ 'ಲ....ಲ...ಲಾ... ಎಂಬ ಪಲುಕಿನಿಂದಲೇ ಆರಂಭವಾಗಿ ಹೇಗೆ ಹಾಡಿಕೊಳ್ಳಬಹುದೆಂದು ಯೋಚಿಸುವಂತಾಗುತ್ತದೆ. ಸ್ವಸ್ಥಮನದ ಕವಿ ಪ್ರಕೃತಿ ಮನೋಹರತೆಯನ್ನು ಆನಂದಿಸಿ ನುಡಿವ ಸಾಲುಗಳು, ಪ್ರಿಯರ ಸಮಾಗಮವನ್ನು ಸೂಚಿಸುವ ಪದಪುಂಜಗಳು ನಮಗೆ ಸಿನಿಮೀಯ ಮಧುರ ವಾತಾವರಣದ ಕಲ್ಪನೆಯನ್ನು ಕೊಡುತ್ತದೆ.

6. ಉಯಿಲು–ಶ್ರೀಮತಿ ಟಿ.ಆರ್. ಉಷಾರಾಣಿ

ಹಲವಾರು ಕಥೆಗಳನ್ನು ಬರೆದು ಪಳಗಿದ ಒಂದು ಕಥೆಯಿದು. ಕುಟುಂಬವೊಂದರ ಚಿತ್ರಣ ಇಲ್ಲಿದೆ. ತಾಯಿ, ಮಗಳು ಮತ್ತು ಮಗ ಇವರ ನಡುವಿನ ಸಂಬಂಧದ ನವಿರಾದ ಚಿತ್ರಣ. ಬಹಳ ಕಷ್ಟಗಳಲ್ಲಿ ನೊಂದು ಏಕಾಂಗಿಯಾಗಿ ಬದುಕನ್ನು ಕಳೆಯುವ ಹಿರಿಯ ಮಗಳು ತನ್ನ ತಾಯಿಯೊಂದಿಗೆ ತಮ್ಮನೊಡನೆಯೇ ವಾಸ ಮಾಡುತ್ತಿರುತ್ತಾಳೆ. ಗುಣಪಡಿಸಲಾಗದ ಖಾಯಿಲೆಯಿಂದ ಮರಣೋನ್ಮುಖಳಾದ ಆಕೆಯನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳುವ ಕರುಳು ತಾಯಿಯದು. ತಾನು ಜೀವನದಲ್ಲಿ ನೋವುಂಡರೂ ತಮ್ಮನನ್ನು ಅಕ್ಕರೆಯಿಂದ ಬೆಳಸಿ ದಡ ಮುಟ್ಟಿಸಿದ ಜೀವ ಆ ಮಗಳದು. ಇದನ್ನೆಲ್ಲ ಅರಿಯುವ ಸೂಕ್ಷ್ಮತೆಯಿದ್ದರೂ ವಾಸ್ತವತೆಯ ಕಲ್ಪನೆಯಿರುವ ತಮ್ಮನ ಮನದ ಹೊಯ್ದಾಟವೇ ಬೇರೆ. ಅಕ್ಕನ ಹೆಸರಲ್ಲಿರುವ ಆಸ್ತಿಯ ಆಸೆಯಿಲ್ಲದಿದ್ದರೂ ಸರಿಯಾದ ನಿರ್ದೇಶವಿಲ್ಲದಿದ್ದರೆ ಕೈತಪ್ಪಿ ಹೋಗಿಬಿಡುವ ವಸ್ತುಸ್ಥಿತಿಯೆಡೆ ಅವನ ಗಮನ. ಅದನ್ನು ನುಡಿದು ತಾಯಿಯನ್ನು ನೋಯಿಸಲಾರ. ಇದೆಲ್ಲ ಅರ್ಥವಾದಂತೆ ಅಕ್ಕ ನಡೆದುಕೊಂಡ ರೀತಿ, ಆಕೆ ಮಾಡಿಟ್ಟ 'ಉಯಿಲು' ಸಂದಿಗ್ಧತೆಯನ್ನು ತಿಳಿಮಾಡಿದ ಸನ್ನಿವೇಶ ಇವು ಆರ್ದ್ರತೆಯನ್ನೂ ಸಮಾಧಾನವನ್ನೂ ಕೊಡುತ್ತವೆ.

7. ಹೊರಗೆ ಯಾರಿಲ್ಲ... ಯಾರೂ ಇಲ್ಲ – ಶ್ರೀಮತಿ ಸುಷುಮಾ ಸುರೇಶ್

ಈ ಕವಿತೆಗೆ ಪೂರ್ವಪೀಠಿಕೆಯಾಗಿ ಕವಯಿತ್ರಿಯೇ ಕೆಲವು ಮಾತುಗಳನ್ನು ಬರೆದು ಬಾಗಿಲು ತೆರೆದಿದ್ದಾರೆ. ಕುಟುಂಬಗಳ ಇಂದಿನ ಪರಿಸ್ಥಿತಿ, ಸಂಬಂಧಗಳಲ್ಲಿ ಬಿರುಕು, ಮುಪ್ಪಿನ ಅಸಹಾಯಕತೆ, ಆಶ್ರಯದ ಅನಿವಾರ್ಯತೆ ಮೊದಲಾದ ಹದಗೆಟ್ಟ ಸ್ಥಿತಿಗಳು ಯಾವ ಮಟ್ಟ ತಲುಪಿದೆಯೆಂಬ ಚಿತ್ರಣವಿಲ್ಲಿದೆ. ಇಲ್ಲಿ ತಪ್ಪು ಯಾರದು ಎಂಬುದೂ ಪ್ರಶ್ನೆ. ಬದುಕಿನ ರೀತಿಗೆ ಕೆಲವು ಟಿಪ್ಪಣಿಗಳನ್ನು ದಾಖಲಿಸುತ್ತಾರೆ. ಕಸುವಿದ್ದಾಗ ಪ್ರೀತಿಯನ್ನು ತೋರದೆ ದರ್ಪ ಅಹಂಕಾರಗಳಿಂದ ಬದುಕಿದರೆ ನಮ್ಮ ನೆರೆಯ ಜೀವಗಳು ನಮ್ಮನ್ನು ಬಯಸುವುದಾದರೂ ಹೇಗೆ? ಶಕ್ತಿ ಸೋರಿದ ನಂತರ ಆಸರೆಗೆ ಬಯಸಿದರೆ ಬರುವವರಾದರೂ ಯಾರು? ಆದ್ದರಿಂದ "ಇಂದ'ನ್ನು ಸಹ್ಯವಾಗಿಸಿದರೆ 'ನಾಳೆ'ಯೂ ನಮಗೆ ಸಂದೀತು ಎಂಬ ಎಚ್ಚರಿಕೆ ನೀಡಿದ್ದಾರೆ. ಬದುಕು 'ಘನ'ವೂ ಆಗಿದ್ದು 'ಪ್ರೀತಿ'ಯೊರತೆಯೂ ತುಂಬಿರಬೇಕೆದು ಅವರ ಆಶಯ.

8. ಅತಿಯಾಸೆ ಗತಿಗೇಡು– ಶ್ರೀ ವಿಠ್ಠಲ ಇಜೇರಿ

ಗಮನಿಸಿದ ಎಲ್ಲ ಬರೆಹಗಳನ್ನೂ ಸಹೃದಯೀ ಮನಸ್ಕರಾಗಿ ಪರಿಶೀಲಿಸಿ ಪ್ರತಿಕ್ರಯಿಸುವ ಉತ್ಸಾಹೀ ಲೇಖಕರು ಇಜೇರಿಯವರು. ವಿಷಯ ವೈವಿಧ್ಯವೂ ಸಹ ಇವರ ಬರೆಹಗಳ ಹಿಂದಿದೆ. ಈ ಬಾರಿ ಜಾನಪದ ಲೋಕವನ್ನು ಪರಿಚಯಿಸುವ ಯತ್ನ ಇಲ್ಲಿದೆ. ಜನಪದ ಕಥೆಗಳು, ಅವು ಸಂಕಲನಗೊಂಡ ಬಗೆ, ಅದರ ವಿಭಾಗಕ್ರಮ ಮೊದಲಾಗಿ ಆರಂಭದ ಟಿಪ್ಪಣಿಯಿದೆ. ಇದಕ್ಕೆ ಉದಾಹರಣೆಯಾಗಿ ಸಣ್ಣ ಕಥೆಯೊಂದನ್ನು ನೀಡಿದ್ದಾರೆ. ಕಳ್ಳತನವೊಂದರಿಂದ ಆರಂಭವಾಗಿ ಆಕಸ್ಮಿಕ ಸಾವು ಘಟಿಸಿ, ಅದಕ್ಕೆ ಬಾಧ್ಯರು ಯಾರೆಂಬ ಹುಡುಕಾಟ ಆರಂಭವಾಗುತ್ತದೆ. ರಾಜನ ಬಳಿಗೆ ದೂರು ಹೋಗಿ ವಿಚಾರಣೆಯ ಸರಣಿ ಆರಂಭ. ಮುಂದೆ ಪ್ರತಿ ಪಾತ್ರವೂ ಮತ್ತೊಂದು ಪಾತ್ರವನ್ನು ಹೊಣೆಗಾರಿಕೆ ಮಾಡುವ ನುಣುಚಿಕೊಳ್ಳುವ ಪ್ರಕ್ರಿಯೆ ನಡೆದು ಕೊನೆಗೆ ಒಬ್ಬ ಬುದ್ಧಿವಂತನಿಂದ ರಾಜನ ಬುಡಕ್ಕೇ ಬರುತ್ತದೆ.

ಬುದ್ಧಿಗೇಡಿಯಾದ ರಾಜ ಮಂತ್ರಿಗಳಿಬ್ಬರೂ ಅದಕ್ಕೆ ಬಲಿಯಾಗಿ ಮುಕ್ತಾಯವಾಗುತ್ತದೆ. ಸಮಾಜದ ಚುಕ್ಕಾಣಿ ಹಿಡಿದವರು ಭ್ರಷ್ಟರಾದರೆ ಆಗುವ ಗತಿ, ಹೊಣೆಗೇಡಿತನದ ಪರಿಣಾಮ ಮೊದಲಾದುವು ಕಥೆಯ ಆಶಯಗಳು. ಇದೇ ಕಥೆಯಾಧಾರದ ಬೇಂದ್ರೆಯವರ 'ಸಾಯೋಆಟ' ನಾಟಕ ನೆನಪಾಗುತ್ತದೆ.

9. ಬ್ರೆಡ್ ಪುರಾಣ – ಶ್ರೀಮತಿ ಮಾಲತಿ ಶ್ರೀನಿವಾಸನ್

ಗೃಹಸ್ಥ ಮಹಿಳೆಯರ ದೈನಂದಿನ ಸಮಸ್ಯೆಯಾದ ಮರುದಿನದ ತಿಂಡಿ, ಅಡುಗೆಗಳ ಚಿಂತೆಯಿಂದ ಆರಂಭವಾಗುವ ಲಲಿತವಾದ ಹರಟೆಯನ್ನು ಇಲ್ಲಿ ಅನುಭವಿಸಬಹುದು. ಪಶ್ಚಿಮದ ಪ್ರಭಾವದಿಂದ ಇಲ್ಲಿಗೆ ಬಂದುಳಿದು ನಮ್ಮದಾದ ಅನೇಕ ವಿಷಯಗಳಲ್ಲಿ ಬ್ರೆಡ್ ಕೂಡ ಒಂದು. ಒದಗಿಸಲು ಸುಲಭವಾದ ಇದು ಅನಾರೋಗ್ಯ ಕಾಲದಲ್ಲಿ ಪ್ರಿಯವಾಗಬಲ್ಲ ತಿನಿಸು. ಇದರಿಂದ ತಯಾರಿಸಬಲ್ಲ ವಿವಿಧ ರೀತಿಯ ನೀರೂರಿಸುವ ಬಗೆಗಳು ಓದುಗರಿಗೂ ನೀರೂರಿಸುತ್ತವೆ. ತುರ್ತಿನ ಸಮಯಕ್ಕೆ ದಿಢೀರನೆ ಒದಗಬಲ್ಲ, ಪ್ರಯಾಣದಲ್ಲೂ ಅನುಕೂಲಿಸಬಲ್ಲ, ಇದ್ದುದರಲ್ಲೇ ರುಚಿ ಹುಟ್ಟಿಸಬಲ್ಲ ಮಹಿಳೆಯರ ಆಪದ್ಬಾಂಧವ ತಿನಿಸಿದು. ವಾರದ ಕನಿಷ್ಠ ಎರಡು ದಿನದ ತಿಂಡಿಯ ಚಿಂತೆ ತೊಲಗಿಸಬಲ್ಲ ಬ್ರೆಡ್ 'ಪುರಾಣ' ಶ್ರವಣವಾಗಿ ಇಲ್ಲಿ ಮುದನೀಡಿದೆ.

10. ಕಾಲಚಕ್ರ ಉರುಳುತಿದೆ – ಶ್ರೀಮತಿ ಗಿರಿಜಾರಾಜ್

ಗದ್ಯಪದ್ಯಗಳೆರಡರಲ್ಲೂ ಪಳಗಿದ ಕೈ ಗಿರಿಜಾರವರದ್ದು. ಕಾಲದ ಕುರಿತ ಕವನದಲ್ಲಿ, ನಾವೆಷ್ಟೇ ಯತ್ನಿಸಿದರೂ ತಪ್ಪಿಸಿಕೊಳ್ಳಲಾಗದ ಹಿಡಿತ ಕಾಲನದು, ತಿರುಗಿ ನೋಡಬಹುದೇ ಹೊರತು ತಿರುಗಿ ಹೋಗಲಾಗದ ಗಮ್ಯ. ನಮ್ಮ ಅನುಕೂಲಕ್ಕೆ ವ್ಯವಸ್ಥೆಯೊಂದನ್ನು ರೂಪಿಸಿಕೊಂಡು ಲೆಕ್ಕ ಹಾಕುತ್ತೇವಷ್ಟೆ. ಸೂರ್ಯಕೇಂದ್ರಿತ ಭ್ರಮಣ, ಮತ್ತೆಮತ್ತೆ ಮೊದಲೆನಿಸುವಂತೆ ಪರಿಭ್ರಮಿಸುವ ರೀತಿ ಇವೆಲ್ಲ ಎಂದಿಗೂ ಕೌತುಕವೇ. ಈ ರೀತಿಯಲ್ಲಿ ಪ್ರವೇಶಿಸುವ ಕಾಲಚಕ್ರದ ಚಿತ್ರಣ ಇತ್ತೀಚೆಗೆ ಆಚರಿಸಿದ ಹೊಸವರ್ಷವೆಂಬ ಕಲ್ಪನೆಯನ್ನು ಕೂಡಿಕೊಳ್ಳುತ್ತದೆ. ಚಿಂತನಾ ಪ್ರಧಾನವಾದ ಮನುಷ್ಯನ ಬದುಕು, ರೀತಿ ಈ ನಿಟ್ಟಿನಲ್ಲಿ ಹೇಗೆ? ಎಂಬ ಪ್ರಶ್ನೆಯನ್ನೂ ಎತ್ತಿಕೊಳ್ಳುತ್ತದೆ. ಗತಿಸಿದ ಇತಿಹಾಸದ ಪುಟಗಳು ನಮ್ಮ ಪಾಠ. ಸ್ಥಿತಿ ಗತಿಗಳ ಬೆಳವಣಿಗೆಯನ್ನು ಗಮನಿಸಿ ನಡೆಯಬೇಕು. ವ್ಯಕ್ತಿಯಾಗಿ ಸಾಗುವುದಕ್ಕಿಂತ ಸಮಷ್ಠಿಯಲ್ಲಿ ಹೆಚ್ಚು ಪರಿಣಾಮಕಾರಿ ಎಂಬ ಆಶಯ ಕವಿಯದು. ವ್ಯವಸ್ಥೆ ನಮ್ಮದೇ ಆಗಿದ್ದು ಅದನ್ನು ಬದಲಿಸಬಲ್ಲ, ತಡೆಯುವ ಶಕ್ತಿಯೂ ನಮದೇ. ಒಟ್ಟಾದಲ್ಲಿ ಎಲ್ಲವನ್ನೂ ಎದುರಿಸಬಲ್ಲೆವು ಎಂಬ ಸೂಚನೆಯಿದೆ. ಇತ್ತೀಚಿನ ಜಾಗತಿಕ ಹಾಗೂ ರಾಷ್ಟ್ರೀಯ ವಿದ್ಯಮಾನಗಳ ಹಿನ್ನೆಲೆಯ ಕವಿತೆಯಿದು.

11. ಕುಮೊರ ತೊಲಿಯಲ್ಲೊಂದು ಸುತ್ತು– ಶ್ರೀಮತಿ ರಾಧಿಕಾ ಗುಜ್ಜರ್

ಕವಯಿತ್ರಿ ಅರ್ಥವನ್ನು ಕೊಡದಿದ್ದರೆ ಶೀರ್ಷಿಕೆ ತಿಳಿಯುವುದಿಲ್ಲ. ಕುಂಬಾರ ಬೀದಿಯಲ್ಲೊಂದು ಸುತ್ತು ಎಂದಾಗ ಕೊಂಚ ಕಲ್ಪನೆ ಚಿಗುರುತ್ತದೆ. ಪೂರ್ಣಪಾಠದ ನಂತರ ಅದರ ಪ್ರಸ್ತುತತೆ ತಿಳಿಯುತ್ತದೆ. ಕೇವಲ ವಿಷಯ ಮಾತ್ರವಲ್ಲದೆ ಕವಿ ಪದಗಳಲ್ಲೂ ನಮ್ಮನ್ನು ಯೋಚಿಸುವಂತೆ ಮಾಡುತ್ತಾರೆ. ಒಂದು ಓದಿಗೆ ಅರ್ಥ ಬಿಟ್ಟುಕೊಡದೆ ಮರುಓದಿಗೆ ನೂಕುತ್ತದೆ. ಆರಂಭದ 'ರಜ' ಪದವೇ ಶ್ಲೇಷಾರ್ಥದಲ್ಲಿ ಕವಲು ಚಿಂತನೆಯನ್ನೂಡುತ್ತದೆ. ಅಡಸು, ಅಡಪು, ಉರ, ಊರು, ಉರ್ಜಿತ... ಹೀಗೆ ಕಾವ್ಯ ಹಾಗೂ ಅರ್ಥ ಸೌಂದರ್ಯವನ್ನು ವಿಸ್ತರಿಸುವ ಪದಪ್ರಯೋಗ ಕವಿತೆಯಿಡೀ ಕಾಣುತ್ತದೆ. ಅಲ್ಲಿ ತಯಾರಾಗುವ ದೇವಿಯಮೂರ್ತಿ, ಹಂತಹಂತವಾಗಿ ಅದು ನಿರ್ಮಾಣವಾಗುವ ಪರಿ, ಆ ಮಣ್ಣು, ನಮ್ಮ ಗೌರಿಯಿಂದ ಬಂಗಾಳದ ಕಾಳಿಯಾಗುವ ಪಯಣ... ಹೀಗೆ ಪ್ರತಿಮಾತ್ಮಕವಾಗಿಯೇ ಕವನ ತುಂಬಿಕೊಂಡಿದೆ. ಮತ್ತೆ ಮತ್ತೆ ಪುನರಾವರ್ತನೆಯಾಗುವ ಈ ಕ್ರಿಯೆಯಲ್ಲಿ ಇತಿಹಾಸದ ದುಷ್ಟ–ಶಿಷ್ಟರ ಗೆರೆಗಳನ್ನೂ ಕೊರೆದಿರುವ ಕವನ ಚಿಂತನೆಗೆ ದಾರಿ ಮಾಡಿಕೊಡುತ್ತದೆ.

12. ಡಾ। ದೇಬಾಲಮಿತ್ರ – ಶ್ರೀಮತಿ ನಾಗರತ್ನ ಚಂದ್ರಶೇಖರ

ಇದೊಂದು ವ್ಯಕ್ತಿಚಿತ್ರ. ಕಳೆದ ಶತಮಾನದಲ್ಲಿ ಪುರಾತತ್ವ ಶಾಸ್ತ್ರಜ್ಞೆಯಾಗಿದ್ದ ದೇಬಾಲಮಿತ್ರ ಎಂಬ ಮಹಿಳಾ ಸಾಧಕಿಯದು. ಬಂಗಾಳದ ಈ ದಿಟ್ಟ ಮಹಿಳೆ ಬೆಳೆದ ಬಗೆ, ಮುಟ್ಟಿದ ಎತ್ತರ, ಪಟ್ಟಪಾಡು ಎಲ್ಲದರ ಸೂಕ್ಷ್ಮ ಚಿತ್ರಣ ಇಲ್ಲಿದೆ. ಅಪರೂಪದ್ದೆನಿಸುವ, ಅದರಲ್ಲೂ

ಮಹಿಳೆಯರಿಗೆ ಸವಾಲಾಗಬಲ್ಲ ಆ ವೃತ್ತಿಯಲ್ಲಿ ಅವರು ಮಾದರಿಯಾಗಿ ಬೆಳೆದಿದ್ದು ನಮ್ಮನ್ನು ಮೆಚ್ಚಿಸುತ್ತದೆ. ಉತ್ಖನನಕ್ಕಾಗಿ ಹಲವು ಕಾಲ ಬೇರೆ ಸ್ಥಳಗಳಲ್ಲಿದ್ದು ಅಧ್ಯಯನ ನಡೆಸಿ, ಸಾಕ್ಷಿಗಳನ್ನು ಕಲೆಹಾಕಿ ಊಹೆ ಹಾಗೂ ಪೂರಕ ಮಾಹಿತಿಗಳನ ಲೆಕ್ಕಾಚಾರ ಹಾಕುತ್ತ ತರ್ಕಬದ್ಧ ನಿರ್ಣಯಕ್ಕೆ ಬಂದು ವಿಷಯ ಮಂಡಿಸುವುದು ಏಕಾಗ್ರತೆಯ ಕಾರ್ಯ. ಅದರಲ್ಲಿ ಆಕೆ ಯಶಸ್ವಿಯೂ ಸಹ. ಅನೇಕರಿಗೆ ಸ್ಫೂರ್ತಿಯಾಗ ಬಲ್ಲ ರೀತಿಯಲ್ಲಿ ಅಧಿಕಾರದಲ್ಲೂ ಮೇಲೇರಿ ಆಧಾರವಾಗುತ್ತಾರೆ. ಪುರಾತನ ವಿಗ್ರಹವೊಂದು ತಪ್ಪಿ ವಿದೇಶ ಸೇರಿದ್ದನ್ನು ಪತ್ತೆಹಚ್ಚಿದ್ದಲ್ಲದೆ ಅದು ನಮ್ಮಲ್ಲಿಗೆ ಹಿಂತಿರುಗುವಂತೆ ಮಾಡುವ ದೃಢ ನಿರ್ಧಾರದ ಮನಸ್ಸು ಆಕೆ ಎಷ್ಟು ಛಲಗಾತಿಯೆಂದೂ ನಿರೂಪಿಸುತ್ತದೆ.

13. ಹಸಿದವರ ಅಳಲು –ಶ್ರೀಮತಿ ಕಮಲಾಕ್ಷಿ

ಲಘು ಹರಟೆಯೆಂದು ಕರೆಯಬಹುದಾದ ಬರೆಹ. ಕಾಲ್ಪನಿಕ ಚಿತ್ರಣವೊಂದರ ಮೂಲಕ ಎಳೆಯರಿಗೂ ಪ್ರಿಯವಾಗಬಲ್ಲ ಲೇಖನ. ಇಂದಿನ ಬೆಂಗಳೂರು ಅರಳುತ್ತಿರುವ ಬಗೆ, ಹೊಸ ಬದುಕಿನ ರೀತಿಗಳು ಹಾಗೂ ಪರಿಸರದ ಮೇಲೆ ಅದರ ಪರಿಣಾಮ ಎಲ್ಲ ಸೇರಿ ಈ ಚಿತ್ರಣ ನಿರ್ಮಾಣವಾಗಿದೆ. ಸೊಳ್ಳೆಗಳ ಮೂಲಕ ಇದು ಬಿಂಬಿತವಾಗುತ್ತಿದೆ. ಚಳಿಗಾಲದ ಒಂದು ದಿನ ಸಭೆ ಸೇರಿದ ಸೊಳ್ಳೆಗಳು, ನಮ್ಮಂತೆಯೇ ಅಲ್ಲಿನ ವರ್ತನೆ, ಅಲ್ಲಿನ ಚರ್ಚೆಯಲ್ಲಿ ಅವುಗಳ ಸಂಕಟ, ಪರಿಹಾರದ ಹುಡುಕಾಟ... ಹೀಗೆ ಅಣಕದಂಥಹ ಕಲ್ಪನಾ ಲೋಕವೊಂದು ತೆರೆದುಕೊಂಡು ಸರಸ ಸಂಭಾಷಣೆಗಳಿಂದ ಕಚಗುಳಿಯಿಡುತ್ತದೆ. ನಮ್ಮ ವ್ಯವಸ್ಥೆ ಮತ್ತೊಂದು ಜೀವಿಯ ವ್ಯವಸ್ಥೆಗೆ ಹೇಗೆ ಪೂರಕ-ಮಾರಕವಾಗಿದೆಯೆಂಬ ಊಹೆ ಇಲ್ಲಿ ಹರಡಿದೆ.

14. ನಾಗತ್ತೆಯ ಶಿಶುವಿಹಾರ – ಶ್ರೀ ಗೋಪಿನಾಥ್

ಲಘುಹಾಸ್ಯ ಬರೆಹಗಳಿಗೆ ಹೆಸರಾದವರು ಗೋಪಿನಾಥ್. ಇಲ್ಲೂ ಸಹ ಪಾತ್ರವೊಂದರ ದಡ್ಡತನ ಮತ್ತು ಬುದ್ಧಿವಂತಿಕೆಗಳಿಂದ ಹೇಗೆ ಹಲವು ದಾರಿಗಳೇ ನಿರ್ಮಾಣವಾದ ಕಥೆಯೊಂದನ್ನು ಲಹರಿಯಾಗಿ ಹರಿಸಿದ್ದಾರೆ. ತಮ್ಮ ಸೋದರಮಾವನ ಜೀವನಶೈಲಿ, ಅವರು 'ಪಟಾಯಿಸಿ' ಪಕ್ಕದ ಮನೆಯ ನಾಗತ್ತೆಯವರನ್ನು ಮದುವೆಯಾದ ಪ್ರಸಂಗ, ನಾಗತ್ತೆಯ ತಾತ ಅನಿವಾರ್ಯವಾಗಿ ಒಪ್ಪಬೇಕಾದ ಸ್ಥಿತಿ, ಕೊಟ್ಟ ಕೆಲಸದಲ್ಲಿ ವಿಫಲನಾದ ಗಂಡನ ಬೇಜವಾಬ್ದಾರಿತನ, ಇದಕ್ಕೆ ಪರಿಹಾರ ಕಂಡುಕೊಳ್ಳಲು ಯೋಚಿಸಿದ ಉಪಾಯ ಹಾಗೂ ಅದು ಯಶಸ್ವಿಯಾಗಿ ಇತಿಹಾಸವೇ ನಿರ್ಮಾಣವಾದ ಕಲ್ಪನೆಯನ್ನು ಬಿತ್ತಿದ್ದಾರೆ. ಮುಗ್ಧತೆಯಲ್ಲೂ ಒಂದು ಸಾಹಸ ಅವಿತಿದ್ದು, ಸಮಯ ಬಂದಾಗ ಹೊರಬಂದ ಘಟನೆಯಿದು. ಇಂದು ನಗರದಲ್ಲಿ ಅನಿವಾರ್ಯವೇ ಆಗಿರುವ 'ಶಿಶುವಿಹಾರ' ಎಂಬ ಮಾದರಿ ಯಾವ ಹಿನ್ನೆಲೆಯಲ್ಲಿ ಜನ್ಮತಾಳಿರಬಹುದೆಂಬ ಅಂಶವನ್ನು ದಾಖಲಿಸುವ ಯತ್ನಮಾಡಿದ್ದಾರೆ. ಇತಿಹಾಸದ ಪುಟದಲ್ಲಿ ತಪ್ಪಿಹೋಗುವ ಅನೇಕ ಮೂಲ ಸ್ಫೂರ್ತಿಗಳಲ್ಲಿ ಒಂದಿದು.

15 ಗುರುವಿನ ಮಹಿಮೆ/ ಪರಿಚಿತರು/ ವರುಣನಾಗಮನ–ಶ್ರೀಮತಿ ಪೂರ್ಣಿಮಾ ಭಗವಾನ್

ಸರಾಗವಾಗಿ ಬರೆಯಬಲ್ಲ ಮನಸಿನ ಪೂರ್ಣಿಮಾರವರು ಮೂರು ಪ್ರಸ್ತುತಿಗಳನ್ನು ಮಾಡಿದ್ದಾರೆ. ಗುರುವನ್ನು ಕುರಿತಾದ ಮಂದಾನಿಲ ಚೌಪದಿಯಲ್ಲಿನ ಮೊದಲ ರಚನೆ, ಶಿಷ್ಯನ ಒಳಿತನ್ನೇ ಬಯಸುತ್ತಾ ಪಾಠ ಕಲಿಸುತ್ತಾ ಬದುಕಿನ ಬೆಳಕಾಗುವ 'ಗುರು'ವಿಗೆ ವಂದನೆಯನ್ನು ಸಲ್ಲಿಸುವ ಸಾಲುಗಳು ನಮ್ರತೆಯಿಂದ ಕೂಡಿವೆ. ಚತುರ್ಮಾತ್ರಾ ಲಯದಲ್ಲಿ ಆದಿಪ್ರಾಸವನ್ನು ಹೊಂದಿ ಅಂತ್ಯಪ್ರಾಸವನ್ನೂ ಕೆಲವೆಡೆ ತೋರುತ್ತಾ ಸಾಂಪ್ರದಾಯಿಕ ಶೈಲಿಯಲ್ಲಿ ಕವಿತೆ ಪ್ರಸ್ತುತವಾಗಿದೆ. ಇದೊಂದು ಹಾಡುಗಬ್ಬವೂ ಸಹ.

ಪರಿಚಿತರು- ಒಂದೇ ಚರಣದ ವಾರ್ಧಕಷಟ್ಪದಿ. ಪಂಚಮಾತ್ರಾಗಣದ ಓಟದಲ್ಲಿ ವಿಶೇಷವಾಗಿ ಗುಂಪಿಗೆ ಸಂಬಂಧಿಸಿಯೇ ಬರೆದ ಭಾವ. ದಿನದಿನದ ಸಂಭಾಷಣೆ ಹಾಗೂ ಪ್ರಸ್ತುತಿಗಳಿಂದ ಒಬ್ಬರಿಗೊಬ್ಬರು ಪರಿಚಿತರೂ ಆತ್ಮೀಯರೂ ಆಗುವುದಲ್ಲದೆ ಪರಸ್ಪರ ಮಾರ್ಗದರ್ಶಕರೂ ಆಗುವ ಈ ವಿಶೇಷ ಸಂಬಂಧವನ್ನು ಕುರಿತು ಬರೆದಿರುವ ಕವನ.

ವರುಣನ ಆಗಮನ- ಈ ಕವನ ಐದು ಮಾತ್ರೆಗಳ ಮೂರು ಗಣ ಹಾಗೂ ಮೂರು ಮಾತ್ರೆಯ ನಿಲುಗಡೆಯ ಪದ್ಮಗಣಗಳ ಸಾಲಿನ ಚೌಪದಿ. ಮಳೆಗಾಲದ ಆಗಮನ, ವಿಶೇಷವಾಗಿ ನಗರದಲ್ಲಿ ಅದರಿಂದಾಗುವ ಅನಾಹುತ ಮತ್ತು ಅದರಲ್ಲಿ ನಾಗರಿಕರ ಪಾಲು ಮತ್ತು ಕೈಗೊಳ್ಳಬೇಕಾದ ಪರಿಹಾರ ಕ್ರಮಗಳನ್ನು ಕುರಿತು ಸಾಲುಗಳಿವೆ. ಬೆಳೆಯುವ ಜನಸಂಖ್ಯೆಯ ಬೇಡಿಕೆ ಸುತ್ತಣ ಪರಿಸರದ ಮೇಲೆ ಬೀರುವ

ಪ್ರಭಾವ ಚಿತ್ರಿತವಾಗಿದೆ. ವರ್ಷವರ್ಷವೂ ಪಡುವ ಪಾಡು ಇಲ್ಲಿದೆ. ಮಳೆ ಬೇಕು ಆದರೆ ಅದನ್ನು ತಡೆದುಕೊಳ್ಳುವ ಇಳೆಯೂ ಬೇಕು. ಒಟ್ಟಾರೆ ನೋಡಿಯೋ ಸಾಹಿತ್ಯ ದಾಸೋಹ ಬರೆಹಗಾರರಿಗೆ ಅವಕಾಶವನ್ನು ಕಲ್ಪಿಸುವುದಷ್ಟೇ ಅಲ್ಲದೆ ಹೊಸತನಕ್ಕೆ ದಾರಿಯನ್ನೂ ಮಾಡಿಕೊಡುತ್ತಿದೆ. ಪರಸ್ಪರ ಅರಿತುಕೊಳ್ಳುವ ವೇದಿಕೆಯಾಗಿ ಮಾರ್ಗದರ್ಶನವೂ ಸಿಗುತ್ತಿದೆ. ಬರೆದದ್ದನ್ನು 'ಧ್ವನಿ' ಮೂಲಕ ದಾಟಿಸುವ ಕಲೆ ಕರಗತವಾಗಲೂ ಸಹ ಇಲ್ಲಿ ಕಲಿಕೆಯಿದೆ. ಕೇಳುವ ಸಹನೆಯನ್ನೂ ಕಲಿಸುವ ಗುರುವಾಗಿಯೂ ಇದೆ. ಇದರ ಹಿಂದೆ ಶ್ರಮವಹಿಸಿರುವ ಎಲ್ಲ ಬಂಧುಗಳಿಗೂ ನಮಸ್ಕಾರ. ಇದು ಕೇವಲ ಒಂದು ಓದಿನ ಅನಿಸಿಕೆಯಷ್ಟೇ. ಅವಕಾಶಕ್ಕೆ ಧನ್ಯವಾದ.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 244 ನಡೆದ ದಿನಾಂಕ: 21 ಡಿಸೆಂಬರ್ 2025
ಸಂಚಿಕೆಯ ಬಿಡುಗಡೆ ದಿನಾಂಕ: 18 ಜನವರಿ 2026

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)